DISCUSSION ON FACT FINDING COMMITTEE REPORT.

5 P.M.

*ಶ್ರೀಮತಿ ಬಳ್ಳಾರಿ ಸಿದ್ಧಮ್ಮ (ದಾವಣಗೆರೆ).—ಸ್ವಾಮಿ, ಅಧ್ಯಕ್ಷರೇ, ಶೇಷಾದ್ರಿ ಸಮಿತಿಯವರ ವರದಿಯಮೇಲೆ ಹೋದ ಸಾರಿಯೂ ನಾಲ್ಕು ದಿವಸ ಚರ್ಚೆಯಾಯಿತು. ಈ ಸಾರಿಯೂ ನಾಲ್ಕು ದಿವಸದಿಂದ ಚರ್ಚೆ ನಡೆಯುತ್ತಿದೆ. ಅದನ್ನು ನೋಡಿ ನನ್ನ ಮನಸ್ಸಿಗೆ ಒಂದು ಯೋಚನೆ ಬರುತ್ತಿದೆ. ಏನೆಂದರೆ: ಈ ಬಗ್ಗೆ ಹಿಂದೆಲ್ಲಾ ಜವಾಬ್ದಾರಿಯುತರಾಗಿ ಕೆಲಸ ಮಾಡಿದ ಜನರಲ್ಲಿ ಅರ್ಧ ಜನ ಇಲ್ಲೇ ಇದ್ದಾರೆ ; ನಾನು ಮುಚ್ಚುಮರೆ ಮಾತು ಹೇಳುವುದಿಲ್ಲ ; ಆಗ್ಗೆ ಕರ್ಣಾಟಕ ಏಕೀಕರಣವನ್ನು ಒಪ್ಪಿಕೊಂಡು ಬಹಿರಂಗವಾಗಿ ವೇದಿಕೆಗಳ ಮೇಲೆ ಘೋಷಣೆಗಳನ್ನು ಮಾಡಿಯೂ ಅದೆಲ್ಲವನ್ನೂ ಇಷ್ಟು ಜಾಗ್ರತೆ ಐದಾರು ವರ್ಷದಲ್ಲೇ ಮರೆತುಬಿಟ್ಟರಲ್ಲಾ ಎಂದು ಯೋಚನೆಯಾಗುತ್ತಿದೆ. ಪ್ರತಿಯೊಂದು ಸಂಘ ಸಂಸ್ಥೆಯವರೂ ಈಹೊತ್ತು ದೇಶದ ಅಭಿವೃದ್ಧಿಗಾಗಿ ದೇಶದ ಉದ್ಧಾರಕ್ಕಾಗಿ ಒಮ್ಮತದಿಂದ ಸಹಕರಿಸಿ ಒಂದು ಪ್ರಾಂತ್ಯ ರಚನಾ ಯೋಜನೆಗೆ ಬೆಂಬಲ ಕೊಡುತ್ತಿರುವಾಗ, ಹಿಂದೆ ವಾಗ್ದಾನಮಾಡಿ, ಹೇಳಿದ ಜನರೇ ಅಪಶ್ರುತಿ ಹೇಳುವುದನ್ನು ನೋಡಿದರೆ ನನಗೆ ಬಹಳ ಪಶ್ಚಾತ್ತಾಪವಾಗುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಯಾರಮ್ಮಾ ಅಂಥವರು ?

ಶ್ರೀಮತಿ ಬಳ್ಳಾರಿ ಸಿದ್ಧಮ್ಮ.—ನಮ್ಮವರೇ, ಸ್ವಾಮಿ, ಅವರು ; ನನ್ನ ಅರ್ಧಭಾಗ ; ನನ್ನ ಸಹೋದರರು. ಒಂದೇ ಮನೆತನದಲ್ಲಿ ನಾಲ್ಕು ಜನ ಮಕ್ಕಳು ಹುಟ್ಟುತ್ತಾರೆ. ಒಬ್ಬನು ಸದ್ಗುಣಿಯಾಗಬಹುದು, ಇನ್ನೊಬ್ಬನು ಅಪಮಾರ್ಗ ಹಿಡಿಯಬಹುದು. ಇದು ದೈವಲೀಲೆ. ಆದರೂ ಹೆತ್ತ ತಾಯಿಯು ಎಲ್ಲರನ್ನೂ ಸುಧಾರಿಸಿಕೊಂಡು ಹೋಗಬೇಕಾಗುತ್ತದೆ. ಈ ವರ್ತನೆಗಳಿಗೆ ನಾವು ಆಶ್ಚರ್ಯ ಪಡಬೇಕಾಗಿಲ್ಲ ; ಅದೆಲ್ಲ ಸ್ವಾಭಾವಿಕ. ಇದು 'ಮೋಸ'! ಎಂದು ಮಾತ್ರ ಹೇಳಬಲ್ಲೆ. ಅದಕ್ಕಿಂತ ಹೆಚ್ಚಿನ ಪದಪ್ರಯೋಗ ಮಾಡುವುದಕ್ಕೆ ನನಗೆ ಶಕ್ತಿಯಿಲ್ಲ. ಏಕೆಂದರೆ ಸ್ವಾತಂತ್ರ್ಯ ಸಂಪಾದನೆ ಮಾಡಬೇಕಾದರೆ, ಯಾವ ಉದ್ದೇಶದಿಂದ ಹೋರಾಡಿದೆವು, ಯಾವ ಧ್ಯೇಯವನ್ನಿಟ್ಟುಕೊಂಡು ಆ ಗುರಿಯನ್ನು ಸಾಧಿಸಿದೆವು, ಎಷ್ಟು ಹುಮ್ಮಸ್ಸಿನಿಂದ ಒಂದು ನೀತಿಗೆ ಕಟ್ಟು ಬಿದ್ದು ಮುಂದುವರಿದೆವು ಎಂಬುದನ್ನು ಅವರು ಮರೆತಿದ್ದಾರೆ. ಇವೊತ್ತು ಆ ಹುಮ್ಮಸ್ಸು ಮಾಯವಾಗಿರಬೇಕಾದರೆ ಆಸೆಯಿಂದಲ್ಲದೆ ಮತ್ತೇನು ? ನನಗೇನು ಬೇಕು, ನಮ್ಮ ಜನಾಂಗಕ್ಕೇನುಬೇಕು ಎಂದು ತಕ್ಕಡಿ ಹಿಡಿದುಕೊಂಡು ತೂಕ ನೋಡಿದ ಹಾಗಿದೆ. ಸ್ವಲ್ಪ ವಿಷಯಕ್ಕೆಲ್ಲಾ ಇಂಥ ಯೋಚನೆಗಳು ಬರಕೂಡದು. ಸೃಷ್ಟಿ ಮಾಡುವ ಭಗವಂತನು ಎಲ್ಲರನ್ನೂ ಕಾಪಾಡುತ್ತಾನೆ. ಅಂಥದಕ್ಕೆ ನಾವು ಏನಾದರೂ ಮಾಡುತ್ತೇವೆನ್ನುವುದು ಸರಿಯೇ ? ನಿಮಿತ್ತಮಾತ್ರದವರು ನಾವುಗಳು. ಹೀಗಿರುವಾಗ ಈ ಹೊತ್ತು ನಮ್ಮ ಜೊತೆಯಲ್ಲಿ ಹುಟ್ಟಿ ಬೆಳೆದವರು ಆಡಳಿತ ದೃಷ್ಟಿಯಿಂದ ನಮ್ಮೊಡನೆ ಸೇರಬೇಕೆಂದು ಹೇಳುವಾಗ ಬೇಡವೆಂದು ಹೇಗೆ ಹೇಳುವುದೋ ನನಗಂತೂ ಅರ್ಥವಾಗುತ್ತಿಲ್ಲ. ಅದರಲ್ಲೂ ಕೆಲವರು ಯಾವ ರೀತಿ ಹೇಳಿದರೆಂದರೆ, ಭಿಕ್ಷುಕರು ಬಂದರೆ ಹೋಗಯ್ಯಾ ಎಂದು ಹೇಳುವಂತೆ ಹೇಳಿದ್ದಾರೆ. ಆ ರೀತಿ ಏನೂ ಅವರು ಬೇಡುತ್ತಿಲ್ಲ. ಅಲ್ಲಿ ಆಸ್ಪತ್ರೆಗಳಿಲ್ಲ ಎಂದು ಹೇಳಿದರು. ಆಸ್ಪತ್ರೆಗಳಿಲ್ಲವೆಂದಮೇಲೆ, ಈಗ ನಮ್ಮೆಲ್ಲರ ಎದುರಿನಲ್ಲಿ ಯೋಜನೆಗಳನ್ನು ಹಾಕುತ್ತಿರುವುದೇನು ? ಇಡೀ ದೇಶದ ಚಿತ್ರವನ್ನಿಟ್ಟುಕೊಂಡು ದೇಶವನ್ನು ಸರಿಯಾಗಿ ಕಟ್ಟಬೇಕೆಂದು ಯೋಜನೆ ಹಾಕುತ್ತಿದ್ದೇವೆಯೇ ಹೊರತು ಯಾವ ಒಂದು ಭಾಗವನ್ನೇ ಬೆಳೆಸಬೇಕೆಂದು ಮಾಡುತ್ತಿಲ್ಲ. ಈ ಯೋಜನೆಗಳ ಕಡೆಗೆ ನಮ್ಮ ಸಹೋದರರ ದೃಷ್ಟಿ ಹೋಗಲಿ. ಇನ್ನು ಹತ್ತು ವರ್ಷಗಳು ಹೋದರೆ ಇಂಡಿಯಾ ದೇಶದ ಯಾವುದೊಂದು ಹಳ್ಳಿಯಲ್ಲೂ ಅನ್ನ ಬಟ್ಟೆ ಇಲ್ಲವೆನ್ನುವವರು ಯಾರೂ ಇರುವುದಿಲ್ಲ. ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡು ದೇಶವನ್ನು ಅಭಿವೃದ್ಧಿಗೊಳಿಸಲು ಯೋಚನೆಮಾಡುತ್ತಿದ್ದಾರೆ. ಹೀಗಿರುವಾಗ ನಮ್ಮ ಸಹೋದರರು ಇಲ್ಲಿಗೆ ಬಂದರೆ ಏನೋ ಆಗುತ್ತದೆಂದು ಗಾಬರಿಯೇಕೋ ಗೊತ್ತಿಲ್ಲ. ನಾನು ಈ ರೀತಿ ಮಾತನಾಡಿದರೆ ಸಿದ್ಧಮ್ಮನವರು ಲಿಂಗಾಯಿತರಾದ್ದರಿಂದ ಹೀಗೆ ಮಾತನಾಡಿದರು ಎಂದು ಹೇಳುತ್ತಾರೆ. ಆ ಮಾತು ಸರಿಯಲ್ಲ. ನಾವೂ ಅವರೂ ಒಂದೇ ಕರಳು ಬಳ್ಳಿಯವರು. 300-400 ವರ್ಷಗಳಿಂದ ನಾವೂ ಅವರೂ ಕೊಟ್ಟು ತಂದು ನೆಂಟಸ್ತನ ಬೆಳೆದು ಬಂದಿದೆ. ನಮ್ಮ ಸಹೋದರರ ಕಷ್ಟಸುಖಗಳನ್ನು ನೋಡಬೇಕಾದದ್ದು ಧರ್ಮ. ನಮ್ಮದೂ ಅವರದೂ ಒಂದೇ ಎನ್ನುವುದು - ಸ್ವಾಭಾವಿಕ. ಶ್ರೀ ತಿಮ್ಮಪ್ಪಗೌಡರು ತಮ್ಮ ಬುದ್ಧಿವಂತಿಕೆಯಿಂದ ಯಾವುದಾದರೂ ಹೇಳಿ ಸಭೆಯನ್ನು ಒಪ್ಪಿಸಬಹುದು. ನಾನು ಹಾಗೆ ಒಪ್ಪಿಸುವುದಕ್ಕೆ ನಿಂತಿಲ್ಲ ಮನುಷ್ಯ ಧರ್ಮವೇನೆಂಬುದನ್ನು ಅವರವರ ಹೃದಯ ಒಪ್ಪಿಕೊಂಡರೆ ಸಾಕು. ಮಿಕ್ಕವರನ್ನು ಒಪ್ಪಿಸುವುದೆಲ್ಲಿಂದ ಬಂತು ? ನಿದ್ದೆ ಹತ್ತಿಲ್ಲದಿದ್ದರೂ ಹತ್ತಿದಹಾಗೆ ಸೋಗು ಹಾಕಿಕೊಳ್ಳುವ ಜನರಿಗೆ ಹೇಗೆ ಒಪ್ಪಿಸುವುದಕ್ಕೆ ಸಾಧ್ಯ ? ಒಂದುವೇಳೆ ನಿದ್ದೆ ಹತ್ತಿದ್ದರಾದರೂ ತಮಟೆ ಹೊಡೆದು ಎಬ್ಬಿಸಬಹುದು. ನಮ್ಮ ಮೈಸೂರು ದೇಶದ ಅಭಿವೃದ್ಧಿ ಯೋಜನೆಯಲ್ಲಿ ಒಂದು ದೊಡ್ಡ ವೈಶಿಷ್ಟ್ಯವಿದೆ. ನಿಜವಾಗಿಯೂ ನನಗನ್ನಿಸುತ್ತದೆ, ಇದಕ್ಕೆ ಧಕ್ಕೆ ತಂದರೆ ಇದರ ವೈಶಿಷ್ಟ್ಯ ಉಳಿಯುತ್ತದೆಯೇ ? ಸಂಸ್ಕೃತಿ ಪ್ರಚಾರಕ್ಕೆ ಇವೊತ್ತು ಬೇಕಾದಷ್ಟು ಖರ್ಚುಮಾಡುತ್ತಿದ್ದಾರೆ. ನಮ್ಮ ಒಡನಾಡಿಗಳು ಕೆಲವು ಕಾರಣಗಳಿಂದ ಕೆಲವು ವರ್ಷಗಳು ಭಾಗವಾಗಿದ್ದವರು ಮತ್ತೆ ನಮ್ಮೊಡನೆ ಬರುತ್ತೇವೆಂದು ಹೇಳಿದರೆ ಬರಬೇಡವೆಂದು ಹೇಳುವುದು ಯಾವ ಧರ್ಮ, ಯಾವ ನ್ಯಾಯ ? ಅದು ಸಂಸ್ಕೃತಿಯೇ ? ಹೀಗೆ ಮಾಡಬಾರದು. ನಮ್ಮ ಸಂಸ್ಥಾನದ ಕೀರ್ತಿಗೆ ಕಳಂಕ ತರುವಂತಹದಿದು. ಏನೋ ಹೇಳಿ ನನ್ನನ್ನು ಒಪ್ಪಿಸಬಹುದು. ಆದರೂ ಮೈಸೂರು ಸಂಸ್ಥಾನದವರು ಈ ರೀತಿ ಮಾಡಿದರೆಂದು ಕಳಂಕ ಬರುತ್ತದೆ. ಚರಿತ್ರಕಾರರು ಮುಂದೆ ಖಂಡಿತ ಇದನ್ನು ಬರೆಯುತ್ತಾರೆ. ಅಂಥ ಕಳಂಕ ನಮ್ಮ ದೇಶಕ್ಕೆ ಬರಲಿಕ್ಕೆ ಆಸ್ಪದ ಕೊಡಬೇಡಿರೆಂದು ನಾನು ಬೇಡಿಕೊಳ್ಳುತ್ತೇನೆ. ಒಮ್ಮತವಿಲ್ಲವೆಂದು ಹೇಳಬಹುದು. ಯಾವ ಕಾಲದಲ್ಲಿ ತಾನೆ ಒಮ್ಮತದಿಂದ ದೊಡ್ಡ ಕೆಲಸಕಾರ್ಯಗಳು ಆಗಿವೆ ? ಗಾಂಧಿಟೋಪಿಯವರು ಹಿರದೆ ಆ ಜವಾಬ್ದಾರಿ ಸರ್ಕಾರ ಬರುವುದಕ್ಕೆ ಸ್ವಾತಂತ್ರ್ಯದ ಹೋರಾಟ ನಡೆಸಿದರಲ್ಲಾ, ಅದಕ್ಕೆ ಎಲ್ಲರೂ ಒಪ್ಪಿದ್ದರೇ ? ಆ ಕಾಲದಲ್ಲಿ ಜನರು, ಜವಾಬ್ದಾರಿ ಸರ್ಕಾರವೇ ಬೇಕಾಗಿಲ್ಲ, ಬ್ರಿಟಿಷರೇ ಇರಲಿ ಎಂದು ಹೇಳುವವರಿರಲಿಲ್ಲವೇ ? ಆದ್ದರಿಂದ ಯಾವ ದೊಡ್ಡ ಕೆಲಸಗಳಾಗಬೇಕಾದರೂ ಒಮ್ಮತದಿಂದ ಆಗುವುದಿಲ್ಲ. ಅಲ್ಲದೆ ನಮ್ಮ ಕಾಂಗ್ರೆಸ್ಸಿ

ವರು ಎಲ್ಲರೂ ಹಿಂದೆ ಒಪ್ಪಿದ್ದರು ಈ ತತ್ವಕ್ಕೆ. ವರು ಈಗ ಬದಲಾಗಿದ್ದಾರೆ. ಶ್ರೀ ರಾಮಯ್ಯ ವರು ಹೇಳಿದಹಾಗೆ 'ದುನಿಯಾ ಬದಲ್‌ಗಯಾ' ಗಿದೆ. ಜನ ಹೀಗೆ ಆಗಕೂಡದು. ಅವರೇನೂ ನಾಥರಲ್ಲ, ಅನೀತಿವಂತರಲ್ಲ. ಅವರೂ ನಮ್ಮ ಸರಿ ಮಾನರೆಂದು ಭಾವಿಸಿಕೊಳ್ಳಬಹುದು. ಅವರಲ್ಲೂ ಉತ್ತಮವಾದ ಅನೇಕ ಯೋಜನೆಗಳು ನಡೆಯುತ್ತಿವೆ. ಟಪ್ರಭ; ಮಲ್ಲಪ್ರಭಾ, ಭಾರಿ ಯೋಜನೆಗಳು. ಮಗಿಂತ ಒಳ್ಳೊಳ್ಳೆಯ ಜಮೀನುಗಳಿವೆ. ಅವರೂ ಬೇಕಾದಷ್ಟು ದವಸ ಬೆಳೆಯುತ್ತಿದ್ದಾರೆ. ಆದ್ದರಿಂದ ನೀವು ಹೇಳುವಷ್ಟು ನಿರ್ಗತಿಕರಲ್ಲ ಅವರು. ಒಂದು ವೇಳೆ ಇದ್ದರೂ, ಈಗ ನಮಗೆ ಕಷ್ಟವಿಲ್ಲ. ದೇಶಕ್ಕಾಗಿ ಹೋರಾಡಬೇಕಾದರೆ ಕಷ್ಟವಿತ್ತು. ಅವರೂ, ನಾವು ಜವಾಬ್ದಾರಿ ಸರ್ಕಾರ ಕಾಣುತ್ತೇವೆಯೋ ನಮ್ಮ ಸಹೋದರರು ಮಂತ್ರಿಗಳಾಗುತ್ತಾರೆಯೋ ಎಂದು ಕಾದಿದ್ದರು. ಆದರೆ, ಈಗ ಇನ್ನೂ ಅವರ ಸ್ಥಿತಿ ಬದಲಾವಣೆಯಾಗಿಲ್ಲ, ಮುಂದಾದರೂ ಬದಲಾವಣೆ ಯಾದೀತೇ ಎಂದು ಆಶೆಯಿಂದಿದ್ದಾರೆ. ಆದ್ದರಿಂದ ಒಳ್ಳೆಯ ಹೃದಯದಿಂದ ಇದನ್ನು ಆಗಮಾಡಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ನಾನು ಇನ್ನು ಹೆಚ್ಚಿಗೆ ಮಾತನಾಡುವುದಿಲ್ಲ. ಕೆಲವು ಜನ ಹೇಳಿದರು, ಮೈಸೂರಿನಲ್ಲಿ ಬಹಳ ಜನ ವಿರೋಧವಾಗಿದ್ದಾರೆ ಎಂದು. ಅದು ಸರಿಯಾದ ಮಾತಲ್ಲ. ಏಕೆಂದರೆ, ಸರ್ವಪಕ್ಷ ಸಮ್ಮೇಳನವೆಂದು ಹಿಂದೆ ಅರಸೀಕೆರೆಯಲ್ಲಿ ಕರೆದಿದ್ದೆವು; ಅದಕ್ಕೆ ನಾನೇ ಅಧ್ಯಕ್ಷತೆ ವಹಿಸಿದ್ದೆ. ಆಗ ಜನರ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ಹೇಳಿ ಎಲ್ಲಾ ಡಿಸ್ಟ್ರಿಕ್ಟ್ ಗಳಲ್ಲಿಯೂ ತಿರುಗಿ ನೋಡಿದ್ದೇವೆ. ಬೆಂಗಳೂರು, ಮೈಸೂರು ಮಾತ್ರ ಉಳಿದಿತ್ತು. ಆ ಕಾಲದಲ್ಲಿ ಬೋರಣ್ಣಗೌಡರೂ ನಮ್ಮ ಜೊತೆಯಲ್ಲೇ ಬಂದಿದ್ದರು. ಆಗಲೇ ಬೇಕಾದಷ್ಟು ಜನ ಪ್ರೋತ್ಸಾಹ ಬೆಂಬಲ ಗಳನ್ನು ಕೊಟ್ಟರೆಂಬುದು ಅವರಿಗೂ ಗೊತ್ತಿದೆ. ಸತ್ಯಾಗ್ರಹ-ಹೂಡಿ, ಇಷ್ಟಿಷ್ಟು-ಜನರನ್ನು ಕಳುಹಿಸು ತ್ತೇವೆಂದು ಅನೇಕರು ಹೇಳಿದ್ದಾರೆ. ನಾವೇನೇ, ಸತ್ಯಾಗ್ರಹ ಬೇಕಾಗಿಲ್ಲ, ಹಾಗೆ ಮಾಡಬಾರದು ಎಂದು ಸಮಾಧಾನಮಾಡಿ tour ಮಾಡಿಕೊಂಡು ಬಂದಿದ್ದೇವೆ. ಆದ್ದರಿಂದ, ಜನಾಭಿಪ್ರಾಯ ಅವರು ಹೇಳಿದಂತಿಲ್ಲ. ಅಲ್ಲದೆ, ಸುಮ್ಮನೆ ನಾಲ್ಕು ಜನರು ಹೇಳುವುದರಿಂದ ಇದು ಆಗುವುದಿಲ್ಲ. ಕೆಲವು ವಿಷಯ ಗಳು ಬೇಕು ಎಂದರೂ ಬರುವುದಿಲ್ಲ, ಬೇಡ ಎಂದರೂ ಬಿಡುವುದಿಲ್ಲ. ಜವಾಬ್ದಾರಿ ಸರ್ಕಾರ ತಾನೇ ಹೇಗೆ ಬಂತು? ಬ್ರಿಟಿಷರು ಏನು ಹೇಳುತ್ತಿದ್ದರು? ತಮ್ಮ ರಾಜ್ಯದಲ್ಲಿ ಸೂರ್ಯ ಮುಳುಗುವುದಿಲ್ಲವೆಂದು ಹೇಳು ತ್ತಿದ್ದರು. ಅಂಥಾದ್ದು ಈಗ ಏನಾಯಿತು? ಇದೆಲ್ಲಾ ಕಾಲಮಹಿಮೆ.

ಒಟ್ಟಿನಲ್ಲಿ ನನ್ನ ಅಭಿಪ್ರಾಯದಲ್ಲಿ ಇವೊತ್ತು ಏಕೀ ಕರಣ ಆಗಬೇಕು ಎಂದು ಹೇಳುತ್ತೇನೆ. ಎರಡು ಕರ್ಣಾಟಕಗಳಾಗಕೂಡದು. ಏಕೆಂದರೆ, ಅವರೇ ಬೇರೆ ಇರಲಿ, ನಾವೇ ಬೇರೆ ಇರೋಣವೆಂದರೆ ಆಡಳಿತ ದೃಷ್ಟಿಯಿಂದ ಖರ್ಚುವೆಚ್ಚಗಳು ಜಾಸ್ತಿಯಾಗುತ್ತವೆ. ಈ ದೃಷ್ಟಿಯಿಂದ ಏಕೀಕರಣವಾಗಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿ ಬಂಡೆ).—ಅಧ್ಯಕ್ಷರೇ, ಇದುವರೆಗೂ ಈ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರ ವರದಿಯಮೇಲೆ ಮಾತ ನಾಡಿದವರಿಂದ ಮೂರು ವಿಧವಾದ ಅಭಿಪ್ರಾಯಗಳು ಬಂದಿವೆ. ಮೈಸೂರನ್ನೊಳಗೊಂಡ ಕರ್ಣಾಟಕ ಮಾಡುವುದು ಒಂದು; ಎರಡು ಕನ್ನಡ ಪ್ರಾಂತ್ಯ ಗಳನ್ನು ಮಾಡುವುದು ಇನ್ನೊಂದು. ಮೈಸೂರು ಸಂಸ್ಥಾನ ಈಗಿರುವ ರೀತಿಯಲ್ಲಿಯೇ ಇರಲಿ ಎಂಬುದು ಇನ್ನೊಂದು. ನನ್ನ ಅಭಿಪ್ರಾಯದಲ್ಲಿ ಇವು ಮೂರೂ ಅವಿವೇಕವಾದ ಅಭಿಪ್ರಾಗಳೆಂದೇ ಹೇಳ ಬೇಕಾಗಿದೆ. ಏಕೆಂದರೆ, ಹಿಂದೆ ಕಾರಣಾಂತರದಿಂದ ಎಷ್ಟೋ ಯುದ್ಧಗಳು ನಡೆದು ಈಸ್ಟ್ ಇಂಡಿಯಾ ಕಂಪೆನಿಯವರಾಗಿ ಬ್ರಿಟಿಷರು ಆಡಳಿತ ಮಾಡುವ ವರೆಗೂ ಅನೇಕಸಾರಿ ಅವರ ಇಷ್ಟಾನುಸಾರ ಪ್ರಾಂತ್ಯ ಗಳ ವಿಂಗಡಣೆ ಮಾಡಿಕೊಂಡು ಬಂದರು. ಒರಿಸ್ಸಾ Statesನ್ನು ಎಷ್ಟು hap-hazard ಆಗಿ ಮಾಡಿದೆ ಯೆಂದು ಮಾನ್ಯಸದಸ್ಯರೇ ತಿಳಿಸಿದ್ದಾರೆ. ಆ ಕಾಲ ದಲ್ಲಿ ಪ್ರತಿಯೊಂದು ಪಕ್ಷದವರೂ States Re-organisation ಆಗಬೇಕು, linguistic ಪ್ರಕಾರವೇ ವಿಂಗಡಣೆಯಾಗಬೇಕೆಂದು ಹೇಳಿದರು; ಅಲ್ಲದೆ 1945 ರಲ್ಲಿ ಹೇಗಿತ್ತೊ ಈಗ ಹಾಗಿಲ್ಲ; 1930, 1935 ರಲ್ಲಿದ್ದ ಪರಿಸ್ಥಿತಿ ಹೀಗಿರಲಿಲ್ಲ, ಎಷ್ಟೋ ಬದಲಾವಣೆಗಳಾಗಿವೆ. Linguistic ಪ್ರಕಾರ ಏಕೆ ಪ್ರಾಂತ್ಯ ವಿಂಗಡಣೆ ಮಾಡಬೇಕೆಂದು ಹೇಳಿದರೆ, ಒಂದು ಜನಾಂಗ ಯಾವ ಭಾಷೆಯಲ್ಲಿ ಮಾತನಾಡುತ್ತಾರೋ ಆ ಭಾಷೆಯಲ್ಲಿ ಸರ್ಕಾರಕ್ಕೆ ಕೋರಿಕೆಯನ್ನು ಸಲ್ಲಿಸಿದರೆ ಆ ಆಫೀಸರು ಗಳಿಗೆ ಅರ್ಥವಾಗುತ್ತದೆಯೇ ಹೊರತು ಬೇರೆ ಭಾಷೆ ಯಲ್ಲಿ ಅರ್ಥವಾಗುವುದಿಲ್ಲ. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕಾದರೂ ಮಾತೃಭಾಷೆಯಲ್ಲಿ ಮಾಡಿಸಿದರೆ ಏನಾದರೂ ಅನುಕೂಲವಾಗುತ್ತದೆ ಅಷ್ಟೆ. ಹಾಗಿಲ್ಲದೆ, ಮಾತೃಭಾಷೆಯೊಂದಾಗಿ ವಿದ್ಯಾಭ್ಯಾಸ ಪರಭಾಷೆಯ ಲ್ಲಾದರೆ, 5-6 ವರ್ಷಗಳ ವಿದ್ಯಾಭ್ಯಾಸದಲ್ಲಿ ಒಂದೆ ರಡು ವರ್ಷ ಅನ್ಯಭಾಷೆಯನ್ನು ತಿಳಿದುಕೊಳ್ಳುವುದ ರಲ್ಲೇ ಕಳೆದು ಹೋಗುತ್ತದೆ. ಈ ದೃಷ್ಟಿಯಿಂದ, ದೇಶ ಉನ್ನತಸ್ಥಿತಿಗೆ ಬರಬೇಕಾದರೆ ಭಾಷಾ ಸ್ವಾತಂತ್ರ್ಯ, ಆಡಳಿತ ಸ್ವಾತಂತ್ರ್ಯವಿರಬೇಕಾದದ್ದು ಅವಶ್ಯಕ—ಆಗಲೇ ಮಾನವನ ಮನಸ್ಸು ವಿಕಾಸಗೊ ಳ್ಳಲು ಒಳ್ಳೆಯ ವಾತಾವರಣವಿದ್ದಂತಾಗುತ್ತದೆ. ಈ ಉದ್ದೇಶದಿಂದ ಭಾಷಾವಾರು ಪ್ರಾಂತ್ಯ ವಿಂಗಡಣೆ ಮಾಡಬೇಕೆಂದು ದೊಡ್ಡ ದೊಡ್ಡ ವ್ಯಕ್ತಿಗಳು, ಮಹಾತ್ಮಾ ಗಾಂಧಿಯವರೂ ಕೂಡ ಹೋರಾಡಿದರು. ಆದರೆ ಬರಬರುತ್ತಾ ಸಂಕುಚಿತ ಭಾವನೆ ಬೆಳೆಯುತ್ತಾ ಬಂದು administrative convenienceಗೆ ಸರಿ ಯಾಗಿ ವಿಂಗಡಣೆಗಳಾಗಬೇಕೆಂದು ಹೇಳುತ್ತಲಿ ದ್ದಾರೆ. ಪಲ್ಲಕ್ಕಿಯಮೇಲೆ ಹೋಗಬೇಕೆಂದರೆ, ಪಲ್ಲಕ್ಕಿ ಹೊರುವವರು ಬೇಕೇ ಬೇಕು; ಈ ದೃಷ್ಟಿಯಿಂದ ಪಲ್ಲಕ್ಕಿ ಹೊರುವವರನ್ನು ಕೈಗೆ ಹಾಕಿಕೊಳ್ಳೋಣ ಎನ್ನುವ ರೀತಿಯಲ್ಲಿ ಈಗ ಈ ಪ್ರಾಂತ್ಯ ರಚನೆ ಮುಂದುವರಿಯು ತ್ತದೆಯೇ ಹೊರತು ನಿಜವಾಗಿ ಯಾವರೀತಿ ಹೋಗಬೇ ಕೆಂಬುದನ್ನು ನೋಡಿ ಮಾಡುತ್ತಿಲ್ಲ. ಸಾಮಾನ್ಯವಾಗಿ ಆಂಧ್ರರ ಚರಿತ್ರೆಯೇನೆಂಬುದು ಎಲ್ಲರಿಗೂ ಗೊತ್ತಿದೆ. ಡಾಕ್ಟರುಗಳಿಗಂತೂ ಅದರ ಪರಿಚಯ ಇನ್ನೂ ಜಾಸ್ತಿ. ಏಕೆಂದರೆ ಆಂಧ್ರ ಬುಲೆಟಿನ್ ಅವರು ನೋಡುತ್ತಿರು ತ್ತಾರೆ. ಮಾನ್ಯ ಇಮಾಂ ಸಾಹೇಬರಿಗೆ ಅದರ ವಿಷಯ ಏನೇನೂ ಗೊತ್ತಿಲ್ಲ. 7 ಶತಮಾನಗಳ ಹಿಂದಿನ ಚರಿತ್ರೆ ಅದಕ್ಕಿದೆ. ಶಾತವಾಹನನೆಂಬವನು ಶಕಪುರುಷ. ಚಂದ್ರವಳ್ಳಿಯ ಹತ್ತಿರ ಶಾತವಾಹನನ ಕಾಲದ ನಾಣ್ಯ ಗಳು ಕೂಡ ಸಿಕ್ಕಿವೆ. ಈ ರೀತಿಯಾಗಿ ಆಂಧ್ರಭಾಷೆಗೆ ಪುರಾತನ ಸಂಸ್ಕೃತಿಯಿದೆ; ಅದರದೇ ಒಂದು ಚರಿತ್ರೆಯಿದೆ, ಪುರಾಣಗಳ ಕಾಲದಿಂದಾಗಿ ಹರಿಶ್ಚಂದ್ರ, ಶುನಶ್ಶೇಫಾದಿಗಳ ಕಾಲ ಸಂಸ್ಕೃ ತಿಯ ಹಿನ್ನೆಲೆ ಆಂಧ್ರರಿಗೆ ಇದೆ. ಹೀಗಿರುವಾಗ

(ಶ್ರೀ ಬಿ. ವಿ. ನಾರಾಯಣರೆಡ್ಡಿ.)

ಅವರಿಗೂ ಸಹ ಅವರ ಒಂದು ಸಂಸ್ಕೃತಿ, ಅವರ ಒಂದು ಕಲ್ಚರ್ ಬೆಳೆದುಕೊಂಡು ಸಾವಿರಾರು ವರ್ಷಗಳಿಂದಲೂ ಬಂದಿರುತ್ತದೆ. ಆದುದರಿಂದ ಮಾನ್ಯ ಸದಸ್ಯರು ಅವರ ವಿಚಾರದಲ್ಲಿ ಹೀಗೆಲ್ಲಾ ಹೇಳಬಾರದು. ನಿಮ್ಮ ಕನ್ನಡ ಚರಿತ್ರೆಯಲ್ಲಿ ಕನ್ನಡಿಗರು ಹೇಗೆ ಒಂದು ಸಂಪ್ರದಾಯಬೆಳೆಸಿಕೊಂಡು ಬಂದಿದ್ದಾರೋ ಹಾಗೆ ಅದೇ ನಿಮ್ಮ ಕನ್ನಡ ಚರಿತ್ರೆಯಲ್ಲೇ ಈ ಆಂಧ್ರರ ವಿಚಾರದಲ್ಲಿ ಶಾತವಾಹನನು ಶಕಪುರುಷನಾಗಿ ಬಹಳ ಹಿಂದಿನಿಂದಲೂ ಒಂದು ಆಂಧ್ರರ ಪ್ರತ್ಯೇಕ ಸಂಪ್ರದಾಯವನ್ನು ಅನಾದಿಯಿಂದಲೂ ಬೆಳಸಿಕೊಂಡು ಬಂದಿದ್ದಾನೆ. ಇದೆಲ್ಲಾ ವಿಚಾರಗಳೂ ನಿಮ್ಮ ಕನ್ನಡ ಚರಿತ್ರೆಗಳನ್ನೇ ಓದಿದರೆ ಚೆನ್ನಾಗಿ ಗೊತ್ತಾಗುತ್ತದೆ. ನಿಮ್ಮ ಕನ್ನಡ ಶಕ ಪುರುಷರೂ ಕೂಡ ಈ ಆಂಧ್ರರಲ್ಲಿ ಇಂಟರ್‌ಕನೆಕ್ಷನ್ ಮಾಡಿಕೊಂಡು ಆಂಧ್ರ ಮತದ ಕುಮಾರರೆಡ್ಡಿ ಎಂಬತಕ್ಕವರಿಗೆ ಮಗಳನ್ನು ಕೊಟ್ಟು ಲಗ್ನಮಾಡಿದ್ದರೆಂಬ ವಿಚಾರ ಕೂಡ ಇದೆ. ಈಗಲೂ ನಮ್ಮ ಮನೆತನದ ಹೆಸರು 'ರೆಡ್ಡಿ' ಗಳು ಎಂದು ಇದೆ. ಆಗ ನಮ್ಮ ರಾಜ್ಯ ಈಗಿನ ಮಾಗಡಿವರೆಗೂ ಇತ್ತು. ಆಗ ನಮ್ಮವರು ಇಲ್ಲಿಯವರೊಂದಿಗೆ ಲಗ್ನ, ಮದುವೆ, ಮುಂಜಿ ಇತ್ಯಾದಿಗಳನ್ನೆಲ್ಲಾ ಮಾಡಿಕೊಂಡು ತಮ್ಮದೇ ಆದಂಥ ಒಂದು ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿರುತ್ತಾರೆ. ಆಗ ಅವರು ಈ ಲಿಂಗ್‌ವಿಸ್ಟಿಕ್ ವಿಚಾರದಲ್ಲಿ village as a unit ಮಾಡಿಕೊಂಡು ಲಿಂಗ್‌ವಿಸ್ಟಿಕ್ ಪ್ರಾವಿನ್ಸ್‌ಮಾಡಿ ಎಂದು ಹೇಳಿದ್ದಾರೆ. ಹೀಗೆಲ್ಲಾ ಇರುವಾಗ ತಾವು ಈ ಆಂಧ್ರರ ವಿಚಾರದಲ್ಲಿ ಹೀಗೆಲ್ಲಾ ಹೇಳಬಾರದು. ಇಲ್ಲಿಯತನಕ ನೀವು ಯಾವುದನ್ನು ಹಿಂದೂಸ್ಥಾನ ಎಂದು ಕರೆಯುತ್ತಿದ್ದಿರೋ ಅದರಲ್ಲೇ ಈ ದಿವಸ ಪಾಕೀಸ್ಥಾನ ಕೂಡ ಆಗಿದೆ. ಅದೇ ರೀತಿ ನೀವು ಯಾವುದನ್ನು ಕನ್ನಡ ಪ್ರಾಂತ್ಯಎಂದು ಕರೆಯುತ್ತೀರೋ ಅದನ್ನೇ ನಾವು ಆಂಧ್ರಪ್ರಾಂತ್ಯ ಎಂದು ಕರೆಯುತ್ತೇವೆ. ಆದರೆ ನಮ್ಮ ಶ್ರೀ ಇಮಾಂ ಸಾಹೇಬರು ಹೇಳಿರುವುದನ್ನು ನೋಡಿದರೆ ನನಗೆ ಸಂಕಟವೂ ಬರುತ್ತದೆ, ನಗುವೂ ಬರುತ್ತದೆ, ಹಾಗೆ ಹೇಳಿದ್ದಾರೆ: ಅವರು ಏನು ಹೇಳಿದ್ದಾರೆಂದರೆ: "ತಾವು ಈ ಮೈಸೂರು ಸಂಸ್ಥಾನದಲ್ಲಿ ವಿಲೇಜ್ ಯೂನಿಟ್ಟಾಗಿ ತೆಗೆದುಕೊಂಡರೆ $13\frac{1}{2}$ ಲಕ್ಷಕ್ಕೆ ಮೇಲ್ಪಟ್ಟ ಜನಗಳು ಆಂಧ್ರನಾಡಿಗೆ ಸೇರಬೇಕಾಗುತ್ತದೆ. ನಮಗೆ 5 ಜಿಲ್ಲೆಗಳಲ್ಲಿಯೂ ಆಂಧ್ರಕ್ಕೆ ಸೇರಬೇಕಾದ ಪ್ರದೇಶ ಇದೆ. ಅಂದರೆ ತಾವು ಚಿತ್ತೂರು, ಅನಂತಪುರದಿಂದ ಉದ್ದಕ್ಕೂ ಒಂದು ಗೆರೆಯನ್ನು ಈ ತುಮಕೂರು, ಬೆಂಗಳೂರು ಮತ್ತು ಕೋಲಾರದವರೆಗೆ ಎಳೆದರೆ ಆಗ ನಮ್ಮ ಆಂಧ್ರರ ಪ್ರಜಾಸಂಖ್ಯೆ ಶೇಕಡ 70 ರಷ್ಟು 80ರಷ್ಟು ಆಗುತ್ತದೆ. ಈಗ ಕೋಲಾರದಲ್ಲಿ ಶೇಕಡ 50ರಷ್ಟು ತೆಲುಗು ಮಾತನಾಡತಕ್ಕವರಿರುತ್ತಾರೆ. ಹೀಗೆ ತಾವು ಭಾಷಾವಾರ್ ಪ್ರಾಂತ್ಯ ವಿಂಗಡಿಸತಕ್ಕ ಬಗ್ಗೆ village as a unit ಆಗಿ ತೆಗೆದುಕೊಳ್ಳಿ ಅಂದರೆ ಆಗುವುದಿಲ್ಲ" ಎಂದು ಇವರು ಹೇಳಿದ್ದಾರೆ. ನೀವು 1799ರಿಂದ ಎಷ್ಟು ಕಷ್ಟಬದ್ದಿದ್ದೀರೋ ಆಂಧ್ರರಾದ ನಾವೂ ಕೂಡ ಅಷ್ಟೇಕಷ್ಟಬದ್ದಿದ್ದೇವೆ. ಈ ದಿವಸ ನಾನು ಈ ಸಭೆಯಲ್ಲಿ ತೆಲುಗಿನಲ್ಲೇನಾದರೂ ಮಾತನಾಡಿಬಿಟ್ಟರೆ ಆ ಸ್ಟೆನೋಗ್ರಾಫರಿಗೆ ಬರೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇಲ್ಲಿ ಹೀಗೆ ನಾವೀದಿವಸ ಒಂದು ಕ್ಲೆರಿಕಲ್ ಜಾಬಿನ ಆಸೆಗೋಸ್ಕರವಾಗಿ ಕನ್ನಡವನ್ನು ಕಲಿಯಬೇಕಾಗಿ ಬಂದಿದೆ. ಈ ದಿವಸ ನೀವುಗಳೆಲ್ಲಾ, ಇತರ ಆ ಕನ್ನಡ ಭಾಗಗಳಲ್ಲಿರತಕ್ಕಂಥ ಕನ್ನಡ ಜನರು ಏಳಿಗೆಗೆ ಬರಲಿಲ್ಲ, ಅವರಿಗೆ ಸಾಕಷ್ಟು ಶಾಲೆಗಳಿಲ್ಲ, ಅವರು ಬಹಳ ಕಷ್ಟದ ಅವಸ್ಥೆಯಲ್ಲಿದ್ದಾರೆ ಎಂದು ಏನೊಂದು ವಾದ ಎತ್ತಿ ಅವರೆಲ್ಲರನ್ನೂ ಈ ಮೈಸೂರಿಗೆ ಸೇರಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರೋ ಹಾಗೆ ನಾವೂ ಕೂಡ ನಮ್ಮ ಅಭಿವೃದ್ಧಿಗೋಸ್ಕರವಾಗಿ ನಾವು ಆಂಧ್ರಕ್ಕೆ ಹೋಗುತ್ತೇವೆ ಎಂತ ಹೇಳಿದರೆ ಅದಕ್ಕೆ ನೀವೇಕೆ ಅಡ್ಡಿ ಬರುತ್ತೀರಿ ? ಈಗತಾನೆ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಕೆಳಮಟ್ಟದಲ್ಲಿರತಕ್ಕಂಥ ನಮ್ಮ ಸಹೋದರರನ್ನು ನಾವು ಆ ಕೆಳಮಟ್ಟದಲ್ಲೇ ಬಿಡಬಾರದು ಮೇಲಕ್ಕೆ ಎತ್ತಬೇಕು ಎಂತ ಹೇಳಿದರು. ಅದು ನಿಜ. "ದೇಶಮು ಅಂಟೆ ಮಟ್ಟಿಗಾದು, ದೇಶಮು ಅಂಟೆ ಮನುಷ್ಯಲು' ಅನ್ನಿ ಚೆಪ್ಪಿಂಡಾರು. ಅದೇ ರೀತಿ ಈಗ ತಾವೆಲ್ಲರೂ ಆ ಹೊರಗಡೆಯ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸಿಕೊಂಡರೆ ಅಲ್ಲಿ ಬೇಕಾದಷ್ಟು ಖನಿಜಸಂಪತ್ತಿದೆ, ಅರಣ್ಯ ಸಂಪತ್ತಿದೆ, ಇವುಗಳಿಂದ ಮನುಷ್ಯನ ಆರ್ಥಿಕ, ಸಾಮಾಜಿಕ ಜೀವನವನ್ನು ಅಭಿವೃದ್ಧಿಗೊಳಿಸಬಹುದು, ಮಾನವನ ಜೀವನವನ್ನು ಹೀಗೆಲ್ಲಾ ವಿಕಾಸಗೊಳಿಸಬಹುದೆಂತ ಹೇಳುತ್ತಿದ್ದುದೂ ಅಲ್ಲದೆ ನಮ್ಮೆಲ್ಲರ ಬಾಯಿಮುಚ್ಚಿಸಲು ಇದೊಂದು ಒಳ್ಳೆ ಅಡ್ಮಿನಿಸ್ಟ್ರೇಟೀವ್ ಯೂನಿಟ್ ಆಗುತ್ತೆಂದು ಹೇಳುತ್ತಿದ್ದಾರೆ. ನಾವು ನಮ್ಮ ಅಭಿವೃದ್ಧಿಯಾಗಲಿಲ್ಲ ಎಂದು 150 ವರ್ಷಗಳಿಂದಲೂ ಒಂದೇ ಸಮನಾಗಿ ಹೊಡೆದುಕೊಂಡು ಸಾಯುವ ಸ್ಥಿತಿಗೆ ಬಂದಿದ್ದೇವೆ. ಈಗ ನಮ್ಮ ಶ್ರೀ ನಾಗಯ್ಯರೆಡ್ಡಿಯವರೂ ಬೆಂಗಳೂರಿನಲ್ಲೇ ಇದ್ದಾರೆ. ಆದರೆ ಏನು ಮಾಡುವುದು ? ಈ ದಿವಸ ಈ ಬೆಂಗಳೂರು ಸಿಟಿಯಲ್ಲಿ ಕನ್ನಡ ಮಾತನಾಡುವವರಿಗಿಂತಲೂ ಅಧಿಕವಾಗಿ ಆಂಧ್ರಭಾಷೆ ಮತ್ತು ತಮಿಳು ಭಾಷೆ ಆಡತಕ್ಕಂಥ ಜನಗಳ ಇಲ್ಲಿದ್ದಾರೆ. ನಾಳೆ ಬೌಂಡರಿಕಮಿಷನ್ ಬಂದನಂತರ ಈ ವಿಚಾರಗಳೆಲ್ಲಾ ತೀರ್ಮಾನವಾಗಬೇಕಾಗಿದೆ. ಹಾಗಿರುವಾಗ ಕಲವು ಮಾನ್ಯ ಸದಸ್ಯರು ಇದು ಹೀಗೇ ಆಗುತ್ತದೆ, ಅದು ಹಾಗೇ ಆಗುತ್ತದೆ ಎಂದು ಹೇಳುವುದು ಶುದ್ಧ ತಪ್ಪು. ರಿ ಈ ದಿವಸವೇ ಅವರು ಅವರ ಒಂದು ಗುರಿಯನ್ನು ಮುಟ್ಟಿದ ಹಾಗೆ ಮಾತನಾಡಿರುತ್ತಾರೆ. ಹಾಗೆ ನೀವೆಲ್ಲರೂ ಎಷ್ಟು ಅಭಿಮಾನದಿಂದ ಮಾತನಾಡಿದ್ದೀರೋ ನಾನೂ ಕೂಡ ಅಷ್ಟೇ ಅಭಿಮಾನದಿಂದ ಹೇಳುವುದೇನೆಂದರೆ— ಯಾವುದು ತೆಲುಗರ ದೇಶಕ್ಕೆ ಸೇರಬೇಕು ಯಾವುದು ಬೇಡ ಎನ್ನತಕ್ಕದ್ದನ್ನು ನಾವೆಲ್ಲರೂ ಆ ಬೌಂಡರಿಕಮಿಷನವರಿಗೆ ಬಿಡೋಣ ಮತ್ತು ಆಂಧ್ರರಾಜ್ಯ ಅಖಂಡ ಆಗಬೇಕೆಂದ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಗಂಗಾನಾಯ್ಕ (ಶಿಕಾರಿಪುರ-ಸೊರಬ ಅನುಸೂಚಿತ ಜಾತಿಗಳು).—ಸ್ವಾಮಿ, ಇಲ್ಲಿಯವರೆಗೆ ಮಾತನಾಡಿರತಕ್ಕಂಥ ಅನೇಕ ಮಾನ್ಯ ಸದಸ್ಯರಲ್ಲಿ ಕೆಲವರು ಈ ಏಕೀಕರಣದ ವಿಷಯದಲ್ಲಿ ಇದು ಕೂಡಲೇ ಆಗಬೇಕೆಂದೂ, ಕೆಲವರು ಇದು ಸದ್ಯಕ್ಕೆ ಆಗುವುದು ಬೇಡವೆಂದೂ, ಕೆಲವರು ಎರಡು ಕರ್ಣಾಟಕಗಳಾಗಲಿ ಎಂದೂ ಹೇಳಿದ್ದಾರೆ. ಆದರೆ ಈ ಬಗ್ಗೆ ನಾನು ಇಷ್ಟನ್ನೇ ಹೇಳುತ್ತೇನೆ. ಒಂದೇ ಒಂದು ಅಖಂಡ ಕರ್ಣಾಟಕವಾಗಬೇಕು. ಈಗಾಗಲೇ ನವಮಾಸ ತುಂಬಿ ಗಂಡು ಕೂಸಿನ ಜನನಕ್ಕೆ ಕಾಲ ಸನ್ನಿಹಿತವಾಗುತ್ತಾ ಬಂದಿದೆ. ಇದು ಆಗಿಯೇ ಆಗುತ್ತದೆಂದು ಹೇಳಿ ನನ್ನ ಮಾತುಗಳನ್ನು ಪೂರೈಸುತ್ತೇನೆ.

* ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).—ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಗಾಗಿ ಬಂದು ನಿಂತಿರತಕ್ಕಂಥ ವಿಷಯವು ಒಂದು ದೊಡ್ಡ ಜಟಿಲವಾ

ದಂಥ ಸಮಸ್ಯೆಯನ್ನೊಳಗೊಂಡಂಥ ವಿಷಯವಾಗಿದೆ. ಇದರಿಂದ ಮುಂದೆ ದೇಶದಲ್ಲಿ ಏನಾಗಬಹುದು, ಇದು ಮುಂದಕ್ಕೆ ಯಾವರೂಪ ತಾಳುತ್ತದೆ, ಜನರಲ್ಲಿ ಮುಂದೆ ಎಷ್ಟರಮಟ್ಟಿಗೆ ಇದು ಎಂತಹ ಕಳವಳಕ್ಕೆದಾರಿ ಮಾಡಿಕೊಡುತ್ತದೆ ಎನ್ನತಕ್ಕಂಥ ಈ ಯಾವ ಒಂದು ವಿಚಾರದಲ್ಲೂ ನಾನು ಇನ್ನೂ ನನ್ನ ಒಂದು ನಿರ್ದಿಷ್ಟ ವಾದ ಅಭಿಪ್ರಾಯನ್ನು ಇಟ್ಟುಕೊಂಡಿಲ್ಲ. ಆದರೆ ಇಂದು ಹೇಳುತ್ತಿರುವಂಥ ಈ ಏಕೀಕರಣವಾದಲ್ಲಿ ಮುಂದೆ ದೇಶದಲ್ಲಿ ಏನೊಂದು ಕಳವಳ ಉದ್ಭವವಾಗುತ್ತದೆ ಎನ್ನತಕ್ಕ ವಿಚಾರದಲ್ಲಿ ನಾನೀಗ ಸದ್ಯಕ್ಕೆ ಏನನ್ನೂ ಮಾತನಾಡಲು ಇಷ್ಟಪಡುವುದಿಲ್ಲ. ಈ ವಿಷಯದಲ್ಲಿ ನನಗೊಂದು ನಿರ್ದಿಷ್ಟವಾದ ಅಭಿಪ್ರಾಯ ವಿರುವುದಿಲ್ಲ. ಈಗಾಗಲೇ ನನ್ನ ಹಲವಾರು ಸ್ನೇಹಿತರು ಯಾವುದೋ ಒಂದು ದೃಷ್ಟಿಯನ್ನಿಟ್ಟುಕೊಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ಈಗ ತಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ನಮ್ಮ ನಮ್ಮ ವೈಯಕ್ತಿಕ ಅಭಿಪ್ರಾಯಗಳೇನೇ ಇರಲಿ ಅವುಗಳನ್ನು ಈ ಸಂದರ್ಭದಲ್ಲಿ ಇಲ್ಲಿ ವ್ಯಕ್ತಪಡಿಸುವುದು ಅಷ್ಟು ಯುಕ್ತವಾದದ್ದಲ್ಲವೆಂದು ನಾನು ತಿಳಿದಿದ್ದೇನೆ. ನಾವೀ ದಿವಸ ಇಲ್ಲಿಗೆ ಯಾರಿಂದ ಚುನಾಯಿತರಾಗಿ ಬಂದು ಕುಳಿತಿದ್ದೇವೋ ಮತ್ತು ಯಾರ ಕಷ್ಟಸುಖಗಳನ್ನು ರಕ್ಷಣೆ ಮಾಡುತ್ತೇವೆಂದು ಜವಾಬ್ದಾರಿಯನ್ನು ಹೊತ್ತಿದ್ದೇವೋ ಅಂಥವರ ಹಿತಸಾಧನೆಯ ಬಗ್ಗೆ ನಾನೀಗ ಏನನ್ನೂ ಮಾತನಾಡದೆ ಸುಮ್ಮನೆ ಕುಳಿತುಬಿಟ್ಟರೆ ಆಗ ಇದು ನನ್ನ ಬೇಜಾವಾಬ್ದಾರಿ ಆದೀತೆಂಬ ಶಂಕೆಯಿಂದಲೂ ಮತ್ತು ನಾನು ನನ್ನ ಕರ್ತವ್ಯದಲ್ಲಿ ಲೋಪಮಾಡಬಾರದೆಂಬ ಉದ್ದೇಶದಿಂದಲೂ ಎರಡು ಮಾತುಗಳನ್ನಾಡಲು ತಮ್ಮ ಮುಂದೆ ನಿಂತಿದ್ದೇನೆ.

ಈಗಾಗಲೇ ಮಾತನಾಡಿದಂಥ ಸದಸ್ಯರಲ್ಲಿ ಕೆಲವರು ನಮ್ಮ ಮೈಸೂರು ಚರಿತ್ರೆಯನ್ನು ಸಂಪೂರ್ಣವಾಗಿ ವಿವರಣೆಮಾಡುತ್ತ ಹಿಂದಿದ್ದಂಥ ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ರಾಜ್ಯ ಹೇಗಿತ್ತು, ಎಲ್ಲಿಯವರೆಗೂ ವಿಸ್ತರಿಸಲ್ಪಟ್ಟಿತ್ತು, ಈ ಅಖಂಡ ಮೈಸೂರಿನ ಕೀರ್ತಿ ಎಲ್ಲಿಯುವರೆಗೂ ಹಬ್ಬಿತ್ತು, ಎನ್ನತಕ್ಕಂಥ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ಆದರೆ ಹಿಂದೆ ಇದು ಅಷ್ಟೇನೂ ಒಂದು ದೊಡ್ಡ ರಾಜ್ಯವಾಗಿರಲಿಲ್ಲ. ಹಿಂದಿನ ದಿವಸಗಳಲ್ಲಿ ಇದರ ಕಾರ್ಯಕ್ಷೇತ್ರ ಬಹಳ ಚಿಕ್ಕದಾಗಿತ್ತು. ಅಷ್ಟು ಹೆಚ್ಚಿನ ಜನಸಂಖ್ಯೆ ಇಲ್ಲದಿದ್ದಾಗ್ಯೂ ಹಿಂದಿನವರು ತಮ್ಮ ಒಂದು ಹೆಮ್ಮೆಗೋಸ್ಕರವಾಗಿ ರಾಜ್ಯವನ್ನು ಅವರೇನೂ ಹೆಚ್ಚಿಸುತ್ತಾ ಹೋಗಲಿಲ್ಲ. ಆದಾಗ್ಯೂ ಕೆಲವರು ತಮ್ಮ ಬಾಹುಬಲದಮೇಲೆ ಹೆಚ್ಚು ವಿಸ್ತೀರ್ಣವಾಗಿರತಕ್ಕ ರಾಜ್ಯಗಳನ್ನು ಕಟ್ಟಿದ್ದಾಗ್ಯೂ ಅವರು ಜನರ ಹಿತಸಾಧನೆಗಾಗಿ ಹಾಗೇನೂ ಮಾಡಲಿಲ್ಲ ಎಂದು ಹೇಳಬೇಕಾಗಿದೆ. ಹಿಂದಿನವರು ಅವರವರ ಸಿಂಹಾಸನವನ್ನು ಅವರು ಉಳಿಸಿಕೊಳ್ಳಬೇಕಾಗಿದ್ದರೆ ಅವರ ಹಿಡಿತಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಉಳಿಸಿಕೊಳ್ಳಲು ಪ್ರಯತ್ನ ಮಾಡಿದರೇ ವಿನಾ ಅವರ ಕಾರ್ಯಕ್ಷೇತ್ರವನ್ನು ಬಹಳ ವಿಶಾಲ ಗೊಳಿಸಬೇಕೆಂದೇನೂ ಅವರು ಮಾಡಲಿಲ್ಲ. ಶ್ರೀ ಕೆ. ಪಟ್ಟಾಭಿರಾಮರ್ಯರವರಿಗೆ ಸರ್ವೋದಯದ ವಿಚಾರದಲ್ಲಿ ಸಂಪೂರ್ಣ ನಂಬಿಕೆ ಇದೆ. ಅದರ ತತ್ತ್ವಗಳ ಬಗ್ಗೆ ನಂಬಿಕೆ ಇಟ್ಟುಕೊಂಡಿರತಕ್ಕಂಥವರಲ್ಲಿ ಇವರೂ ಒಬ್ಬರು. ಈ ತತ್ತ್ವಗಳ ಆಧಾರದಮೇಲೆ ಒಂದು ದೇಶಾಭಿವೃದ್ಧಿ ಆಗಬೇಕಾದರೆ ದೇಶ ಯಾವ ರೀತಿ ಇರಬೇಕು, ಅದು ಯಾವ ಆಧಾರಗಳ ಮೇಲೆ ಪುನರ್ವಿಂಗಡಣೆ ಆಗಬೇಕು ಎನ್ನತಕ್ಕಂಥ ವಿಚಾರಗಳಲ್ಲಿ ಅಚಲವಾದಂಥ ನಂಬಿಕೆಯನ್ನು ಯಾರಾರು ಇಟ್ಟುಕೊಂಡಿದ್ದಾರೋ ಅಂಥವರ ಪೈಕಿ ಶ್ರೀ ಕೆ. ಪಟ್ಟಾಭಿರಾಮರ್ಯರವರೂ ಒಬ್ಬರಾಗಿದ್ದಾರೆ. ಹೀಗೆ ಒಂದು ಖಚಿತವಾದ ಅಭಿಪ್ರಾಯವನ್ನು ಉಳ್ಳವರೆಲ್ಲರೂ ದೇಶದಲ್ಲಿ ಈ ಆಡಳಿತ ಕೇಂದ್ರೀಕೃತವಾಗಬಾರದೆಂದೂ, ಹಾಗೆ ವಿಕೇಂದ್ರಿಕರಣ ಮಾಡಿದಾಗಲೇ ಆ ಸರ್ವೋದಯ ತತ್ವಗಳ ಪ್ರಕಾರ ದೇಶಗಳನ್ನ ಒಂದು ಸುಖರಾಜ್ಯವನ್ನಾಗಿ ಕಟ್ಟಲು ಸಾಧ್ಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೀಗೆ ಆ ಸರ್ವೋದಯದ ತತ್ವಗಳನ್ನು ನಂಬಿರತಕ್ಕವರು ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ಈ ಅಖಂಡ ಕರ್ಣಾಟಕವೇನೂ ಅಂಥ ಒಂದು ದೊಡ್ಡ ರಾಜ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನಾವೀಗ ಪ್ರಸ್ತಾಪ ಮಾಡುತ್ತಿರುವುದು ನೂರಾರು ಚದರ ಮೈಲಿಗಳವರೆಗೆ ನಮ್ಮ ರಾಜ್ಯವನ್ನು ವಿಸ್ತಾರ ಮಾಡೋಣ ಎಂದು. ಆದರೆ ಇಂಥ ಒಂದು ದೊಡ್ಡ ರಾಜ್ಯವನ್ನು ಸ್ಥಾಪನೆಮಾಡಲು ಸಾಧ್ಯವೇ ಎನ್ನುವುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ.

5-30 P.M.

ಟಿಪ್ಪುಸುಲ್ತಾನ್ ಕಾಲದಲ್ಲಿ ಶ್ರೀರಂಗಪಟ್ಟಣ ರಾಜಧಾನಿ ಆಗಿದ್ದಾಗ್ಗೆ ನೂರಾರು ಮೈಲಿಗಳವರೆಗೂ ರಾಜ್ಯ ವಿಸ್ತಾರ ಆಗಿದ್ದು ಅದನ್ನು ಆಳುತ್ತಿದ್ದರು ಎಂದು ಹೇಳಿದರು. ನಾನು ಅದನ್ನು ಚರಿತ್ರೆಯಲ್ಲಿ ಓದಿದ್ದು ನಿಜ. ಆದರೆ N.E.S. ಬ್ಲಾಕ್ಸ್ ಪ್ರಾರಂಭ ಮಾಡಬೇಕು, Five-year plan ಮಾಡಬೇಕು, ದೇಶದ ಪ್ರಗತಿಯನ್ನು ಸಾಧಿಸಬೇಕು, ದೇಶದ ಸರ್ವತೋಮುಖ ಏಳಿಗೆಗೆ ಸಾಧನೆ ಮಾಡಬೇಕು ಎಂದು ಯಾವ ರಾಜನೇ ಆಗಲೀ, ಯಾವ ಸರ್ಕಾರವೇ ಆಗಲೀ, ಯಾವ ಸಂಸ್ಥಾನಾಧಿಪತಿಯೇ ಆಗಲೀ ಶ್ರಮಿಸಿದ್ದು ನಾ—ಕಾಣೆ;— ಅದಕಲ್ಲೂ ಟಿಪ್ಪುಸುಲ್ತಾನ್ ಕಾಲದಲ್ಲಿ ಈ ತರಹ ಯಾವ ಸ್ಕೀಂ ಮಾಡಿದ್ದೂ ನನಗೆ ಗೊತ್ತಿಲ್ಲ. ಟಿಪ್ಪುಸುಲ್ತಾನ್ ಕಾಲದಲ್ಲಿ ರಾಜ್ಯಭಾರ ಮಾಡಿದ ತರಹವೇ ಬೇರೆ, ಈಗ ನಮ್ಮ ಮುಂದೆ ಇರುವ ರಾಜ್ಯಭಾರವೇ ಬೇರೆ. ಈಗ ಅವಿದ್ಯಾವಂತರನ್ನು ಚಾವಟಿಯಿಂದ ಹೊಡೆದು ವಿದ್ಯಾವಂತರನ್ನಾಗಿಮಾಡುವ ಕಾಲ ಬಂದಿದೆ. ಹಿಂದೆ ಉಪಾಧ್ಯಾಯರು ಬೆತ್ತದಿಂದ ಹೊಡೆದು ಪಾಠ ಕಲಿಸುತ್ತಿದ್ದರು, ನಮಗೆ ಪಾಠ ಚೆನ್ನಾಗಿ ಬರುತ್ತಿತ್ತು. ಅಂತಹಕಾಲ ಬರುತ್ತದೆ. ಜವಾಬ್ದಾರಿ ಸರ್ಕಾರ ಬಂದಿರುವ ಕಾಲದಲ್ಲಿ ಇಲ್ಲದ ಸಲ್ಲದ ವಿಚಾರಗಳನ್ನು ವಿಸ್ತಾರ ಮಾಡಿಕೊಂಡು ಹೋದರೆ ನಿರ್ದಿಷ್ಟವಾದ ಕಾಲದಲ್ಲಿ ನಾವು ನಮ್ಮ ಮುಂದೆ ಇರತಕ್ಕ ಗುರಿಯನ್ನು ಸಾಧಿಸುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕು. ಇನ್ನೊಂದು ನಿರ್ವಿವಾದವಾದ ವಿಚಾರ ಏನೆಂದರೆ, ಮೈಸೂರು ಮುಂದಕ್ಕೆ ಬಂದಿದೆ ಮತ್ತು ಕೆಲವು ಕರ್ಣಾಟಕದ ಭಾಗಗಳು ಹಿಂದುಳಿದಿವೆ. ಹಿಂದುಳಿದ ಪ್ರಾಂತಗಳು ಹಿಂದೆಯೇ ಇರಲಿ, ಮುಂದೆ ಇರುವವರ ಸೌಕರ್ಯಗಳಿಗೆ ಅಡ್ಡಿ ಬರುವುದು ಸರಿ ಎನ್ನುವ ವ್ಯಕ್ತಿ ನಾನಲ್ಲ. ಮುಂದೆ ಹೋಗಿರುವವರ ಕರ್ತವ್ಯ ಹಿಂದುಳಿದಿರುವವರನ್ನು ತಮ್ಮ ಜೊತೆಯಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗುವುದೇ ಆಗಿದೆ. ಆಗ ಅವರು ಮುಂದೆ ಬಂದಿದ್ದಕ್ಕೆ ಸಾರ್ಥಕವಾಗುತ್ತದೆ. ನಮಗೆ ಅನುಕೂಲವಾಗಿದೆ. ಬೇರೆಯವರಿಗೆ ಬೇಡ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಅವರು ಹಿಂದುಳಿದಿದ್ದರೆ ಅವರನ್ನು ನಮ್ಮ ಜೊತೆಗೆ ಸೇರಿಸಿಕೊಳ್ಳೋಣ ಎಂದರೆ ಮುಂದುವರಿದಿದ್ದವರಿಗೆ ಅತೃಪ್ತಿ ಆಗುತ್ತದೆ. ಈ

(ಶ್ರೀ ಬಿ. ವೈ. ನೀಲೇಗೌಡ.)

ಅತೃಪ್ತಿಯೂ ಇಬ್ಬರಲ್ಲಿಯಲ್ಲ ಉಂಟಾಗದಂತೆ ನೋಡಬೇಕು. ಇಂಡಿಯಾ ದೇಶದ ಇತರ ಭಾಗಗಳನ್ನು ಗಣನೆಗೆ ತೆಗೆದುಕೊಂಡರೆ ನಾವು ಬಹಳ ವೇಗವಾಗಿ ಹೋಗುತ್ತಿದ್ದೇವೆ. ಇಂತಹ ವೇಗದಲ್ಲಿ ಮುಂದುವರಿದು ಹೋಗಬೇಕಾದರೆ ಇಂಥಿಂಥಾದ್ದೇ ಮಾಡಬೇಕು ಎಂದು ನಮ್ಮ ಮುಂದೆ ಇಟ್ಟುಕೊಂಡಿದ್ದೇವೆ. ಅವರೂ ನಮ್ಮ ಜೊತೆಯಲ್ಲಿ ಬರಬೇಕಾದರೆ ನಿರ್ದಿಷ್ಟವಾದ ಗುರಿಯಿಟ್ಟುಕೊಂಡಿರಬೇಕು. ಅವರ ಜೊತೆಯಲ್ಲಿ ಸೇರಬೇಕಾದರೆ ನಾವು ಮುಂದುವರಿಯಬೇಕೆಂಬ ದೃಷ್ಟಿ ಇಟ್ಟುಕೊಂಡಿದ್ದೇವೆ. ನಮ್ಮಲ್ಲಿ ಖೋತಾ ಬಡ್ಜೆಟ್ ಇದೆ ಎಂಬುದನ್ನು ಎರಡು ಕಡೆ ವಾದ ಮಾಡುವವರು ಹೇಳುತ್ತಾರೆ. ಆದ್ದರಿಂದ ಅವರು ಬಂದು ಸೇರಿದರೆ ಹಣಕಾಸಿನ ಮುಗ್ಗಟ್ಟು ಜಾಸ್ತಿಯಾಗುತ್ತದೆ. ಈಗ ಯಾವ ವೇಗದಲ್ಲಿ ಮುಂದುವರಿಯುತ್ತಿದ್ದೇವೆಯೋ, ಅಷ್ಟೇ ವೇಗದಲ್ಲಿ ಪ್ರಗತಿ ಸಾಧನೆ ಮಾಡುವುದಕ್ಕಾಗುವುದಿಲ್ಲ ಎಂದು ಎರಡು ಪಕ್ಷದವರೂ ಒಪ್ಪಿಕೊಂಡಿರುತ್ತಾರೆ. ಒಂದು ಪಕ್ಷದವರು ಇಂಡಿಯಾ ದೇಶ ಒಂದೇ ಆಗಿರುವಾಗ ಇಂಡಿಯಾ ದೇಶವನ್ನೆಲ್ಲಾ ಒಂದೇ ಮಟ್ಟಕ್ಕೆ ತರಬೇಕೆಂದು ನಿರ್ಧರಿಸಿಕೊಂಡಿರುವಾಗ ಜೊತೆಯಲ್ಲಿ ಇದ್ದರೂ ಅಥವಾ ನಾವು ಬೇರೆಕಡೆ ಇದ್ದರೂ, ಜವಾಬ್ದಾರಿ ಎಲ್ಲರಮೇಲೂ ಇದೆ. ಆದ್ದರಿಂದ ಅವರು ನಮ್ಮ ಜೊತೆಗೆ ಬರಲಿ ಎಂದು ಹೇಳುತ್ತೇನೆ. ಅವರು ಹಿಂದುಳಿದಿರುವವರನ್ನು ತೆಗೆದುಕೊಂಡರೆ, ನಮ್ಮ ವೇಗಕ್ಕೆ ಅಡ್ಡಿ ಆಗುತ್ತದೆ ಎಂದು ಅತೃಪ್ತಿ ಸೂಚಿಸುತ್ತಾರೆ. ಹಾಗೆ ಎರಡು ವಾದಗಳಲ್ಲಿಯೂ ಅತೃಪ್ತಿಪಡತಕ್ಕ ಅಂಶಗಳು ಸೇರಿವೆ. ದೇಶದಲ್ಲಿ ಅತೃಪ್ತಿಯಿಂದ ಜೀವನ ಮಾಡುವುದಕ್ಕೆ ಬದಲು, ಅವರೂ ಬದುಕಲಿ, ನಾವೂ ಬದುಕೋಣ ಎನ್ನುವ ಮಾರ್ಗವನ್ನು ಅನುಸರಿಸಬೇಕು. ಒಬ್ಬರು ಲೋಯರ್ ಸೆಕೆಂಡರಿಯಲ್ಲಿ, ಇನ್ನೊಬ್ಬರು ಎಸ್.ಎಸ್.ಎಲ್.ಸಿ.ಯಲ್ಲಿ, ಮತ್ತೊಬ್ಬರು, ಬಿ.ಎ.ಯಲ್ಲಿ ಓದುತ್ತಿದ್ದಾರೆ ಎನ್ನೋಣ. ಈ ಮೂವರಿಗೂ ಏಕಕಾಲದಲ್ಲಿ ಪಾಠ ಹೇಳುವುದಕ್ಕಾಗುವುದಿಲ್ಲ. ಅಂತೆಯೇ ಎಲ್ಲರನ್ನೂ ಕಟ್ಟಿಕೊಂಡು ಒಂದು ಅಂತಸ್ತಿನ ಮತ್ತು ಒಂದು ಮಟ್ಟದ ರಾಜ್ಯವನ್ನು ಕಟ್ಟುತ್ತೇವೆಂದರೆ, ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ administrative unitನ್ನು ತೀರ್ಮಾನ ಮಾಡುವಾಗ ಕೇವಲ ಪ್ರಜಾಸಂಖ್ಯೆ ಮತ್ತು ವಿಸ್ತೀರ್ಣದಮೇಲೆ ಪ್ರಾಂತಗಳನ್ನು ಮಾಡಬಾರದು. ಸರ್ಕಾರದ ಗುರಿಯೇನಿದೆ, ಸರ್ಕಾರದ ಕಾರ್ಯಕ್ಷೇತ್ರ ಏನಿದೆ, ಸರ್ಕಾರದ ಜವಾಬ್ದಾರಿ ಏನಿದೆ ಎಂಬುದನ್ನೆಲ್ಲಾ ಗಮನಿಸಿ ನಮ್ಮ ಗುರಿಯನ್ನು ಸಾಧಿಸಬೇಕಾದರೆ ಎಷ್ಟು ಚಿಕ್ಕದಾಗಿದ್ದರೆ ಅಷ್ಟು ಸುಲಭದಲ್ಲಿ ಸಾಧಿಸಬಹುದೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕು. ಶ್ರೀ ಕೆ. ಪಟ್ಟಾಭಿರಾಮನ್‌ರವರು ಈ ಭಾಷೆಯ ಆಧಾರದ ಮೇಲೆ ಪುನರ್‌ವಿಂಗಡಣೆ ಮಾಡಿದರೆ ಕೋಲಾರ ಡಿಸ್ಟ್ರಿಕ್ಟನ್ನು ಏನು ಮಾಡುತ್ತೀರಿ ಎಂದು ಕೇಳಿದರು. ಭಾಷಾವಾರು ಪ್ರಾಂತ್ಯಗಳನ್ನು ಮಾಡುವ ತತ್ವವನ್ನು ಒಪ್ಪಿಕೊಳ್ಳುವುದಾದರೆ, ಆ ತತ್ತ್ವಕ್ಕೆ ಅನುಸಾರವಾಗಿ ಈ ವಿಚಾರದಲ್ಲಿಯೂ ನಡೆದುಕೊಳ್ಳಬೇಕೆಂದು ಶ್ರೀ ಚನ್ನಬಸಪ್ಪನವರು ಹೇಳಿದಾಗ ನನ್ನ ಮನಸ್ಸು ಬಹಳ ನೋಯಿತು. ಶ್ರೀ ಪಟ್ಟಾಭಿರಾಮನ್‌ರವರು ತೆಲುಗು ರಾಜ್ಯದಲ್ಲಿ ಹುಟ್ಟಿದವರಾದರೂ ಕನ್ನಡ ಭಾಷೆಯಲ್ಲಿ ಪ್ರಭಾವ ಶಾಲಿಗಳಾದವರು. Though Sri Pattabhiraman was born in Telugu place, he became a master in Kannada language. His speech was so effective that it opened our eyes. He was one of those leaders who created patriotism in the minds of so-called Kannada People. Whether a man who has created such a history in Kannada language has got to be condemned as a non-Kannada speaking person and sent out is a question which burns our hearts.

ಕನ್ನಡ ಭಾಷೆಯನ್ನು ಕಲಿತು ತಮ್ಮ ಕನ್ನಡ ಭಾಷೆ ಪ್ರಭಾವವನ್ನು ಬೀರಿ ಜನರ ಕಣ್ಣು ತೆರೆದು ತೋರಿಸಿ ತ್ಯಾಗಮಾಡಿದ ಶ್ರೀ ಪಟ್ಟಾಭಿರಾಮನ್‌ರವರನ್ನು ನೀವು ಕನ್ನಡಿಗರಲ್ಲ, ನೀವು ಹೋಗಿ ಎನ್ನಬೇಕಾದರೆ ನಮ್ಮ ಮನಸ್ಸಿನಲ್ಲಿ ಯಾವರೀತಿ ಆಗುತ್ತದೆ?

Sri J. MOHAMED IMAM.—I have been claiming that they are hundred percent Kannadigas. ಅವರು ಇರಬೇಕು ಎಂದು ಹೇಳುತ್ತಾ ಇದ್ದೇವೆ, ಹೋಗಿ ಎಂದು ಹೇಳುತ್ತಾ ಇಲ್ಲ. ಅವರನ್ನು condemn ಮಾಡುತ್ತಾ ಇಲ್ಲ.

ಶ್ರೀ ಬಿ. ವೈ. ನೀಲೇಗೌಡ.—ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ಪ್ರಾಂತ್ಯಗಳನ್ನು ಮಾಡಿದರೆ ತೆಲುಗು ಮಾತನಾಡತಕ್ಕ ಜನರಿರುವ ಕೋಲಾರ ಡಿಸ್ಟ್ರಿಕ್ಟನ್ನು ಏನುಮಾಡುತ್ತೀರಿ ಎಂದು ಕೇಳಿದ್ದಕ್ಕೆ ಒಬ್ಬರೇ ಒಬ್ಬರು ಅವರು ನಮ್ಮನ್ನು ಬಿಟ್ಟುಹೋಗಬಹುದು ಎಂದು ಉತ್ತರ ಕೊಟ್ಟರು. ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಶ್ರೀ ನಾಗಯ್ಯರೆಡ್ಡಿ, ಶ್ರೀ ಚಂಗಲರಾಯರೆಡ್ಡಿ ಮುಂತಾದವರು ಕನ್ನಡ ಪರಿಣತರಲ್ಲವೇ? ನಾನು ವೈಯಕ್ತಿಕವಾಗಿ ಏನೂ ಹೇಳುತ್ತಾ ಇಲ್ಲ. ನಮ್ಮೊಡನೆ ನಿಂತು, ಬೆಂದು ಕಷ್ಟಪಟ್ಟು ಕೊನೆಯಲ್ಲಿ ನಾವು ಸುಖವಾಗಿ ಊಟಮಾಡುವ ಕಾಲದಲ್ಲಿ ಅವರನ್ನು ಹೊರಡಿ ಎಂದು ಹೇಳುವುದು ಸರಿಯಲ್ಲ. ಈ ದೃಷ್ಟಿಯಿಂದ ರಾಜ್ಯವನ್ನು ಚಿಕ್ಕದಾಗಿಟ್ಟುಕೊಂಡರೆ ನಮ್ಮ ಪ್ರಗತಿಯನ್ನು ಸಾಧಿಸುವುದಕ್ಕೆ ಸುಲಭವಾಗುತ್ತದೆ. ಪ್ರಾಂತ್ಯಗಳನ್ನು ಪುನರ್‌ವಿಂಗಡಣೆ ಮಾಡುವಾಗ Administrative convenience ಪ್ರಾಧಾನ್ಯವಾಗಿಟ್ಟುಕೊಂಡು ಯಾವುದಾದರೂ ಸನ್ನಿವೇಶದಲ್ಲಿ ಸುಲಭವಾಗಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಿದ್ದರೆ ಆಗ ಭಾಷೆಯನ್ನು ಬೇಕಾದರೆ ಆಧಾರವಾಗಿ ಇಟ್ಟುಕೊಳ್ಳಿ. ಮೈಸೂರು ದೇಶ ಇದ್ದಹಾಗೆ ಇಟ್ಟುಕೊಂಡು ಇತರ ಕನ್ನಡಿಗರು ಒಂದು ಪ್ರಾಂತ್ಯವನ್ನು ಮಾಡಿಕೊಂಡರೆ ನಮ್ಮ ಅಡ್ಡಿ ಇರುವುದಿಲ್ಲ, ಅವರಿಗೆ ಏನೂ ತೊಂದರೆಯಾಗುವುದಿಲ್ಲ ಎಂದು ಹೇಳುತ್ತೇನೆ. ನನ್ನ ವೈಯಕ್ತಿಕ ಅಭಿಪ್ರಾಯದಿಂದ ಹೇಳುವುದಾದರೆ ದೇಶ ವಿಶಾಲವಾದರೆ, ಕೇಸುಗಳು ಹೆಚ್ಚುತ್ತವೆ. ನಾನು ಲಾಯರಾಗಿರುವುದರಿಂದ ನನಗೆ ಹೆಚ್ಚಿಗೆ ಪ್ರಯೋಜನವಾಗುತ್ತದೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರಿಗೆ ಅದರಿಂದ ಪ್ರಯೋಜನವಾಗುವುದಿಲ್ಲ. ನನ್ನ ಕ್ಷೇತ್ರದೃಷ್ಟಿ ಹೇಳುವುದಾದರೆ ನನ್ನ ಕ್ಷೇತ್ರದ ಜನರು ಇದಕ್ಕೆ ಬಹಳ ವಿರೋಧವಾಗಿದ್ದಾರೆ. ನಮ್ಮನ್ನು ಐದು ವರ್ಷಗಳಿಗೊಮ್ಮೆ ಚುನಾಯಿಸಿ ಇಲ್ಲಿಗೆ ಕಳುಹಿಸುತ್ತಾರೆ. ಈ ಐದು ವರ್ಷಗಳಲ್ಲಿ ಏನೇನು ಮಾಡಬೇಕು ಎಂದು ನಮಗೆ ನಿರ್ದಿಷ್ಟವಾಗಿ ಸೂಚನೆಗಳನ್ನು ಕೊಡದೇ ಇದ್ದರೂ ಈ ವಿಚಾರದಲ್ಲಿ ಅನೇಕ ಸಂಪ್ರದಾಯಗಳಿವೆ. ಇಂಗ್ಲೆಂಡ್ ದೇಶದಲ್ಲಿ ಯಾವುದಾದರೂ ಹೊಸತತ್ತ್ವವನ್ನು ತರಬೇಕಾದರೆ ಅದನ್ನು, ಚುನಾವಣೆ ಕಾಲದಲ್ಲಿ ಮ್ಯಾನಿಫೆಸ್ಟೋನಲ್ಲಿ ಹಾಕಿಕೊಳ್ಳುತ್ತಾರೆ. ಲೇಬರ್ ಪಾರ್ಟಿಯವರು

ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಿದಾಗ ಒಂದು ನಿರ್ದಿಷ್ಟವಾದ ತತ್ವವನ್ನು ಇಟ್ಟುಕೊಂಡು ರಾಷ್ಟ್ರೀಕರಣ ಮಾಡಿದರು. ಅವನ್ನು ಬದಲಾಯಿಸಬೇಕಾದರೆ, ಪುನಃ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ನಮೂದುಮಾಡಿ ಬದಲಾಯಿಸಿದರು. ಇದು ಈಗಿನ ಜನಾಂಗದ ಭವಿಷ್ಯ ಮಾತ್ರವಲ್ಲ, ಭಾವೀ ಜನಾಂಗದ ಭವಿಷ್ಯವನ್ನು ರೂಪಿಸುವಂತಹುದು. ಅದಕ್ಕೆ ನಮಗೆ ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲೀ ಅಧಿಕಾರ ಇಲ್ಲದೇ ಇರುವಾಗ ಮೈಸೂರಿನ ವೈಶಿಷ್ಟ್ಯವನ್ನು ಬದಲಾಯಿಸುವುದು ಧರ್ಮವಲ್ಲ ಎಂದು ಹೇಳುತ್ತೇನೆ. ನಾನು ಎರಡು ಕರ್ಣಾಟಕಗಳಾಗಬೇಕೆಂಬುದನ್ನು ಒಪ್ಪಿ ನನ್ನ ಭಾಷಣವನ್ನು ಮುಗಿಸುತ್ತೇನೆ.

* ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ ಅನುಸೂಚಿತ ಜಾತಿಗಳು).— ನಾನು ಈ ಸಮಯದಲ್ಲಿ ಖಚಿತವಾಗಿ ಹೇಳಬೇಕಾದರೆ ಕನ್ನಡನಾಡು ಆಗಬೇಕು. ಇದೇ ಕಾಂಗ್ರೆಸ್ಸಿನ ಗುರಿ. ಬೇಗನೇ ಕರ್ಣಾಟಕ ಪ್ರಾಂತ ರಚನೆಯಾಗಲಿ ಎಂದು ಹಾರೈಸುತ್ತೇನೆ.

* ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).— ಶೇಷಾದ್ರಿ ಸಮಿತಿ ಅಂಕಿ ಅಂಶಗಳ ವಿಷಯವನ್ನು ನಾವು ಚರ್ಚೆಗೆ ತೆಗೆದುಕೊಂಡು ಕೊನೆಗೆ ಬರುತ್ತಾ ಬರುತ್ತಾ ಅಂಕಿಅಂಶಗಳ ವಿವರಗಳಿಗೆ ಯಾರೂ ಹೋಗದೆ ಇರುವುದು ನೋಡಿದರೆ ಈ ಅಂಕಿಅಂಶಗಳಿಗೆ ಸರಿಯಾದ ಬೆಲೆಯನ್ನು ಕೊಡುವುದಕ್ಕೆ ಸದಸ್ಯರಿಗೆ ಇಷ್ಟವಿಲ್ಲವೆಂದು ಗೊತ್ತಾಗುತ್ತದೆ.

ಅಧ್ಯಕ್ಷರು.—ಅಂಕಿಅಂಶಗಳು ಎಂಟು ದಿವಸಗಳಿಂದ ಚರ್ಚೆಯಾಗುತ್ತಿವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಂಕಿಅಂಶಗಳು ಬೇಕಾಗಿಲ್ಲ ಎಂದು ಮಾನ್ಯ ಮಿತ್ರರಾದ ಶ್ರೀ ಪಟ್ಟಾಭಿರಾಮನ್‌ರವರು, ಶ್ರೀ ಸಿದ್ದಲಿಂಗಯ್ಯನವರು, ಶ್ರೀ ಚನ್ನಬಸಪ್ಪನವರು ಮತ್ತು ಅನೇಕರು ಹೇಳುವುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಈ ವಾದ ವಿವಾದಗಳನ್ನು ಕೇಳಿರುವವರಿಗೆ ಬಹುಶಃ ಒಂದು ಭಾಷೆ ಮಾತನಾಡುವವರೂ, ಇನ್ನೊಂದು ಭಾಷೆ ಮಾತನಾಡುವವರೂ ಯುದ್ಧ ಮಾಡುತ್ತಿದ್ದಾರೆಂದು ಭಾಸವಾಗುವುದರಲ್ಲಿ ಯಾವ ಆಶ್ಚರ್ಯವೂ ಕಾಣುವುದಿಲ್ಲ.

Mr. SPEAKER.—It should not be inferred like that. Even when discussing a Bill, there was much opposition. I think more opposition than in the present debate.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಭಾಷಣದ ವಿವಾದಗಳನ್ನು ನೋಡಿದರೆ ನಾವು ಭಾರತೀಯರು ಅಲ್ಲವೋ ಎನ್ನುವ ಸಂಶಯ ಬರುವುದಕ್ಕೆ ಕಾರಣವಾಗುತ್ತದೆ. ಇಷ್ಟೊಂದು ಚರ್ಚೆ, ಇಷ್ಟೊಂದು ಭಿನ್ನಾಭಿಪ್ರಾಯ ಇರುವುದನ್ನು ನೋಡಿದರೆ ಭಾಷಾವಾರು ಪ್ರಾಂತ್ಯ ಏತಕ್ಕೆಬೇಕೋ ಎಂದು ನನಗನ್ನಿಸುತ್ತದೆ. ಮೈಸೂರು ಸಂಸ್ಥಾನದ ಅಕ್ಕಪಕ್ಕದ ಕನ್ನಡ ಭಾಗಗಳು ಒಂದಾಗಬೇಕೇ ಬೇಡವೇ ಎನ್ನುವ ವಿಷಯವನ್ನೂ ಕೂಡ ಕಾಂಗ್ರೆಸ್ಸಿನ ನಾಯಕರು ಆಲೋಚನೆ ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಭಾಷೆಯ ಆಧಾರದ ಮೇಲೆ ಪ್ರಾಂತವಿಂಗಡನೆ ಆಗಬೇಕು ಎಂಬ ಕೂಗು ಎದ್ದಿದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಧಾರ್ ಸಮಿತಿಯವರು ಈ ಪ್ರಾಂತವಿಂಗಡನೆ ಆಗಬೇಕು ಎಂಬ ವಿಷಯದಲ್ಲಿ ಅಷ್ಟು ಪ್ರೋತ್ಸಾಹಕರವಾದ ವರದಿಯನ್ನು ಕೊಡದೇ ಇದ್ದುದರ ಮೇಲೆ. ನಮ್ಮ ದೇಶದ ಮೂವರು ಮಹಾನಾಯಕರು ಈ ವಿಷಯವನ್ನು ಚರ್ಚೆ ಮಾಡಿ J. V. P. report ಬರೆದಿದ್ದಾರೆ. ಅದರಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಯಾವ ಒಂದು ಬೆಳಕಿನಲ್ಲಿ ನೋಡಬೇಕು, ಯಾವ ದೃಷ್ಟಿಯಿಂದ ನೋಡಬೇಕು ಎಂದು ಹೇಳಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕೆಂದು ನಾನು ಬಹಳವಾಗಿ ಇಚ್ಛಿಸುತ್ತೇನೆ. ಮಾತನಾಡಿದವರ ಪೈಕಿ ಅನೇಕ ಸ್ನೇಹಿತರು ದೇಶದಲ್ಲಿ ಕನ್ನಡ ಮಾತನಾಡುವ ಭಾಗಗಳೆಲ್ಲಾ ಒಂದಾಗಬೇಕೆಂದು ಹೇಳಿ ಅದಕ್ಕೆ ಅಂಕಿಅಂಶಗಳ ಆಧಾರ ಕೊಡದೆ ಭಾವನಾ ಪ್ರಪಂಚಕ್ಕೆ ಅವರ ವಾದವನ್ನು ತೆಗೆದುಕೊಂಡು ಹೋಗುತ್ತಿರುವುದನ್ನು ನೋಡಿದರೆ ಅಂಕಿಅಂಶಗಳು ಒಂದೂ ಕೂಡ ಬೇಕಿಲ್ಲವೆಂಬ ಭಾವನೆ ನಮ್ಮ ಸ್ನೇಹಿತರಲ್ಲಿ ಇದ್ದ ಹಾಗೆ ಕಾಣುತ್ತದೆ. ಈ ಸಮಸ್ಯೆಯನ್ನು ಒಂದು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಬೇಕು. ನಾವು ಭಾರತೀಯರು ಎಲ್ಲರೂ ಒಂದೇ ಎಂದು ಹೇಳುವುದು ಹೋಗಿ ನಾವು ಆಂಧ್ರರು, ನಾವು ಕನ್ನಡಿಗರು ಎಂದು ಭಾಷೆಯ ವ್ಯತ್ಯಾಸವನ್ನು ತೋರಿಸುವುದು ಸರಿಯಲ್ಲ. ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಪ್ರದೇಶಗಳು ಸುಮ್ಮನೆ ಬರುತ್ತವೆಯೇ, ಹಿಂದಿನ ಕಾಲದಲ್ಲಿ ಅದಕ್ಕಾಗಿ ಯುದ್ಧ ಮಾಡಬೇಕಾಗಿತ್ತು, ಈಗ ಹಾಗೆ ಮಾಡಬೇಕಾಗಿಲ್ಲ ಎಂದು ಹೇಳುವುದನ್ನು ನೋಡಿದರೆ ನಾವು ಭಾರತೀಯರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆಯೇ, ಭಾರತೀಯರಲ್ಲಿ ಐಕಮತ್ಯ ಅವರಿಗೆ ಬೇಕಾಗಿದೆಯೇ ಎಂದು ನನಗೆ ಸಂಶಯವುಂಟಾಗಿದೆ.

ಈ ಸಮಸ್ಯೆಯನ್ನು ಯಾವ ದೃಷ್ಟಿಯಿಂದ ನೋಡಬೇಕೆಂದು J.V.P ರಿಪೋರ್ಟಿನ ವರದಿಯಲ್ಲಿ ಹೇಳಿದೆ. ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

"It is clear that in giving effect to this principle a great many difficulties of a far-reaching character have to be faced. Whatever the origin of these provinces, and however artificial they may have been, a century or so of political, administrative and to some extent economic unity in each of the existing provincial areas had produced a certain stability and a certain tradition, and any change in this would naturally have an upsetting effect" ಎಂದು ಹೇಳಿದ್ದಾರೆ. ಹಾಗೆಯೇ ಮುಂದುವರಿಯುತ್ತಾ.

"There can be no doubt that the new problems that have arisen since August 1947 have made a vast difference to India. We have to adjust all our thinking and our activity to the new conditions that have arisen in India and the problems of today. There can be no greater error than to think of today, in terms of yesterday, or to

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

seek to solve today's problems in terms of yesterday's."

ಎಂದು ಹೇಳಿದೆ. ಆದ್ದರಿಂದ ಈ ಸಮಸ್ಯೆಯನ್ನು ಸ್ವಾತಂತ್ರ್ಯ ಬಂದ ಮೇಲೆ ಯಾವ ಯಾವ ಸಮಸ್ಯೆಗಳು ಉದ್ಭವಿಸಿವೆಯೆಂಬುದುನ್ನು ನೋಡಿ ಹೇಗೆ ಬಗೆಹರಿಸಬೇಕೆಂಬುದನ್ನು ಹೊಸ ಬೆಳಕಿನಲ್ಲಿ ಯೋಚನೆ ಮಾಡಬೇಕೆಂದು ಸೂಚಿಸಿದ್ದಾರೆ. ನಮ್ಮ ಮಹಾನಾಯಕರು ಈಗಿನ ಪರಿಸ್ಥಿತಿಯನ್ನು ಗಮನಿಸಬೇಕು. ಹಿಂದಿನ ಪರಿಸ್ಥಿತಿಯನ್ನು ನೋಡಿ ಮಾಡುವುದರಿಂದ ದೇಶಕ್ಕೆ ಹಾನಿಯಾಗುತ್ತದೆಂದು ಅವರು ಎಚ್ಚರಿಸಿದ್ದಾರೆ. ಕೆಲವು ಸ್ನೇಹಿತರು ಹೇಳಿದ್ದಾರೆ, ಭಾಷಾವಾರು ಪ್ರಾಂತ್ಯಗಳಾದರೆ ಮೈನರ್ ಭಾಷೆಗಳೆಂಬ ಗೊಂದಲಕ್ಕೆ ಅವಕಾಶವೇ ಇಲ್ಲವೆಂದು ಹೇಳಿದ್ದಾರೆ. ಅದೇ ಅಂಶವನ್ನು ಪ್ರಸ್ತಾಪಿಸುತ್ತಾ ಜೆ.ವಿ.ಪಿ. ರಿಪೋರ್ಟಿನಲ್ಲಿ ಹೇಳಿರುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು, ಅಲ್ಲಿ ಹೇಳಿದ್ದಾರೆ.

'It must be remembered that it is impossible to have clear and rigid demarcations of linguistic areas. However definite such an area might be, it flows into another linguistic area and where the two may meet, there is a mixed bilingual area. Inevitably if a linguistic division is made there will be trouble about this middle area and it will not be easy to decide where it should go. Immediately conflict will arise and passions will be aroused. People's attention will be diverted from the urgent problems of the day, which are essentially economic, to this totally unnecessary conflict which can do good to no one."

Mr. SPEAKER.—Even the Reorganisation Committee will not take only the language as the main consideration. That will be one of the points for considerations.

*ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇವೊತ್ತಿನ ದಿವಸ ಮೈಸೂರು ಸಂಸ್ಥಾನದ ಜನಸಂಖ್ಯೆಯನ್ನು ನೋಡುವುದಾದರೆ, ಹಾಗೂ ಹೈದರಾಬಾದು, ಬೊಂಬಾಯಿ ಮುಂತಾದುವುಗಳ ಭಾಗಗಳು ಸೇರಿ ಕರ್ಣಾಟಕವಾಗುವ ಪ್ರದೇಶದ ಜನಸಂಖ್ಯೆಯನ್ನು ನೋಡುವುದಾದರೆ, ಅಲ್ಲಿ ಎಲ್ಲಾ ಭಾಗಗಳಲ್ಲೂ ಮೈಸೂರಿನಲ್ಲಿರವಂತೆ ಕನ್ನಡಿಗರ ಸಂಖ್ಯೆಯೇ ಹೆಚ್ಚಾಗಿಲ್ಲ. ಹೈದರಾಬಾದಿನಲ್ಲಿ ಬಿದರೆ, ಗುಲ್ಬರ್ಗ, ರಾಯಚೂರಿನಲ್ಲಿರುವ 11 ಲಕ್ಷ ಒಟ್ಟು ಪ್ರಜಾಸಂಖ್ಯೆಯಲ್ಲಿ ಕನ್ನಡಿಗರ ಸಂಖ್ಯೆ ಕೇವಲ 3 ಲಕ್ಷದ 35 ಸಾವಿರದಷ್ಟಿದ್ದಾರೆ. ಅಲ್ಲದೆ ಬಿದರೆ ಜಿಲ್ಲೆಯವರು ತಾವು ಕನ್ನಡ ಪ್ರಾಂತ್ಯಕ್ಕೆ ಸೇರುವುದಿಲ್ಲವೆಂದು ಹೋರಾಟ ಮಾಡುತ್ತಿದ್ದಾರೆಂದು ಕೂಡ ನಮ್ಮ ಸ್ನೇಹಿತರು ಹೇಳಿದ್ದಾರೆ. ಹೀಗಿರುವಾಗ ಬಾಕಿ ಭಾಷೆಗಳವರ ಪರಿಸ್ಥಿತಿ ಏನಾಗುತ್ತದೆಂಬುದನ್ನು ಯೋಚನೆ ಮಾಡಿ. ಗುಲ್ಬರ್ಗ ಜಿಲ್ಲೆಯಲ್ಲಿರುವ 14 ಲಕ್ಷ ಪ್ರಜಾಸಂಖ್ಯೆಯಲ್ಲಿ ಏಳು ಲಕ್ಷ ಜನ ಮಾತ್ರ ಕನ್ನಡಿಗರು. ಬೊಂಬಾಯಿ ಪ್ರಾಂತ್ಯದ ಮೂರು ಜಿಲ್ಲೆಗಳನ್ನು ಸೇರಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಆ ಮೂರು ಜಿಲ್ಲೆಗಳಲ್ಲಿ ಬೆಳಗಾಂ ಜಿಲ್ಲೆಯಲ್ಲಿ ನೋಡುವುದಾದರೆ ಕನ್ನಡಿಗರು ಹೆಚ್ಚಾಗಿ ಇಲ್ಲ. ಮೈಸೂರು ಸಂಸ್ಥಾನವಾದರೋ ಒಂದು composite State ಆಗಿದೆ. ವಿವಿಧ ಭಾಷೆಗಳಿಂದ ಕೂಡಿದ ಒಂದು ಸಂಸ್ಥಾನ ಇದು. ನಮ್ಮ ದೃಷ್ಟಿಯಲ್ಲಿ ಭಾಷಾವಾರು ಸಮಸ್ಯೆಯೇ ಇದುವರೆಗೂ ಬಂದಿಲ್ಲ. ಕೋಲಾರ ಜಿಲ್ಲೆಯಲ್ಲಿ ಬಹು ಸಂಖ್ಯಾತರು ತೆಲುಗರಾಗಿದ್ದರೂ, ಹಾಗೆಯೇ ಇನ್ನು ಕೆಲವು ಜಿಲ್ಲೆಗಳಲ್ಲಿ ತಮಿಳರು ಹೆಚ್ಚಾಗಿದ್ದರೂ, ಇಷ್ಟು ಜನರೂ ಸೌಹಾರ್ದದಿಂದ ವಾಸಮಾಡಿಕೊಂಡಿದ್ದಾರೆ. ಭಾಷೆಯ ದಾಂಧಲೆ ಮೈಸೂರು ಸಂಸ್ಥಾನದಲ್ಲೂ ಇಷ್ಟುಹೊತ್ತಿಗೆ ಬಂದಿದ್ದರೆ ಬಹುಶಃ ಈಗ ಮಾತನಾಡಿದ ಅನೇಕ ಸ್ನೇಹಿತರು ಭಾಷಾವಾರು ವಿಂಗಡಣೆ ಬೇಡವೇ ಬೇಡ ಎಂದ ಹೇಳುತ್ತಿದ್ದರು. ಇವೊತ್ತಿನ ದಿವಸ ಬಳ್ಳಾರಿ ಜಿಲ್ಲೆಯಲ್ಲಿ ಏನು ನಡೆಯುತ್ತಿದೆಯೆಂಬುದನ್ನು ಮಾನ್ಯ ಸದಸ್ಯರು ಗಮನಿಸಲಿ. ಅಲ್ಲಿ ಆಂಧ್ರರು ಮತ್ತು ತಮಿಳರು ಒಬ್ಬರಿಗೊಬ್ಬರು ಶತ್ರುಗಳಂತೆ ಹೊಡೆದಾಟವಾಡುತ್ತಿದ್ದಾರೆ. ಸೌಹಾರ್ದ ಇಲ್ಲವೇ ಇಲ್ಲ. ಮೈಸೂರು ಸಂಸ್ಥಾನದಲ್ಲಾದರೋ ಯಾವವಿಧವಾದ ವೈಷಮ್ಯವೂ ಇಲ್ಲ. ಈಗಮೈಸೂರು ಸಂಸ್ಥಾನದ 100 ಲಕ್ಷ ಪ್ರಜಾಸಂಖ್ಯೆಯಲ್ಲಿ 66 ಲಕ್ಷ ಜನ ಕನ್ನಡಿಗರಾಗಿದ್ದಾರೆ. ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ಶೇಕಡ 23·7 ಮಾತ್ರ ಕನ್ನಡಿಗರು. ತೆಲುಗರು ಶೇಕಡ 17·8. ತಮಿಳರು ಶೇಕಡ 31·7. ತುಮಕೂರಿನಲ್ಲಿಯೂ ತೆಲುಗರ ಸಂಖ್ಯೆಯೇ ಜಾಸ್ತಿ. ಕೆ.ಜಿ.ಎಫ್. ತೆಗೆದುಕೊಂಡರೆ ತಮಿಳರು ಶೇಕಡ 61·2, ತೆಲುಗರು ಶೇಕಡ 19·8, ಕನ್ನಡಿಗರು ಶೇಕಡ 5·4 ಮಾತ್ರ. ಹೀಗೆ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ನಾನಾ ಭಾಷೆಗಳವರು ಬಹುಸಂಖ್ಯೆಯಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಹೈದರಾಬಾದಿನ ಪ್ರಾಂತ್ಯಗಳನ್ನಾಗಲಿ, ಬೊಂಬಾಯಿನ ಪ್ರಾಂತ್ಯಗಳನ್ನಾಗಲಿ ಭಾಷೆಯ ಆಧಾರದಮೇಲೆ ತೆಗೆದುಕೊಂಡು ಪ್ರಾಂತ್ಯ ವಿಂಗಡಣೆ ಮಾಡುತ್ತೇವೆಂದು ಹೇಳುವುದಾದರೆ, ಇಲ್ಲಿ ತಮಿಳರು ಬಹುಮತವಿರತಕ್ಕ ಕೆಲವು ಭಾಗಗಳ ಮತ್ತು ಆಂಧ್ರರು ಬಹುಮತವಿರತಕ್ಕ ಭಾಗಗಳ ಪರಿಸ್ಥಿತಿಯೇನಾಗುತ್ತದೆಂಬುದನ್ನು ದಯವಿಟ್ಟು ಗಮನಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಎಲ್ಲ ಭಾಷೆಗಳವರೂ ಹೊಂದಿಕೊಂಡು ಸುಖವಾಗಿದ್ದ ಈ ಸಂಸ್ಥಾನಕ್ಕೆ ದುರದೃಷ್ಟವಶಾತ್ ಈಗ ಈ ಕಲ್ಮಷ ವಾತಾವರಣ ಬರಲಿದೆ. ಇದು ಬರಕೂಡದೆಂದು ಪ್ರಯತ್ನಗಳು ಹಿಂದೆ ಎಷ್ಟೋ ನಡೆದಿವೆ. ಆದರೆ, ಈಗ ಇಂಡಿಯಾ ಸರ್ಕಾರದವರು ಪ್ರಾಂತ್ಯ ಪುನರ್ವಿಂಗಡಣೆಗೆ ಸಮಿತಿಯನ್ನು ನೇಮಕ ಮಾಡಿದಮೇಲೆ ಮೈಸೂರು ಸಂಸ್ಥಾನದವರೂ ತಮ್ಮ ಅಭಿಪ್ರಾಯವನ್ನು ತಿಳಿಸುವುದು ಮುಖ್ಯವೆಂದು ತಿಳಿದುಕೊಂಡು ಈ ಸಮಿತಿಯವರ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಈ ವರದಿಯ ವಿಷಯದಲ್ಲಿ ಹೆಚ್ಚು ಟೀಕೆ ಮಾಡಿರುವ ಮಹನೀಯರು, ಶ್ರೀ ಪಟ್ಟಾಭಿರಾಮನ್‌ರವರೂ ಹಾಗೂ ಸಿದ್ದಲಿಂಗಯ್ಯನವರೂ ಕೂಡ ಈ ವರದಿಯನ್ನು ಬಹಳ ಚೆನ್ನಾಗಿದೆಯೆಂದೂ ಅದನ್ನು ತಯಾರು ಮಾಡಿರುವವರು ಒಳ್ಳೆಯ ಮೇಧಾವಿಗಳೆಂದೂ ಹೊಗಳಿದ್ದಾರೆ. ಆದರೂ, ಅಂಕಿಅಂಶಗಳನ್ನು ಮಾತ್ರ ಒಪ್ಪಿಕೊಳ್ಳುವುದಿಲ್ಲವೆನ್ನುತ್ತಾರೆ. ಈ ಸಮಿತಿಯವರು

ಮೂರು ತಿಂಗಳುಗಳ ಕಾಲ ಅಕ್ಕಪಕ್ಕದ ಪ್ರಾಂತ್ಯಗಳಿಗೆ ಹೋಗಿ ಪ್ರವಾಸಮಾಡಿ ಅಂಕಿಅಂಶಗಳನ್ನು ಶೇಖರಿಸಿ ಆ ಸರ್ಕಾರಗಳ ಸಹಾಯ ಪಡೆದು ಬಹಳ ಉಪಯುಕ್ತವಾದ, ಆಧಾರಯುತವಾದ ಮತ್ತು ಕಾಲಕ್ಕನುಗುಣವಾದ ರೀತಿಯಲ್ಲಿ ವರದಿಯನ್ನು ತಯಾರು ಮಾಡಿಟ್ಟಿದ್ದಾರೆ. ಆದ್ದರಿಂದ ಈ ಸಮಸ್ಯೆಯನ್ನು, ನಾವೆಲ್ಲರೂ ಭಾರತೀಯರು, ನಮ್ಮ ದೇಶ ಮುಂದಕ್ಕೆ ಬರಬೇಕು, ನಮ್ಮ ದೇಶದಲ್ಲಿ ಒಗ್ಗಟ್ಟಿರಬೇಕು, ನಮ್ಮ ದೇಶ ಐಶ್ವರ್ಯಯುತವಾದ ದೇಶವಾಗಬೇಕೆಂಬ ಸಮಗ್ರ ದೃಷ್ಟಿಯಿಂದ ನೋಡಬೇಕೇ ಹೊರತು ಭಾಷೆ, ಭಾಷೆ ಎಂದು ಪೈಪೋಟಿ ಭಿನ್ನಾಭಿಪ್ರಾಯಗಳಿಂದ ಈ ಸಮಸ್ಯೆಯನ್ನು ನೋಡಬಾರದೆಂಬುದು ಈ ವರದಿಯಲ್ಲಿ ಸ್ಪಷ್ಟವಾಗಿದೆ. ಭಾಷಾವಾರು ಪ್ರಾಂತ್ಯವೆನ್ನುವುದನ್ನು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನಾನಾಗಲೇ ಹೇಳಿದೆ. ಹೈದರಾಬಾದಿನಲ್ಲಿ ಮತ್ತು ಮೈಸೂರು ಸಂಸ್ಥಾನದಲ್ಲಿ ಬೇರೆ ಬೇರೆ ಭಾಷೆಗಳವರು ಬಹು ಸಂಖ್ಯಾತರಾಗಿರತಕ್ಕ ವಿಷಯವನ್ನೂ ಕೂಡ ಹೇಳಿದ್ದೇನೆ. ಉತ್ತರ ಇಂಡಿಯಾದಲ್ಲಿ ಅಲ್ಲಿನ ಸಂಸ್ಥಾನಗಳು ಬಹಳ ದೊಡ್ಡವಾಗಿವೆ. ಉತ್ತರ ಪ್ರದೇಶ ದೊಡ್ಡ ಪ್ರದೇಶ. ಮದರಾಸ್ ಕೂಡ ದೊಡ್ಡದಾಗಿತ್ತು. ಆ ಪ್ರಾಂತ್ಯಗಳನ್ನು ಮೈಸೂರಿನ ಹಾಗೆ ಚಿಕ್ಕ ಚಿಕ್ಕದಾಗಿಟ್ಟುಕೊಂಡಿದ್ದರೆ ಅಲ್ಲಿಕೂಡ ಭಾಷಾವಾರು ಪ್ರಶ್ನೆಯೇ ಬರುತ್ತಿರಲಿಲ್ಲ. ಉತ್ತರ ಪ್ರದೇಶದಲ್ಲಿ ಒಂದೇ ಮಾತನಾಡುವ ಪ್ರದೇಶವಾಗಿದ್ದರೂ ಅದನ್ನೇ ಇಪ್ಪತ್ತು ಚಿಕ್ಕ ಚಿಕ್ಕ ಪ್ರಾಂತ್ಯವಾಗಿ ವಿಂಗಡಿಸಬೇಕೆಂದು ಹೇಳಿದ್ದಾರೆ. ಹೀಗಿರುವಾಗ ಕರ್ಣಾಟಕ ಪ್ರಾಂತ್ಯ ಮಾಡಬೇಕೆಂದು ಹೇಳಿ ನಮ್ಮ ಪ್ರಾಂತ್ಯವನ್ನು ದೊಡ್ಡದು ಮಾಡಿಕೊಳ್ಳುವುದು ಸರಿಯಲ್ಲ. ಫಜಲಾಲಿ ಸಮಿತಿಗೆ ಕೊಟ್ಟಿರತಕ್ಕ ಮೆಮೊರಾಂಡಂನಲ್ಲಿ ಅನೇಕ ವಿಷಯಗಳನ್ನು ಉಲ್ಲೇಖಿಸಿದ್ದಾರೆ. ಬರೀ ಭಾಷೆಯನ್ನೇ ಪರಿಗಣಿಸಬೇಕೆಂದು ಹೇಳಿಲ್ಲ. ಬರೀ ಭಾಷೆಯಮೇಲೆಯೇ ನೋಡುವುದಾದರೆ ಜನಗಳ ಸೌಕರ್ಯವನ್ನು ನೋಡುವುದಕ್ಕಾಗುವುದಿಲ್ಲವೆಂದು ಅವರೇ ಹೇಳಿದ್ದಾರೆ. ಅವರು ಹೇಳುತ್ತಾರೆ:

"8. The existence of larger States such as Uttar Pradesh and Bombay is a definite disadvantage from the administrative point of view. These larger States have become so unwieldy that serious inconvenience is caused to the people; particularly to those who are in the border districts. It is for this very reason that a movement has been started recently for the formation of a smaller State constituting the north-western districts of Uttar Pradesh with Delhi as its headquarters."

ಸೈಮನ್ ಕಮಿಷನ್ನಿನವರೂ ಅದೇ ರೀತಿಯ ಅಭಿಪ್ರಾಯ ಕೊಟ್ಟಿದ್ದಾರೆ.

"Most of them (Provinces) are too populous and extensive, having regard to the cultural level and economic conditions of their inhabitants, to allow of the easy working of the machinery of representative Government on a reasonably extensive franchise."

"10. That the existing States are too extensive and populous can be seen from a few comparisons. The States of Uttar Pradesh and Bombay are each of them bigger than Italy. Madhya Pradesh exceeds Great Britain in size, and Orissa, one of the smallest amongst the Part 'A' States, is bigger than Portugal. If we turn from areas to population, the scale of things is not less significant. Uttar Pradesh has more inhabitants than Great Britain. Even Assam, which is one of the smallest Sates, has more inhabitants than Portugal."

Mr. SPEAKER.—The Hon'ble Member has taken more than 15 minutes. At this rate he will not be able to finish his speech. That is why I suggested that only main points might be touched.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಟ್ಟಿನಲ್ಲಿ, ಈ ಪ್ರಕಾರ ಅವರು ಅಂಕಿಅಂಶಗಳನ್ನು ಶೇಖರಿಸಿ ಫಜಲಾಲಿ ಸಮಿತಿಗೆ ಒಪ್ಪಿಸಿರತಕ್ಕ ವರದಿಯಲ್ಲೂ ಕೂಡ ಪ್ರಾಂತ್ಯಗಳು ದೊಡ್ಡ ದೊಡ್ಡವುಗಳಾಗಿರುವುದು ಬೇಡ ವೇಬೇಡ, ಚಿಕ್ಕ ಚಿಕ್ಕದಾಗಿದ್ದರೆ ರಾಜ್ಯಭಾರ ನಡೆಸುವ ದೃಷ್ಟಿಯಿಂದ, ಪ್ರಾಂತ್ಯಗಳ ಯೋಗಕ್ಷೇಮದ ದೃಷ್ಟಿಯಿಂದ ಅನುಕೂಲವೆಂದು ಹೇಳಿ ಉತ್ತರ ಇಂಡಿಯಾದವರು ಪ್ರಾಂತ್ಯಗಳನ್ನು ಚಿಕ್ಕ ಚಿಕ್ಕದಾಗಿ ಮಾಡುವುದನ್ನು ಯೋಚಿಸುವಾಗ ನಾವು, ಮೈಸೂರು ಸಂಸ್ಥಾನದವರು ದೊಡ್ಡದು ಮಾಡುವುದಕ್ಕೆ ಹೋಗುವುದು ಸರಿಯೇ ಎಂಬುದನ್ನು ಬಹಳ ಎಚ್ಚರಿಕೆಯಿಂದ ನೋಡಬೇಕೆಂದು ಹೇಳುತ್ತೇನೆ.

6 P.M.

ಇನ್ನೂ ತೆಲುಗು ಪ್ರದೇಶವೆಲ್ಲಾ ಈಗ ಕರ್ಣಾಟಕಕ್ಕೆ ಸೇರಬೇಕೆಂದು ಹೇಳುತ್ತಿದ್ದಾರೆ. ಈಗಾಗಲೇ ಆ ಬಳ್ಳಾರಿ ಜಿಲ್ಲೆಯೊಂದು ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರಿಕೊಂಡಪ್ರಯುಕ್ತ ನಮಗೀಗ 60 ಲಕ್ಷ ರೂಪಾಯಿಗಳ ಖೋತಾ ಬರುತ್ತೆಂದು ಗೊತ್ತಾಗಿದೆ.

ಅಧ್ಯಕ್ಷರು.—ಅನೇಕರು ಈ ವಿಚಾರವನ್ನೆಲ್ಲಾ ತಿಳಿಸಿದ್ದಾರೆ. ತಾವು ಬೇರೆ ವಿಷಯಗಳೇನಾದರೂ ಇದ್ದರೆ ಅವುಗಳನ್ನು ಹೇಳಿ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗ ಆ ಹೈದರಾಬಾದಿನಿಂದ ಬೇರೆ ಕೆಲವು ಭಾಗಗಳು ನಮ್ಮ ಮೈಸೂರಿಗೆ ಸೇರುತ್ತವೆ; ಮದರಾಸ್ ಪ್ರಾವಿನ್ಸಿನಿಂದ ಕೆಲವು ಭಾಗಗಳೂ ಮತ್ತು ಬೊಂಬಾಯಿ ಪ್ರಾಂತ್ಯದಿಂದ ಕೆಲವು ಭಾಗಗಳೂ ಮೈಸೂರಿಗೆ ಸೇರಬೇಕಾಗಿದೆ. ಆದರೆ ಈ ದಿವಸ ಹೀಗೆ ಮೈಸೂರಿಗೆ ಸೇರತಕ್ಕಂಥ ಆ ಪ್ರದೇಶಗಳೆಲ್ಲಾ ಯಾವ ರೀತಿಯಿವೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಆ ಪ್ರದೇಶಗಳಲ್ಲಿ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

ಎಲ್ಲಿಯೂ ಒಂದು ಪಂಚಾಯಿತಿ ಹಾಲಿಲ್ಲ, ಸಾಕಷ್ಟು ಪಾಠಶಾಲೆಗಳಿಲ್ಲ, ಆಸ್ಪತ್ರೆಗಳಿಲ್ಲ, ರಸ್ತೆಗಳಿಲ್ಲ. ಹೀಗೆಲ್ಲಾ ಅಲ್ಲಿ ತುಂಬ ಅನಾನುಕೂಲಗಳಿರುತ್ತವೆಂಬ ಅಂಶವನ್ನು ಮಾನ್ಯ ಸದಸ್ಯರನೇಕರು ಮರೆತಿರುವಂತೆ ಕಾಣುತ್ತಿದೆ. ಈ ದಿವಸ ಅಲ್ಲಿರತಕ್ಕಂಥ ಪರಿಸ್ಥಿತಿಯನ್ನೂ ಮತ್ತು ನಮ್ಮ ಮೈಸೂರಿನ ಪರಿಸ್ಥಿತಿಯನ್ನೂ ಹೋಲಿಕೆ ಹಾಕಿ ನೋಡಿದರೆ ಇದು ಚೆನ್ನಾಗಿ ಕಾಣುತ್ತದೆ. ಈ ದಿವಸ ನಾವು ಈ ರಾಜ್ಯಗಳ ಪುನರ್ವಿಂಗಡಣೆಗೆ ಒಪ್ಪಿಕೊಂಡರೆ ಮುಂದಕ್ಕೆ ನಾವು ನಮ್ಮ ಹಳ್ಳಿಗಾಡುಗಳ ಕ್ಷೇಮ ಚಿಂತನೆಯನ್ನು ಕೇಳುವುದಕ್ಕೇ ಆಗುವುದಿಲ್ಲ. ಒಂದುವೇಳೆ ಕೇಳಿದರೂ ಕೂಡ ದುಡ್ಡೂ ಸಹ ಇರುವುದಿಲ್ಲ. ಮೈಸೂರಿಗೆ ಇದರಿಂದ ತುಂಬ ಕಷ್ಟ ಬರುತ್ತದೆ. ಮೈಸೂರಿನ ಪ್ರಗತಿ ಪುನಃ 50 ವರ್ಷಗಳ ಕಾಲ ಹಿಂದಕ್ಕೆ ಇಡಬೇಕಾಗುತ್ತದೆ. ಆದರೆ ಈ ಕರ್ಣಾಟಕ ಪ್ರಾಂತ್ಯವೆಲ್ಲಾ ಒಂದಾಗಬೇಕೆಂಬ ಉದ್ದೇಶ ಸದ್ಯಕ್ಕೆ ಬೇಕಾಗಿಲ್ಲವೆಂದು ಕಳೆದ ಅಕ್ಟೋಬರ್ ಅಧಿವೇಶನದಲ್ಲೇ ಹೇಳಲಾಗಿತ್ತು. ಆದರೆ ಹೀಗೆ ದೇಶವನ್ನು ಭಾಷಾಧಾರದ ಮೇಲೆ ವಿಂಗಡಿಸುವುದಕ್ಕೆ ಬದಲಾಗಿ ನಾವೆಲ್ಲರೂ ಭಾರತೀಯರು, ಭಾರತಮಾತೆಯ ಪುತ್ರರು, ನಾವೆಲ್ಲರೂ ಒಂದೇ ಎನ್ನತಕ್ಕಂಥ ಭಾವನೆಯನ್ನು ಬೆಳೆಸಿಕೊಂಡು ಬರುವುದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ಈ ದಿವಸ ನಮ್ಮ ದೇಶದಲ್ಲಿ ಹಲವಾರು ಭಾಷೆಗಳಿವೆ. ಈ ಪೈಕಿ ಎಲ್ಲ ಭಾಷೆಯನ್ನೂ ಅಭಿವೃದ್ಧಿಗೆ ತರಬೇಕೆಂಬ ಆಸೆ ಸರ್ಕಾರಕ್ಕೆ ಇದ್ದೇ ಇದೆ. ಈ ದಿವಸ ಮೈಸೂರಿನಲ್ಲಿ 20 ಲಕ್ಷಕ್ಕೂ ಮೇಲ್ಪಟ್ಟು ಆಂಧ್ರರಿದ್ದಾರೆ. ಆದರೆ ಅವರಾರೂ ಇಲ್ಲಿಯವರೆಗೆ ಯಾವ ಒಂದು ಚಳವಳಿಯನ್ನೂ ಹೂಡಿಲ್ಲ. ಏನೇ ಆಗಲಿ ರಾಜ್ಯಗಳನ್ನು ಭಾಷೆ ಆಧಾರದಮೇಲೆ ರಚಿಸುವುದು ಒಳ್ಳೆಯದಲ್ಲವೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ರಾಚಯ್ಯ (ಯಳಂದೂರು ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಗಳವರೇ, ಈ ರಾಜ್ಯಗಳ ಪುನರ್ವಿಂಗಡಣೆಯ ವಿಷಯವಾಗಿ ಶ್ರೀ ಶೇಷಾದ್ರಿ ಸಮಿತಿಯವರು ಒಪ್ಪಿಸಿರತಕ್ಕಂಥ ವರದಿಯ ಬಗ್ಗೆ ಈಗ್ಗೆ ಐದು-ಆರು ದಿವಸಗಳಿಂದಲೂ ಚರ್ಚೆಯು ಬಹಳ ವಿಪುಲವಾಗಿ ನಡೆಯುತ್ತಿದೆ. ಕೆಲವರು ಈ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಹೇಳಿದ್ದಾರೆ. ಅದರ ಅರ್ಥವೇನೆಂಬುದೇ ಗೊತ್ತಾಗಲಿಲ್ಲ. ಮತ್ತೆ ಕೆಲವರು ಈ ಮೈಸೂರನ್ನೊಳಗೊಂಡ ಅಖಂಡ ಕರ್ಣಾಟಕ ಸ್ಥಾಪನೆಯಾಗಬೇಕೆಂದು ಹೇಳಿದ್ದಾರೆ. ಮತ್ತೆ ಕೆಲವರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ನೀಲಗಿರಿ ಈ ಪ್ರದೇಶಗಳು ಮಾತ್ರ ಸೇರಿಕೊಳ್ಳಲಿ, ಉತ್ತರ ಕರ್ಣಾಟಕವನ್ನೇನೂ ನಾವು ಸೇರಿಸಿಕೊಳ್ಳುವುದು ಬೇಡ ಎಂದು ಹೇಳಿದ್ದಾರೆ. ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿಯಾಗಿ ಹೇಳಿದ್ದಾರೆ. ಆದರೆ ಈಗಿನ ಮೈಸೂರು ಮೈಸೂರಾಗಿಯೇ ಉಳಿಯಲಿ ಎಂದು ಹೇಳಿರತಕ್ಕದ್ದರಲ್ಲಿ ಒಂದು ಅರ್ಥವಿದೆ. ಆದರೆ ಉತ್ತರ ಕರ್ಣಾಟಕ ಮತ್ತು ಇತರ ಕನ್ನಡ ಪ್ರದೇಶಗಳೆಲ್ಲಾ ಸೇರಿ ಒಂದು ಕರ್ಣಾಟಕವಾಗಲಿ ಎಂದು ಹೇಳಿರತಕ್ಕವರ ಮಾತಿನಲ್ಲೇ ಒಂದು ಅರ್ಥವಿದೆ. ಆದರೆ ಕಾಲಕ್ಕೆ ತಕ್ಕಂತೆ ಈ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಲು ಕೇಂದ್ರ ಸರ್ಕಾರದವರು ಈಗ ಒಂದು ವರದಿಯನ್ನೊಪ್ಪಿಸತಕ್ಕ ಬಗ್ಗೆ ಒಂದು ಹೈಪವರ್ ಸಮಿತಿಯನ್ನು ನೇಮಕ ಮಾಡಿದ್ದಾರೆ. ಈ ವಿಷಯ ತಮಗೆಲ್ಲರಿಗೂ ತಿಳಿದಿದ್ದೇ ಆಗಿದೆ. ಈ ಹಿಂದೆ ಆಡಳಿತ ನಡೆಸುತ್ತಿದ್ದಂಥ ಬ್ರಿಟಿಷ್ ಸಾಮ್ರಾಜ್ಯಶಾಹಿ ದೌಲತ್ತಿನಲ್ಲಿ ಈ ದೇಶವನ್ನು ತುಂಡು ತುಂಡಾಗಿ ಕತ್ತರಿಸಿ ಎ.ಬಿ.ಸಿ. ರಾಜ್ಯಗಳೆಂದು ನಿರ್ಮಾಣ ಮಾಡಿದರು. ಇವುಗಳಲ್ಲಿ ಒಂದು ಪೂರಾ ದೊಡ್ಡದಾಗಿಯೂ ಮತ್ತೊಂದು ಪೂರಾ ಚಿಕ್ಕದಾಗಿಯೂ ಇರುತ್ತದೆ. ಆದರೆ ಹೀಗೆ ರಾಷ್ಟ್ರ ವಿಭಜನೆ ಮಾಡುವುದು ಆಡಳಿತ ದೃಷ್ಟಿಯಿಂದಲೂ ಮತ್ತು ಭಾಷಾವಾರು ದೃಷ್ಟಿಯಿಂದಲೂ ಸರಿಯಾದ್ದಲ್ಲವೆಂದು ಅವರು ಹೇಳಿದ್ದಾರೆ. ಈಗ ಈ ಅವ್ಯವಸ್ಥೆಯನ್ನೆಲ್ಲಾ ಸರಿಪಡಿಸಲು ಮೈಸೂರು ಸರ್ಕಾರದವರೂ ಕೂಡ, ಈ ಬಗ್ಗೆ ಇತರರಿಗೆ ಒಂದು ತಲೆ ನೋವು ಬಂದುದರಿಂದ ಇವರೂ ಸಹ ಮೈಸೂರು ಹೊರಗಡೆಯಿರುವಂಥಾ ಕನ್ನಡ ಪ್ರದೇಶಗಳ ಸ್ಥಿತಿಗತಿಗಳೇನಿದೆ ಎಂಬುದನ್ನು ನೋಡಿ ಅಲ್ಲಿರತಕ್ಕಂಥ ನಿಜಸ್ವರೂಪವನ್ನು ಕುರಿತು ಒಂದು ವರದಿಯನ್ನು ನಮ್ಮ ಸರ್ಕಾರಕ್ಕೊಪ್ಪಿಸಲು ಒಂದು ಸಮಿತಿಯನ್ನು ಏರ್ಪಾಡುಮಾಡಿದ್ದರು. ಈ ದಿವಸ ನಮ್ಮ ಮೈಸೂರಿಗೆ ಸೇರತಕ್ಕಂಥ ಭಾಗಗಳಲ್ಲಿ ಕೆಲವು ಹೈದರಾಬಾದಿನಲ್ಲೂ, ಕೆಲವು ಭಾಗಗಳು ಬೊಂಬಾಯಿ ಅಧಿಪತ್ಯದಲ್ಲೂ, ಇನ್ನು ಕೆಲವು ಮದ್ರಾಸ್ ಪ್ರಾಂತ್ಯದಲ್ಲೂ ಸೇರಿರುತ್ತವೆ. ಹೀಗೆ ಬೇರೆ ಬೇರೆ ಆಡಳಿತಕ್ಕೊಳಪಟ್ಟಿರುವಂಥ ಈ ಕನ್ನಡ ಪ್ರದೇಶಗಳ ನಿಜಸ್ವರೂಪದ ಚಿತ್ರ ಒಂದನ್ನು ತಯಾರಿಸಿ ಈ ಮಾನ್ಯ ಸಭೆಯ ಮುಂದೆ ಇಡಬೇಕಾದುದು ಅವರ ಕರ್ತವ್ಯವಾಗಿತ್ತು ಎಂದು ಹೇಳುತ್ತೇನೆ. ಆ ಸಮಿತಿಯವರು ಈ ದಿವಸ ಈ ಒಂದು ವರದಿಯಲ್ಲಿ ಯಾವಯಾವ ಕನ್ನಡ ಭಾಗಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೋ ಅವುಗಳೆಲ್ಲಾ ಮೈಸೂರಿಗೆ ಸೇರಲೇ ಬೇಕಾದುದು ಅನಿವಾರ್ಯ ಎನ್ನುವುದನ್ನು ತಿಳಿದುಕೊಂಡೇ ಅವರು ಈ ವಿಚಾರಗಳನ್ನೆಲ್ಲಾ ತಿಳಿಸಿರುತ್ತಾರೆ. ಹಾಗೆ ಈ ಭಾಗಗಳು ಮೈಸೂರಿಗೆ ಸೇರಬೇಕಾಗಿಲ್ಲವೆನ್ನುವುದಾಗಿದ್ದರೆ ಈ ಸಮಿತಿಯವರು ಈ ವಿಚಾರಗಳನ್ನೆಲ್ಲಾ ವಿಮರ್ಶೆ ಮಾಡಬೇಕಾದದ್ದೇ ಇರುತ್ತಿರಲಿಲ್ಲ. ಈ ದಿವಸ ಈ ವರದಿಯಲ್ಲಿ ನಮೂದಿಸಿರುವಂಥ ಪ್ರದೇಶಗಳಲ್ಲಿರತಕ್ಕಂಥ ಕನ್ನಡಿಗರೆಲ್ಲರೂ ಏಕಕಂಠದಿಂದ ಮೈಸೂರಿಗೆ ಸೇರಲು ಇಷ್ಟವುಳ್ಳವರಾಗಿದ್ದಾರೆ. ಹೀಗೆ ಯಾರುಯಾರು ತಮ್ಮ ಸ್ವಂತ ಇರಾದೆಯಿಂದ ನಮ್ಮ ಸಂಸ್ಥಾನಕ್ಕೆ ಸೇರುತ್ತೇವೆಂದು ಹೇಳುತ್ತಾರೋ ಅಂಥವರಿಗೆಲ್ಲ ನಮ್ಮ ಸುಸ್ವಾಗತವಿದೆ ಎಂಬುದಾಗಿ ಕಾಂಗ್ರೆಸ್ ಸಂಸ್ಥೆಯವರು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಇದಕ್ಕೆ ಕಾನ್ಸ್ಟಿಟ್ಯೂಷನ್ನಲ್ಲಿ ಕೂಡ ಅವಕಾಶ ಮಾಡಿರುತ್ತದೆ. ಆದುದರಿಂದ ಈಗ ಇರತಕ್ಕ ಮೈಸೂರು ಇನ್ನು ಕಡಿಮೆಯಾಗುವುದಾಗಲಿ ಅಥವಾ ಇದು ಇದ್ದಹಾಗೆಯೇ ಇರುವುದಾಗಲಿ ಇನ್ನು ಮುಂದೆ ಸಾಧ್ಯವಾಗುವುದಿಲ್ಲ. ಆದರೆ ಒಂದು ದೇಶ ಚಿಕ್ಕದಾಗುವುದಕ್ಕೇ ಆಗಲಿ ಅಥವಾ ದೊಡ್ಡದಾಗುವುದಕ್ಕೇ ಆಗಲಿ ಅದಕ್ಕೆಲ್ಲಕ್ಕೂ ಒಂದು ಮಿತಿಯಿದೆ. ಅಂಥ ಒಂದು ಮಿತಿಯನ್ನಿಟ್ಟುಕೊಳ್ಳದೆ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಸುಮಾರು ಎರಡು ಕೋಟಿ ಜನ ಸಂಖ್ಯೆಯನ್ನೊಳಗೊಂಡ ಆಂಧ್ರ ಪ್ರಾಂತ್ಯ ನಿರ್ಮಾಣವಾಗಿದೆ. ಅದೇ ರೀತಿ ಮಹಾರಾಷ್ಟ್ರ ರಾಜ್ಯವನ್ನು ಕೂಡ ಸ್ಥಾಪನೆ ಮಾಡಬೇಕೆಂದು ಕೇಳುತ್ತಿದ್ದಾರೆ. ಹೀಗೆಲ್ಲಾ ಜನರು ಕೇಳುತ್ತಿದ್ದುದರಿಂದಲೇ ಈ ದೇಶಗಳನ್ನೆಲ್ಲಾ ಆಡಳಿತ ದೃಷ್ಟಿಯಿಂದಲೂ ಮತ್ತು ವಯಬಲ್ ದೃಷ್ಟಿಯಿಂದಲೂ ಮತ್ತು ಇತರ ಕೆಲವು ಪ್ರಾಮುಖ್ಯವಾದಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ರಾಜ್ಯಗಳನ್ನು

ಯಾವ ರೀತಿ ಪುನರ್ವಿಂಗಡಣೆ ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರಕ್ಕೆ ಸಲಹೆಯನ್ನೊಪ್ಪಿಸಲು ಹೈಪವರ್ ಸಮಿತಿಯನ್ನು ನೇಮಕ ಮಾಡಲಾಗಿದೆ. ಆ ಸಮಿತಿಯವರು ನಾನಾ ಕಡೆಗಳಿಂದ ಈಗಾಗಲೇ ಅಭಿಪ್ರಾಯಗಳನ್ನು ಶೇಖರಣೆ ಮಾಡಿಕೊಂಡಿದ್ದಾರೆ. ಆದರೆ ಈಗ ನಮಗೆ ಹೆಸರಿನಿಂದೇನೂ ಅಷ್ಟು ಪ್ರಾಧಾನ್ಯತೆ ಹೊಂದಬೇಕಾಗಿಲ್ಲ. ತಾವು ಈಗಿರತಕ್ಕಂಥ ಮೈಸೂರನ್ನು ಮುಂದೆ ಅಖಂಡ ಮೈಸೂರು ಎಂದಾದರೂ ಕರೆಯಿರಿ ಅಥವಾ ಅಖಂಡ ಕರ್ಣಾಟಕ ಎಂದಾದರೂ ಕರೆಯಿರಿ, ಕನ್ನಡ ನಾಡೆಲ್ಲಾ ಒಂದಾಗಲೇ ಬೇಕೆಂಬುದು ನಿರ್ವಿವಾದವಾದ ಅಂಶ. ಅದರೆ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತ ಮೈಸೂರು ಹೊರಗಡೆಯಿರತಕ್ಕಂಥ ಕನ್ನಡ ಪ್ರದೇಶದಲ್ಲಿ ಸಾಕಷ್ಟು ವೈದ್ಯ ಸೌಕರ್ಯಗಳಿರುವುದಿಲ್ಲವೆಂದು ಹೇಳಿದರು. ಅದಕ್ಕೆ ನಾನು ಇಷ್ಟೇ ಹೇಳುತ್ತೇನೆ. ನಾನು ಈಗ ಒಬ್ಬ ಜಹಗೀರ್‌ದಾರರು ಇರತಕ್ಕಂಥ ಕಾನ್ಸ್ಟಿಟ್ಯೂಯನ್ಸಿಯಿಂದ ಬರುತ್ತಿದ್ದೇನೆ. ಆದರೆ ಈ ಜಹಗೀರ್‌ದಾರರುಗಳು ಇರತಕ್ಕಂಥ ಕಡೆಯಲ್ಲಿ ರೈತರಿಗೆ ಆಗಿರುವಷ್ಟು ಅನ್ಯಾಯಗಳು ಮತ್ತೆಲ್ಲೂ ಆಗಿರಲಾರದೆಂದು ಹೇಳುತ್ತೇನೆ. ಈ ದಿವಸ ನಮ್ಮ ಮೈಸೂರಿನ ಹೊರಭಾಗದಲ್ಲಿರತಕ್ಕಂಥ ಆ ಕನ್ನಡ ಪ್ರದೇಶಗಳನ್ನು ಈ ದಿವಸ ಕೆಲವು ಮಾನ್ಯ ಸದಸ್ಯರು ಏನು ಅವುಗಳನ್ನೆಲ್ಲಾ ಬಹಳ ಹಿಂದೆ ಬಿದ್ದಿರುವಂಥ ಪ್ರದೇಶಗಳೆಂದು ಹೇಳುತ್ತಿದ್ದಾರೋ ಅಂಥ ಆ ಭಾಗಗಳೆಲ್ಲವೂ ಈ ಜಹಗೀರ್‌ದಾರ್‌ರ ತಾಲ್ಲೂಕಿಗಿಂತಲೂ ಬಹಳ ಉತ್ತಮ ಸ್ಥಿತಿಯಲ್ಲಿರುತ್ತವೆಂದು ನಾನು ಹೇಳುತ್ತೇನೆ. ಈ ದಿವಸ ಹಾಗೆ ಆ ಪ್ರದೇಶಗಳೆಲ್ಲಾ ಬಹಳ ಹಿಂದುಳಿದಿರಬೇಕಾಗಿದ್ದರೆ ಅದಕ್ಕೆ ಮುಖ್ಯ ಕಾರಣ ಅಲ್ಲಿರತಕ್ಕಂಥ ಜೋಡಿ ಮತ್ತು ಜಹಗೀರ್‌ದಾರರುಗಳೇ ಎಂತ ಹೇಳಬೇಕಾಗಿದೆ. ಆ ಕೆಲವು ಜಿಲ್ಲೆಗಳಲ್ಲಿ ಈ ರೀತಿ ಅನಾನುಕೂಲಗಳಿರುತ್ತವೆ. ಹಾಗೆ ಅಲ್ಲಿನ ಜನತೆಗೆ ಆ ಜೋಡೀದಾರರು ಹಾಗೆ ಒಂದು ಕಿರುಕುಳ ಕೊಡದೆಯಿದ್ದಿದ್ದರೆ ಈ ದಿವಸ ಆ ಪ್ರದೇಶಗಳೆಲ್ಲ ಅಷ್ಟು ಹಿಂದೆ ಬೀಳಲು ಕಾರಣವೇ ಇರುತ್ತಿರಲಿಲ್ಲ. ಆದುದರಿಂದ ನಾವು ಈ ದಿವಸ ಯಾವ ಒಂದು ದೇಶವನ್ನೇ ಆಗಲಿ ಅದು ಹಿಂದುಳಿದಿರುವ ಪ್ರದೇಶವೇ ಅಥವಾ ಮುಂದುವರಿದಿರುವ ಪ್ರದೇಶವೇ ಎಂದು ವಿಂಗಡಿಸಿ ವಿಲೀನೀಕರಣ ಮಾಡುವುದಕ್ಕಾಗುವುದಿಲ್ಲ. ಆ ರೀತಿ ನೋಡುತ್ತಾ ಹೋದರೆ ಪ್ರತಿಯೊಂದು ಭಾಗವೂ ಹಿಂದುಳಿದಿರುವಂಥ ಪ್ರದೇಶವೆಂದೇ ನಿರ್ಧರಿಸಬೇಕಾಗುತ್ತದೆ. ಆದಕಾರಣ ಈ ದಿವಸ ದೇಶವನ್ನು ನಾವು ಒಂದು ಹೊಸ ರೂಪದಲ್ಲಿ ಕಟ್ಟಬೇಕಾಗಿರುವುದರಿಂದ ಇವುಗಳನ್ನೆಲ್ಲಾ ಒಂದು ಫೆಡರಲ್ ಮಾದರಿ ಸರ್ಕಾರದ ಆಡಳಿತಕ್ಕೆ ಸೇರಿಸಿ ಈ ಭಾಗಗಳಿಗೆ ದೊರಕಬೇಕಾದಂಥ ಸರಿಸಮಾನವಾದಂಥ ಹಕ್ಕು ಬಾಧ್ಯತೆಗಳನ್ನು ದೊರಕಿಸಿಕೊಡಲೇ ಬೇಕಾಗುತ್ತದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರದವರು ಹೆಚ್ಚಿನ ಕಾತುರತೆಯಿಂದ ಸಹಾಯ ಸಹಕಾರಗಳನ್ನು ನೀಡುತ್ತಿದ್ದಾರೆ. ಹಿಂದುಳಿದ ಪ್ರದೇಶಗಳನ್ನೆಲ್ಲಾ ಅಭಿವೃದ್ಧಿಗೆ ತರಬೇಕಾದಂಥ ಭಾರ ಈ ದಿವಸ ಕೇಂದ್ರ ಸರ್ಕಾರದವರ ಮೇಲೆ ಬಿದ್ದಿದೆ. ಈ ದಿವಸ ಈ ಅಂಕಿ ಅಂಶಗಳ ಸಮಿತಿಯವರು ಒಪ್ಪಿಸಿರುವ ವರದಿಯು ಬಹಳ ಮಟ್ಟಿಗೂ ನಿಜವಾಗಿಯೇ ಇರಬಹುದು. ಆದರೆ ಈಗ ಇಂಡಿಯಾ ಸರ್ಕಾರದವರು ದೇಶವನ್ನು ಪುನರ್ವಿಂಗಡಣೆ ಮಾಡಲೇ ಬೇಕೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದಕಾರಣ ಯಾವ ಭಾಗದಲ್ಲಿ ಏನು ಡಿಫಿಸಿಟ್ ಆಗಿದ್ದರೂ ಆ ಬಗ್ಗೆ ಅವರು ಸಹಾಯ ಮಾಡಬೇಕಾಗಿದೆ. ಈ ದಿವಸ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಆಂಧ್ರ ಪ್ರಾಂತ್ಯವನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ಅಷ್ಟಾಗುವುದಿಲ್ಲ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಮೈಸೂರಿನ ವ್ಯಾಪಾರಾಭಿವೃದ್ಧಿಗೆ ಹೆಚ್ಚು ಅನುಕೂಲವಾಗುತ್ತದೆ. ಆಗ ಈ ಮೈಸೂರು ನಾನಾ ರೀತಿಯಲ್ಲಿ ಅಭಿವೃದ್ಧಿಗೆ ಬರಲು ದಾರಿಯಾಗುತ್ತದೆ. ಈ ಪ್ರಾಂತ್ಯ ನಿರ್ಮಾಣದಿಂದೇನೂ ತೊಂದರೆಯಾಗುವುದಿಲ್ಲವಾದ ಕಾರಣ ಎಲ್ಲ ಕನ್ನಡ ಭಾಗಗಳನ್ನೂ ಒಳಗೊಂಡಬಂದೇ ಒಂದು ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಬೇಕಾದದ್ದು ಯುಕ್ತವೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ನಾನು ಇಲ್ಲಿಯವರೆಗೂ ಈ ಶೇಷಾದ್ರಿ ವರದಿಯಮೇಲೆ ಆಗಿರತಕ್ಕಂಥ ಚರ್ಚೆಗಳನ್ನೂ ಮತ್ತು ಭಾಷಣಗಳನ್ನೂ ಕೇಳಿದ್ದೇನೆ. ಆದರೆ ಈ ವಿಷಯದಲ್ಲಿ ಮಾತನಾಡುವುದಕ್ಕೆ ಮೊದಲೇ ನಾನು ಒಬ್ಬ ಹರಿಜನ ಸ್ತ್ರೀಯಾಗಿ ಹುಟ್ಟಿದ್ದರೆ ಎಷ್ಟೋ ಸಂತೋಷವಾಗುತ್ತೆಂದು ನನಗೆನ್ನಿಸುತ್ತದೆ. ಇದಕ್ಕೆ ಕಾರಣವೇನೆಂದರೆ, ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಮಾತನಾಡುವುದಕ್ಕೆ ಎದ್ದ ಕೂಡಲೇ ಇವರೇನು ಲಿಂಗಾಯಿತರೇ ಎಂದು ಕೇಳತಕ್ಕ ಕೂಗು ಬಂತು. ಈಗ ನಾನು ಮಾತನಾಡುವುದಕ್ಕೆ ಪ್ರಾರಂಭಿಸುವಾಗಲೂ ಇವರೇನು ಒಕ್ಕಲಿಗರೇ ಎನ್ನತಕ್ಕಂಥ ಕೂಗು ಕೇಳಿಬರುತ್ತದೆ. ಆದರೆ ಈ ವಿಚಾರದಲ್ಲಿ ಬಹುಮತವಾಗಿ ಕೆಲವರು ಈ ಕರ್ಣಾಟಕ ಪ್ರಾಂತ್ಯ ಬೇಕೆಂತಲೂ ಇನ್ನು ಕೆಲವರು 'ಬೇಡ' ಎಂತಲೂ ಹೇಳುತ್ತಿರುವಂತೆ ಗೊತ್ತಾಗುತ್ತದೆ. ಈ ವಿಚಾರದಲ್ಲಿ ನಾನು ಹಿಂದೆಯೂ ಸಹ ನನ್ನ ಅಭಿಪ್ರಾಯವೇನಿರುತ್ತೆಂಬುದನ್ನು ಖಚಿತವಾಗಿ ತಿಳಿಸಿರುವುದರಿಂದ ಈಗ ನಾನು ಅದನ್ನು ಗೋಪ್ಯವಾಗಿಟ್ಟುಕೊಳ್ಳುವುದು ನ್ಯಾಯವಲ್ಲವೆಂಬ ದೃಷ್ಟಿಯಿಂದ ನಾನೀಗ ಮಾತನಾಡಲು ಪ್ರಯತ್ನಪಡುತ್ತೇನೆ. ಎಂದು ಜನರು ಈ ದೇಶವನ್ನು ಭಾಷಾವಾರು ತತ್ವದಮೇಲೆ ವಿಭಜನೆ ಮಾಡಬೇಕೆಂದು ಹೇಳಿದರೋ ಆ ದಿವಸವೇ ನಾನು ಇದನ್ನು ತೀವ್ರವಾಗಿ ವಿರೋಧಮಾಡಿದ್ದೇನೆ. ಈ ವಿಚಾರದಲ್ಲಿ ನಾವು ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ಜನರ ಅಭಿಪ್ರಾಯವನ್ನೂ ಪಡೆದನಂತರ ಈ ವಿಚಾರವಾಗಿ ಮಾತನಾಡತಕ್ಕದ್ದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ಈಗಾಗಲೇ ಭಾರತ ಸರ್ಕಾರದವರು ಆಂಧ್ರ ಪ್ರಾಂತ್ಯವನ್ನು ಭಾಷಾವಾರು ತತ್ವದಮೇಲೆ ನಿರ್ಮಾಣ ಮಾಡಲಿಲ್ಲವೇ ಎಂದು ಕೆಲವರು ಕೇಳಬಹುದು. ಆದರೆ ಅವರು ಹಾಗೆ ಮಾಡಿದ್ದು ಬಹಳ ತಪ್ಪು. ಈ ದಿವಸ ಆಂಧ್ರ ಪ್ರಾಂತ್ಯವನ್ನು ಯಾವ ರೀತಿ ರಚನೆ ಮಾಡಿದ್ದಾರೋ ಅದೇ ರೀತಿ ಇತರ ಪ್ರಾಂತ್ಯಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದರೆ ಅದು ನಮ್ಮ ದೇಶಕ್ಕೆ ಮುಂದೊಂದು ವಿಪತ್ತೆಂದು ನಾನು ಹೇಳುತ್ತೇನೆ. ಆದರೆ ಈಗಾಗಲೇ ಮಾತನಾಡಿರತಕ್ಕಂಥ ಸದಸ್ಯರಲ್ಲಿ ಕೆಲವರು ಅಖಂಡ ಕರ್ಣಾಟಕವಾಗಬೇಕೆಂದು ಹೇಳಿದ್ದರೆ ಮತ್ತೆ ಕೆಲವರು ಹೊರಗಿನ ಕನ್ನಡ ಪ್ರದೇಶದಲ್ಲಿ ಸರಿಯಾದ ಸ್ಕೂಲುಗಳ ಅನುಕೂಲತೆಯಿಲ್ಲ, ಅಲ್ಲಿ ಕೆರೆಗಳಿಲ್ಲ, ರಸ್ತೆಗಳಿಲ್ಲ ಎಂದು ಹೇಳಿದ್ದಾರೆ. ಇವುಗಳೆಲ್ಲಾ ಸಣ್ಣಪುಟ್ಟ ವಿಷಯಗಳೆಂದು ನಾನು ಅಲ್ಲಗಳೆಯುವಂತಿಲ್ಲ. ಆದರೆ ನಮಗೆ ಈಗಾಗಲೇ ಆರ್ಥಿಕ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ).

ಮುಗ್ಗಟ್ಟು ಜಾಸ್ತಿಯಾಗುತ್ತಿದೆ ಅನ್ನುವಾಗಲೇ ಬಳ್ಳಾರಿ ಜಿಲ್ಲೆಯೊಂದು ನಮ್ಮ ಮೈಸೂರಿಗೆ ಸೇರಿದ್ದರಿಂದ ನಮಗೆ ಎಷ್ಟೊಂದು ದುಡ್ಡಿನ ತೊಂದರೆ ಬಂತು! ಇದಕ್ಕಾಗಿ ತಾವು ಹೇಳಬಹುದು, ಕೇಂದ್ರ ಸರ್ಕಾರದವರು ನಮಗೆ ಸಹಾಯ ಮಾಡುತ್ತಾರೆ ಎಂದು. ಆದರೆ ನಮಗೆ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ಅಂಥ ನೆರವು ಏನು ಬಂದಿದೆ ಎಂದು ಕೇಳುತ್ತೇನೆ. ನಮಗೆ ಈಗಾಗಲೇ 50-60 ಲಕ್ಷ ರೂಪಾಯಿಗಳ ಡಿಫಿಸಿಟ್ ಜಾಸ್ತಿಯಾಯಿತು. ಇದೇ ಡಿಫಿಸಿಟ್ ಇನ್ನು ಮುಂದಕ್ಕೂ ಇದ್ದೇ ಇರುತ್ತದೆ. ಹೀಗೆ ಈ ಇತರ ಭಾಗಗಳನ್ನು ನಮ್ಮ ಮೈಸೂರಿಗೆ ಸೇರಿಸಿಕೊಳ್ಳುವುದರಿಂದ ಆ ಜನರೆಲ್ಲರ ಕಷ್ಟ-ನಷ್ಟಗಳನ್ನು ನಾವು ಅನುಭವಿಸಬೇಕಾಗಿದೆ. ಯಾರದೋ ಹಿತಕ್ಕಾಗಿ ನಾವು ಈ ದಿವಸ ನಮ್ಮ ಜನರಮೇಲೆ ತೆರಿಗೆ ಹಾಕಬೇಕಾಗಿದೆ. ಆದರೆ ಈಗಾಗಲೇ ನಾವು ನಮ್ಮ ಜನರ ಬೆನ್ನು ಮುರಿದು ಹೋಗುವತನಕ ತೆರಿಗೆಗಳನ್ನು ಹಾಕಿದ್ದೇವೆ. ಮೊನ್ನೆತಾನೆ ನಾವಿನ್ನೂ ನಮ್ಮ ಜನರ ಮೇಲೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು - ಹಾಕಿದ್ದೇವೆ. ಹೀಗೆ ನಾವು ಈ ದಿವಸ ಅನೇಕ ಕಷ್ಟನಷ್ಟಗಳಿಗೆ ಆಗಲೇ ಈಡಾಗಿದ್ದೇವೆ. ಆದ್ದುದರಿಂದ ನಾವು ಯಾವ ಕೆಲಸವನ್ನೇ ಮಾಡಲಿ ದೂರದೃಷ್ಟಿಯನ್ನಿಟ್ಟುಕೊಂಡು ಮಾಡಬೇಕಾಗಿದೆ ಈ ದಿವಸ ನಮ್ಮ ದೇಶದ ಹೊರಗಡೆಯಿರತಕ್ಕ ನಮ್ಮ ಕನ್ನಡ ಬಂಧುಗಳಿಗೆ ತೊಂದರೆಗಳಿರಬಹುದು. ಅವರಿಗೆ ಆಡಳಿತ ದೃಷ್ಟಿಯಿಂದಲೂ ತೊಂದರೆ ಇರಬಹುದು. ಆದರೆ ಇದರಲ್ಲಿ ಒಂದು ಕೋಮುವಾರು ಬಣ್ಣವನ್ನು ಹಚ್ಚಿ ಈ ಅಖಂಡ ಕರ್ಣಾಟಕಕ್ಕೆ ಒಕ್ಕಲಿಗರು ವಿರೋಧವಾಗಿದ್ದಾರೆಂದೂ ಲಿಂಗಾಯಿತರು ಪರವಾಗಿದ್ದಾರೆಂದೂ ಹೇಳುತ್ತಿರುವುದು ಖಂಡಿತ ಲಾಯಖ್ಖಾದ್ದಲ್ಲ ಎಂದು ಹೇಳುತ್ತೇನೆ. ಆಡಳಿತಗಾರರು ತಮ್ಮ ಜವಾಬ್ದಾರಿಯನ್ನು ತಾವು ಸರಿಯಾಗಿ ಒಂದು ವಿಮರ್ಶಾತ್ಮಕ ದೃಷ್ಟಿಯಿಲ್ಲದೆ ಮಾಡಿದ್ದೇ ಆದರೆ ಅವರು ತಮ್ಮ ಕರ್ತವ್ಯದಲ್ಲಿ ಭ್ರಷ್ಟರಾಗುತ್ತಾರೆ. ಆದರೆ ಈ ದಿವಸ ನಮಗೆ ಕಾಣುತ್ತಿರುವ ರೀತಿಯಲ್ಲಿ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳುತ್ತಿರುವ ರೀತಿಯಲ್ಲಿ, ನಾವು ಹೊರಗಡೆಯಿರತಕ್ಕಂಥ ನಮ್ಮ ಸಹೋದರರಿಗೆ ರಸ್ತೆಗಳ ಸೌಕರ್ಯ, ಬಾವಿ, ಕೆರೆ, ಸ್ಕೂಲು ಇತ್ಯಾದಿಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಹೀಗೆ ನಾನಾ ಬಾಬುಗಳಲ್ಲಿ ಅವರಿಗೆ ಈ ದಿವಸ ತುಂಬ ಅನಾನುಕೂಲವಿರುತ್ತದೆ. ಆದರೆ ಈ ಪ್ರಜಾಪ್ರಭುತ್ವಾಡಳಿತದಲ್ಲಿ ನಾವೆಲ್ಲಾ ಒಂದೇ ರೀತಿಯಾಗಿ ಕ್ಷೇಮವಾಗಿರಬೇಕೆಂದು ನಾನೂ ಸಹ ಹೇಳುತ್ತೇನೆ. ಈಗ ಕೇಂದ್ರ ಸರ್ಕಾರದವರು ಜಾರಿಗೆ ತಂದಿರುವ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಾಂತ್ಯಗಳೆಲ್ಲಾ ವ ಎಂದುವರಿಯಲಿ. ಹಾಗೆ ಹಿಂದುಳಿದ ಪ್ರದೇಶಗಳೆಲ್ಲಾ ಮುಂದಕ್ಕೆ ಬರಲಿ. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಭಾಷಾವಾರು ಆಧಾರದಮೇಲೆ ರಾಜ್ಯಗಳನ್ನು ವಿಂಗಡಿಸಿದರೆ ತುಂಬ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಈಗ ಮದರಾಸ್ ಪ್ರಾಂತ್ಯದಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಇರತಕ್ಕಂಥ ಕನ್ನಡ ಜನರಿರುವ ಪ್ರದೇಶವನ್ನು ಮೈಸೂರಿಗೆ ಸೇರಿಸಿದರೆ ಅವರಿಗೆ ತೊಂದರೆ ಎಷ್ಟಾಗುತ್ತದೆಂಬುದನ್ನು ನಾವು ಆಲೋಚನೆ ಮಾಡಬೇಕು. ಆದರೆ ಹೀಗೆ ಈ ದಿವಸ ಹಿಂದುಳಿದಿರತಕ್ಕಂಥ ಪ್ರದೇಶಗಳ ಅಭಿವೃದ್ಧಿಗಾಗಿ ಏನೇನು ಅನುಕೂಲ ಮಾಡಬೇಕೆಂಬುದನ್ನು ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡಬೇಕಾಗಿದೆ. ಆಡಳಿತಕ್ಕೆ ಚಿಕ್ಕ ಚಿಕ್ಕ ಪ್ರಾಂತಗಳು ಇದ್ದರೆ ಅನುಕೂಲ. ಹತ್ತು-ಇಪ್ಪತ್ತು ಲಕ್ಷ ಪ್ರಜೆಗಳಿಗೆ ಒಂದು ಪ್ರಾಂತ್ಯ ಮಾಡಿ ಎಂದು ಹೇಳುವುದಿಲ್ಲ. ಮೈಸೂರು ಸಂಸ್ಥಾನದ ಜನಸಂಖ್ಯೆ ಸುಮಾರು ಒಂದು ಕೋಟಿ ಇದೆ. ಒಂದು ಕೋಟಿ ಪ್ರಜಾ ಸಂಖ್ಯೆಗೆ ಒಂದು ಪ್ರಾಂತ್ಯಮಾಡಿ, ಅದರಿಂದ ಮೈಸೂರು ಸಂಸ್ಥಾನ ಮುಂದುವರಿಯುತ್ತದೆ ಎಂದು ಹೇಳುತ್ತೇನೆ. ನನ್ನ ಸಹೋದರರು ಮಾತನಾಡುತ್ತಾ ಮೈಸೂರು ಚಿಕ್ಕ ಪ್ರದೇಶವಾದ್ದರಿಂದ ಮುಂದುವರಿದಿಲ್ಲ, ಮಹಾರಾಜರ ಕೃಪಾಕಟಾಕ್ಷದಿಂದಲೂ ಅದರ ಜೊತೆಗೆ ಜವಾಬ್ದಾರಿ ಆಡಳಿತ ಇದ್ದುದರಿಂದಲೂ ಮುಂದುವರಿಯಿತು ಎಂದು ಹೇಳಿದರು. ಅಲ್ಲಿ ಸ್ಕೂಲುಗಳಿಗೆ, ಆಸ್ಪತ್ರೆಗಳಿಗೆ ತೊಂದರೆ ಇದೆ. ರಸ್ತೆಗಳ ಸೌಕರ್ಯ ಇಲ್ಲ. ತವ ಗೆ ಆಗಬೇಕಾದ ಅನುಕೂಲಗಳನ್ನು ಮಾಡಿಕೊಡಿ ತಾವು ಹಿಂದುಳಿದಿದ್ದೇವೆ ಎಂಬ ವಿಶಾಲವಾದ ಭಾವನೆಯಿಂದ ಒಂದು ಪ್ರಾಂತ್ಯ ರಚನೆ ಮಾಡಿ ಎಂದು ಹೇಳುವುದಾದರೆ ಮಲೆನಾಡಿನ ಪ್ರಕೃತಿ ಸೌಂದರ್ಯ ನೋಡಿ, ಮಲೆನಾಡಿನ ಗೋಮತೇಶ್ವರನನ್ನು ನೋಡಿ ಆ ರೀತಿ ಪ್ರಾಂತ ರಚನೆ ಮಾಡುವುದಕ್ಕಾಗುವುದಿಲ್ಲ. ನಮ್ಮ ಆಡಳಿತ ಹೇಗಿದೆ ನಮ್ಮ ವಿದ್ಯಾಭ್ಯಾಸ ಸಮರ್ಪಕವಾಗಿದೆಯೇ ಎಂಬುದನ್ನು ವಿಮರ್ಶೆ ಮಾಡಿದ ಪಕ್ಷದಲ್ಲಿ ಸ್ಕೂಲುಗಳು ಇಲ್ಲದೆ ಕಷ್ಟಪಡುತ್ತಿದ್ದೇವೆ ಮತ್ತು ಇದ್ದ ಸ್ಕೂಲುಗಳಿಗೆ ಕಟ್ಟಡಗಳೇ ಇಲ್ಲ. ತತ್ವ ಮುಖ್ಯವಲ್ಲ, ನಮಗೆ ಕೆಲಸ ಮಾಡುವುದು ಮುಖ್ಯವಾಗಿರುತ್ತದೆ. ಒಂದುವೇಳೆ ಭಾಷಾ ಆಧಾರದಮೇಲೆ ಪ್ರಾಂತಗಳನ್ನು ಹಂಚುತ್ತಾರೆಂದು ಇಟ್ಟುಕೊಳ್ಳೋಣ. ಆ ರೀತಿ ಹಂಚುವಾಗ ಕೋಲಾರ, ಬೆಂಗಳೂರು ಮತ್ತು ಮೈಸೂರಿನ ಇತರ ಭಾಗಗಳು ಹೊರಟುಹೋದರೆ ಮೈಸೂರಿನ ವ್ಯಕ್ತಿತ್ವ ಏನೂ ಉಳಿಯುವುದಿಲ್ಲ. ಮೊದಲಿನಿಂದಲೂ ನಮ್ಮನ್ನೇ ನಂಬಿಕೊಂಡು ಬಂದಿರತಕ್ಕ ಜನಗಳನ್ನು ಕಷ್ಟಕ್ಕೆ ಗುರಿಪಡಿಸುವುದು ಸರಿಯಲ್ಲ. ಹಿಂದೆ ಕರ್ಣಾಟಕದ ರಾಜರು ಯುದ್ಧಮಾಡಿ, ಕರ್ಣಾಟಕ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದರು. ಹಾಗೆ ಸ್ಥಾಪನೆ ಮಾಡುವಾಗ ಜನಗಳಮೇಲೆ ಒಂದು ಗುಲಾಮಗಿರಿ ಹೊರಿಸಿದರು. ಇವತ್ತು ಸಾರ್ವಜನಿಕ ಚುನಾವಣೆ ಇದೆ., ಜನರ ಕುಂದು ಕೊರತೆಗಳನ್ನು ಕೇಳುವುದಕ್ಕೆ ಭಾರತ ಸರ್ಕಾರ ಇದೆ. ಈ ರೀತಿ ಇರುವಾಗ ನಮಗೆ ಬೇರೆ ಬೇರೆ ಪ್ರಾಂತಗಳನ್ನು ಕೊಡಬೇಕೆಂದು ಕೇಳುವುದು ಅಷ್ಟು ಉತ್ತಮವಲ್ಲವೆಂದು ಹೇಳುತ್ತಿದ್ದೇನೆ. ಒಂದುವೇಳೆ ಭಾಷೆಯನ್ನೇ ಆಧಾರವಾಗಿ ತೆಗೆದುಕೊಂಡು ಕರ್ಣಾಟಕ ಪ್ರಾಂತ್ಯವನ್ನು ಮಾಡುತ್ತೇವೆಂದು ಹೇಳಿದರೆ, ಕರ್ಣಾಟಕ ಪ್ರಾಂತ ಮಾಡಿದ ಮೇಲೂ ಕೂಡ 30-32 ಲಕ್ಷ ಕನ್ನಡಿಗರು ಉಳಿದು ಹೋಗುತ್ತಾರೆ. ಈ ರೀತಿ ಕನ್ನಡ ಸಾಮ್ರಾಜ್ಯವನ್ನು ಯಾರ ಸಂತೋಷಕ್ಕೋಸ್ಕರ ಕಟ್ಟಬೇಕು ? ಕೇಂದ್ರದಲ್ಲಿ ಸರ್ಕಾರ ಬಲಯುತವಾಗಿಲ್ಲದೆ ಹೋಗಿದ್ದರೆ ಆಂಧ್ರರೂ ಕನ್ನಡಿಗರೂ ಬಳ್ಳಾರಿಗಾಗಿ ಯುದ್ಧ ಮಾಡಬೇಕಾಗುತ್ತಿತ್ತು. ಶ್ರೀ ನಾರಾಯಣರೆಡ್ಡಿಯವರೂ ಮತ್ತು ಶ್ರೀಮತಿ ಸಿದ್ದಮ್ಮನವರೂ ಮಾತನಾಡಿದುದನ್ನು ನೋಡಿದರೆ ಯುದ್ಧ ಮಾಡುತ್ತಾರೆಯೇ ಎಂಬ ಭಾಸವಾಗುತ್ತಿತ್ತು. ತೆಲುಗು, ತೆಲುಗು ಎಂದು ಅವರು ಹೇಳುವುದು, ಕನ್ನಡ, ಕನ್ನಡ ಎಂದು ಇವರು ಹೇಳುವುದು. ಇಂತಹ ಶಬ್ದಗಳಿಗೆ ನಾವು ಮಾರುಹೋಗಬಾರದು. ಒಳ್ಳೆಯ ವಿಷಯಗಳನ್ನು ನೋಡಿ, ತೂಲನಮಾಡಿ ಐಕ್ಯತೆಯನ್ನು ಸಂಪಾದನೆ ಮಾಡಿಕೊಳ್ಳಬೇಕು. ಭಾಷಾವಾರ ತತ್ವದಮೇಲೆ ರಾಜ್ಯವನ್ನು ಕಟ್ಟಿದರೆ ಖಂಡಿತವಾಗಿ ಭಾರತದ ಐಕ್ಯತೆಗೆ

ಕುಂದುಬರುತ್ತದೆ; ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ; ರಾಜಕೀಯದಲ್ಲಿ ಬಿಕ್ಕಟ್ಟು ಬರುತ್ತದೆ. ಆದ್ದರಿಂದ ಭಾಷೆಯ ಆಧಾರದಮೇಲೆ ಪ್ರಾಂತಗಳನ್ನು ರಚಿಸತಕ್ಕದ್ದು ಸಾಧುವಾದುದಲ್ಲ. ಆದಕಾರಣ ಭಾಷಾವಾರು ತತ್ವದ ಪ್ರಕಾರ ಪ್ರಾಂತಗಳನ್ನು ವಿಭಜನೆ ಮಾಡುವುದಕ್ಕೆ ನಾನು ವಿರೋಧನಾಗಿದ್ದೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಇಜಾರಿ ಸಿರಸಪ್ಪ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೇ, ಪ್ರಾಂತ್ಯಗಳ ವಿಂಗಡನೆಯ ವಿಚಾರವಾಗಿ ಮೈಸೂರು ಸರ್ಕಾರದವರಿಂದ ರಚಿಸಲ್ಪಟ್ಟ ಶೇಷಾದ್ರಿ ಸಮಿತಿಯ ವರದಿಯ ಮೇಲೆ ನಡೆದ ಚರ್ಚೆಯನ್ನು ನಾನು ಆಮೂಲಾಗ್ರವಾಗಿ ಕೇಳಿದ್ದೇನೆ. ಅನೇಕ ಮಾನ್ಯ ಸದಸ್ಯರು ಅಂಕಿ ಸಂಖ್ಯೆಗಳ ಸಹಾಯದಿಂದ ಈ ವಿಷಯಗಳ ಪೂರ್ಣ ಚಿತ್ರವನ್ನು ಚೆನ್ನಾಗಿ ತಿದ್ದಿ ತೋರಿಸಿಕೊಟ್ಟಿದ್ದಾರೆ. ಬಹುಶಃ ನಾನು ಯಾವ ಒಂದು ಹೆಚ್ಚಿನ ಅಂಕಿಅಂಶಗಳ ಕಡೆಗೆ ಗಮನ ಕೊಡದೆ ಸ್ಥೂಲವಾಗಿ ಕರ್ಣಾಟಕದ ಜನರೆಲ್ಲರೂ ಒಟ್ಟುಗೂಡಿ ಒಂದು ಆಡಳಿತಕ್ಕೆ ಏಕೆ ಬರಬೇಕೆಂದು ಹೇಳಬಯಸುತ್ತೇನೆ. ಇಂದು ಮಾತನಾಡಿದ ಅನೇಕ ಜನರಲ್ಲಿ ಮೈಸೂರು ಈಗ ಹೇಗೆ ಇದೆಯೋ ಹಾಗೆಯೇ ಮುಂದೆಯೂ ಇರಲಿ ಎಂಬ ಅಭಿಪ್ರಾಯವು ಕಂಡುಬಂದುದು ತಮಗೆಲ್ಲಾ ಗೊತ್ತಿದೆ. ಹಿಂದೆ ಮೈಸೂರು ಹೀಗೆ ಇರಲಿಲ್ಲ. ಇನ್ನು ಮುಂದೆ ಮೈಸೂರು ಈ ರೀತಿ ಇರುವುದಕ್ಕೆ ಸಾಧ್ಯವಿಲ್ಲ. ಹಿಂದೆ ಚಾಳುಕ್ಯರು, ಕದಂಬರು, ರಾಷ್ಟ್ರಕೂಟರು, ಮತ್ತು ಅನೇಕ ರಾಜರ ಕಾಲದಲ್ಲಿ ಚರಿತ್ರೆಯ ಕಡೆ ಲಕ್ಷ್ಯ ಕೊಟ್ಟು ನೋಡಿದರೆ ಮೈಸೂರು ಎಷ್ಟೊಂದು ವಿಸ್ತಾರವಾದ ಕನ್ನಡ ನಾಡು ಆಗಿತ್ತೆಂಬುದು ನಮಗೆ ಗೋಚರವಾಗುತ್ತದೆ. ಆ ಮೇಲೆ ಬ್ರಿಟಿಷ್ ಸರ್ಕಾರದ ಅಂಕಿತದಲ್ಲಿ ಸಿಕ್ಕಿಕೊಂಡಾಗ ನಮ್ಮಲ್ಲಿದ್ದ ಒಗ್ಗಟ್ಟನ್ನು ಮುರಿದು ನಮ್ಮಲ್ಲಿ ರಾಷ್ಟ್ರೀಯತೆ ಉಳಿಯದಂತೆ ನಮ್ಮ ಜನರನ್ನು ವಿಂಗಡನೆ ಮಾಡಿ, ಅವರ ಆಡಳಿತ ಅವರ ಕೈಯಲ್ಲಿ ನಿರಂತರವೂ ಇರಲು ನಮ್ಮ ಒಗ್ಗಟ್ಟು ಮತ್ತು ಸ್ವಾತಂತ್ರ್ಯ ಮನೋಭಾವದ ಬೆಳವಣಿಗೆಯನ್ನು ಕುಗ್ಗಿಸುವುದಕ್ಕೆ ನಿರ್ಮಿಸಿದಂತಹ ಒಂದು ರೇಖೆಯಲ್ಲಿ ನಾವು ಇವತ್ತಿನ ದಿವಸ ಜೀವಿಸಿಕೊಂಡು ಹೋಗುತ್ತಾ ಇರುವುದು ತಮಗೆಲ್ಲರಿಗೂ ಗೊತ್ತಿದೆ. ಇನ್ನೊಂದು ವಿಚಾರ. ಶ್ರೀಮನ್ಮಹಾರಾಜರ ವಿಚಾರವಾಗಿ ಬಹುಶಃ ಎಲ್ಲರೂ ಮಾತನಾಡಿದ್ದಾರೆ. ನಾನು ಮಹಾರಾಜರ ವಿಷಯವಾಗಿ ಒಂದು ಅಂಶವನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಯಾವ ಮಹಾರಾಜರು ಕರ್ಣಾಟಕ ರತ್ನ ಸಿಂಹಾಸನಾಧೀಶ್ವರರೆಂದು ಹೊಗಳಿಸಿಕೊಳ್ಳುತ್ತಿದ್ದಾರೋ ಅಂತಹ ಮಹಾರಾಜರ ಆಡಳಿತದಲ್ಲಿ ಹೊರಗಿನ ಕನ್ನಡ ನಾಡು ಬರಕೂಡದು ಎಂದು ಹೇಳಲು ಮನಸ್ಸು ಹೇಗೆ ಒಪ್ಪುತ್ತದೆ ಎಂದು ನಾನು ಕೇಳಬಯಸುತ್ತೇನೆ.

Sri Mulka GOVINDA REDDY (Chitaldrug).—We don't want Rajapramukh.

ಶ್ರೀ ಇಜಾರಿ ಸಿರಸಪ್ಪ.—ಅವರು ಇರುವವರೆಗೂ ನಾವು ಅವರು ಅಂಕಿತದಲ್ಲಿ ಇರಲೇಬೇಕು. Part (A) ಮತ್ತು Part (B) ಸ್ಟೇಟುಗಳು ಇರುವವರೆಗೂ ಮಹಾರಾಜರು ಇರಲೇಬೇಕಾಗುತ್ತದೆ. ಆಮೇಲೆ ಜನತೆಯ ಹಿತ ಸಾಧನೆಯಾಗುವುದಾದರೆ ಪ್ರಾಂತ್ಯಗಳ ಪುನರ್ವಿಂಗಡನೆಯನ್ನು ಮಾಡಬಹುದೆಂದು ಅನೇಕ ಪ್ರಾಂತ್ಯ ರಚನೆಯ ವಿರೋಧಿಗಳೂ ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಮಾತ್ರ ಹೇಳಬಯಸುತ್ತೇನೆ. ಮೈಸೂರಿನ ಹಿತಕ್ಕಾಗಿ ಮಾತ್ರ ಈ ಪ್ರಾಂತ್ಯದ ಪುನರ್ವಿಂಗಡನೆಯನ್ನು ಮಾಡಬೇಕೆಂಬ ದೃಷ್ಟಿಯನ್ನಿಟ್ಟುಕೊಳ್ಳಬೇಕೆಂದು ರಾಜಪ್ರಮುಖರು ಹೇಳಲಿಲ್ಲ. ಈ ಪುನರ್ವಿಂಗಡನೆಗೆ ಸಂಬಂಧಪಟ್ಟ ಎಲ್ಲಾ ಜನರ ಹಿತವನ್ನು ಸಾಧಿಸಬಹುದಾದರೆ ಮಾತ್ರ ಅಂತಹ ಪುನರ್ವಿಂಗಡನೆಯಾಗಬಹುದು ಎಂದು ಹೇಳುತ್ತೇನೆ. ಮೈಸೂರಿನ ಹಿತವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಳ್ಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಎಲ್ಲಾ ಕನ್ನಡನಾಡಿನ ಜನರೂ ಒಂದೇ ಆಡಳಿತಕ್ಕೆ ಒಳಪಡುವಲ್ಲಿ ಎಲ್ಲಾ ಜನರ ಹಿತವನ್ನೂ ಸಾಧಿಸಬಹುದು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡ ಈ ವಿಚಾರವನ್ನು ಯೋಚನೆ ಮಾಡಿದರೆ ಮಾತ್ರ ಅದು ಸಮಂಜಸವಾಗಿ ಕಾಣುತ್ತದೆ ಎಂದು ನನ್ನ ಭಾವನೆ.

ಇನ್ನು ಅಂಕಿಅಂಶಗಳ ವಿಚಾರ. ಶೇಷಾದ್ರಿ ಸಮಿತಿಯವರ ಅಂಕಿಅಂಶಗಳು ತಪ್ಪು, ಅವರು ಅನ್ಯಾಯ ಮಾಡಿದ್ದಾರೆ ಎಂದು ಕರ್ಣಾಟಕ ಪ್ರಾಂತ್ಯವಾಗಬೇಕು ಎಂದು ಹೇಳುವ ಜನ ಯಾರೂ ಹೇಳಲಿಲ್ಲ. ಅವರು ತಿಳುವಳಿಕೆಯುಳ್ಳವರು. ಜವಾಬ್ದಾರಿಯುತ ಸರ್ಕಾರಗಳು ಕೊಟ್ಟು ಅನೇಕ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಇದು ಅಪೂರ್ಣವೆಂದು ಮಾತ್ರ ನಾನು ಹೇಳಬಯಸುತ್ತೇನೆ. ಫಜಲಾಲಿ ಸಮಿತಿಯವರು ಸರಕಾರದ ಅಭಿಪ್ರಾಯವನ್ನೂ ಸಾರ್ವಜನಿಕ ಅಭಿಪ್ರಾಯವನ್ನೂ ಮತ್ತು ಸಂಘ ಮತ್ತು ಗೋಷ್ಠಿಗಳ ಅಭಿಪ್ರಾಯವನ್ನೂ ಪಡೆದು ಈ ವಿಚಾರದಲ್ಲಿ ಅನೇಕ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ಒಂದು ತೀರ್ಮಾನಕ್ಕೆ ಬರುವವರಾಗಿದ್ದಾರೆ. ಶೇಷಾದ್ರಿ ಸಮಿತಿಯವರು ಮುಂಬಯಿ, ಕರ್ಣಾಟಕ, ಮತ್ತು ಹೈದರಾಬಾದ್ ಕರ್ಣಾಟಕ ಸಂಬಂಧವಾಗಿ ಆಯಾ ಸರ್ಕಾರದವರು ಕೊಟ್ಟ ಅಂಕಿಅಂಶಗಳನ್ನು ಇಟ್ಟಿದ್ದಾರೆ. ಆದು ಪರಿಪೂರ್ಣವಲ್ಲವೆಂದು ಮಾತ್ರ ನಾನು ತಮ್ಮ ಮುಂದೆ ಹೇಳಬಯಸುತ್ತೇನೆ. ಶ್ರೀ ದೇವರಾಜ ಅರಸ್ ಮತ್ತು ಶ್ರೀ ಪುಟ್ಟಸ್ವಾಮಿಯವರು ಮಾತನಾಡುವಾಗ ಬಹು ನಿರಾಶಾದಾಯಕವಾದ ಕನ್ನಡ ನಾಡಿನ ಚಿತ್ರವನ್ನು ನಮ್ಮ ಮುಂದೆ ಕೊಟ್ಟಿದ್ದಾರೆಂದು ಹೇಳಬೇಕಾಗಿದೆ. ಆರ್ಥಿಕ ತಜ್ಞರೂ, ರಾಜಕೀಯ ತಜ್ಞರೂ ಮತ್ತು ಸಮಾಜದ ಸೇವೆಯನ್ನು 30-35 ವರ್ಷಗಳಿಂದ ಮಾಡಿಕೊಂಡು ಬಂದಂಥ ಜನರೂ ಅಂಕಿ ಸಂಖ್ಯೆಗಳ ಮೂಲಕ ತಮ್ಮ ಧೋರಣೆಯನ್ನು ವ್ಯಕ್ತಪಡಿಸಿದ್ದಾರೆ. ಇವೆಲ್ಲಕ್ಕೂ ನಿಗಾ ಕೊಡದೆ ಶೇಷಾದ್ರಿ ಸಮಿತಿಯವರು ಕೊಟ್ಟ ಅಪೂರ್ಣವಾದ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕನ್ನಡದ ಎಲ್ಲಾ ಭಾಗಗಳು ಒಂದುಗೂಡುವುದು ಬೇಡ, ಮೈಸೂರು ಇದ್ದ ಹಾಗೆಯೇ ಉಳಿಯಲಿ, ನಾವು ಪ್ರಗತಿಯನ್ನು ಸಾಧಿಸೋಣ ಎಂದು ಸಂಕುಚಿತ ಬುದ್ಧಿಯನ್ನು ತಾಳಿರುವುದು ವಿಷಾದಕರವಾದುದು ಎಂದು ಹೇಳುತ್ತೇನೆ. ಶ್ರೀ ಕಂಠಿಯವರು ಅಂಕಿ ಸಂಖ್ಯೆಗಳ ವಿಚಾರ ಮೊನ್ನೆ ಮಾತನಾಡಿದಾಗ ಪ್ರಶ್ನೆಗಳ ಸುರಿಮಳೆಯಾಯಿತು. ಶ್ರೀ ಕಂಠಿಯವರು ಹೇಳಿದ ಅಂಕಿ ಸಂಖ್ಯೆಗಳು ಹೇಗೆ ನಿಜವಾದುವು ಮತ್ತು ಆಧಾರಯುತವಾದುವು ಎಂದು ಕೇಳಿದ್ದು ಜ್ಞಾಪಕವಿದೆ. ಅವರು ಮುಂಬಯಿನಲ್ಲಿ ಹಳ್ಳಿಹಳ್ಳಿಗೂ ಮಾಡಿಕೊಂಡಿರುವ ರಸ್ತೆಗಳ ವಿಚಾರದಲ್ಲಿ ಯಾವ ವಿಧವಾದ ಅಂಕಿ ಅಂಶಗಳೂ ಶೇಷಾದ್ರಿ ಸಮಿತಿ ವರದಿಯಲ್ಲಿ ದೊರೆಯುವಂತಿಲ್ಲ ಎಂದು ಹೇಳಿದರು, ಆಸ್ಪತ್ರೆಗಳ ವಿಚಾರ ತೆಗೆದುಕೊಂಡಾಗ ಖಾಸಗೀ ರೀತ್ಯ ಆಸ್ಪತ್ರೆಗಳ ಮತ್ತು ಸಾರ್ವಜನಿಕ ಹಣದಿಂದ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮುನಿಸಿಪಾಲಿಟಿಗಳ ಧನ ಸಹಾಯದಿಂದ ನಡೆದುಕೊಂಡುಬಂದ Health Centreಗಳ

(ಶ್ರೀ ಇಜಾರಿ ಸಿರಸಪ್ಪ.)

ವಿಚಾರ ಏನೂ ಕಂಡು ಬರುತ್ತಾ ಇಲ್ಲ. ವಿಲೇಜ್ ಪಂಚಾಯಿತಿಗಳ ಸಹಾಯದಿಂದ ಔಷಧೀ ಸಾಮಗ್ರಿಗಳನ್ನು ಒದಗಿಸಿಕೊಟ್ಟು ಜನರ ರೋಗರುಜಿನಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದು ಯೋಜನೆಯನ್ನು ಮುಂಬಯಿ ಸರ್ಕಾರದವರು ಕೈಕೊಂಡಿರುವುದು ತಮಗೆಲ್ಲರಿಗೂ ಗೊತ್ತಿದೆ. ಪ್ರಪಂಚದಲ್ಲಿ ವಿಖ್ಯಾತವಾಗಿರುವ B. C. G. Vaccination ನಮ್ಮಲ್ಲಿ ಹೆಚ್ಚಿಗೆ ನಡೆದಿದೆಯೋ, ನಿಮ್ಮಲ್ಲಿ ಹೆಚ್ಚಿಗೆ ನಡೆದಿದೆಯೋ ಎಂಬುದನ್ನು ಸ್ವಲ್ಪ ಲಕ್ಷ್ಯಗೊಟ್ಟು ನೋಡಬೇಕೆಂದು ವಿನಂತಿ ಮಾಡುತ್ತೇನೆ. ಖನಿಜ ಸಂಪತ್ತುಗಳ ವಿಚಾರವಾಗಿ ಶ್ರೀ ದೇವರಾಜ ಅರಸಿನವರು ಖನಿಜಗಳು ಸಿಕ್ಕುವುದು imaginery ಎಂದು ಹೇಳಿದರು. ಅನೇಕ ತಜ್ಞರೂ, ಮೆಟಲರ್ಜಿಸ್ಟ್ಸ್ ಸಂಶೋಧನೆ ಮಾಡಿ ಹಿಂದೂಸ್ಥಾನದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ಖನಿಜ ಸಂಪತ್ತು ದೊರಕಬಹುದು ಎಂದು ಒಂದು ವರದಿ ರೂಪವಾಗಿ ಸರ್ಕಾರಕ್ಕೆ ಕೊಟ್ಟಿರುವಾಗ ಖನಿಜಗಳು ಸಿಕ್ಕಿದರೂ ಸಿಕ್ಕಬಹುದು, ಸಿಕ್ಕದೆ ಹೋದರೂ ಹೋಗಬಹುದು ಎಂಬ ಹೇಳಿಕೆ ಅರ್ಥಪೂರ್ಣವಾದುದು ಮತ್ತು ನಿಜವಾದುದು ಎಂದು ಒಪ್ಪಲಿಕ್ಕೆ ನಾನು ತಯಾರಾಗಿಲ್ಲ. ವಿದ್ಯಾಭ್ಯಾಸದ ವಿಚಾರವಾಗಿ ವರದಿಯಲ್ಲಿ ಪ್ರಸ್ತಾಪಮಾಡುತ್ತಾ ವಿದ್ಯಾಭ್ಯಾಸ ಮುಂದುವರಿದಿದೆ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಮಾನ್ಯ ಸಭೆಯ ಮುಂದೆ ಇಡಲು ಬಯಸುತ್ತೇನೆ. ಯಾವಾಗಲೂ ಮೈಸೂರು ಸಂಸ್ಥಾನದಲ್ಲಿ ಬರೀ ಸರ್ಕಾರದ ಸಹಾಯದಿಂದ ಪುಕ್ಕಟ್ಟೆ Scholarship ಮತ್ತು Freeship ಇವುಗಳ ಮೂಲಕ ವಿದ್ಯಾಭ್ಯಾಸವನ್ನು ಪ್ರೌಢಶಾಲೆಗಳವರೆಗೆ ಮುಂದುವರಿಸಿಕೊಂಡು ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಆದರೆ ಮುಂಬಯಿ ಕರ್ಣಾಟಕದ ಕಡೆ ನೋಡಿ. ಸರ್ಕಾರದ ಸಹಾಯವಿಲ್ಲದೆ ಖಾಸಗೀ ಅಥವಾ ಸಾರ್ವಜನಿಕರ ಉತ್ತೇಜನ ಮತ್ತು ಧನ ಸಹಾದಿಂಧ ಮುಂಬಯಿ ಕರ್ಣಾಟಕದಲ್ಲಿ 16 ಕಾಲೇಜುಗಳನ್ನು ನಡೆಸಿಕೊಂಡು ಬಂದಿರುವುದು ಹೆಮ್ಮೆಯ ಮಾತಲ್ಲವೇ? ಅದನ್ನು ಗಮನಿಸಬೇಕಾದುದು ಅತ್ಯಗತ್ಯವೆಂದು ತಮ್ಮ ಮುಂದೆ ಹೇಳುತ್ತೇನೆ. ಇನ್ನು ಹೈದರಾಬಾದಿನ ವಿಚಾರವಾಗಿ ಅನೇಕ ಜನರು ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ಈ ವರದಿಯಲ್ಲಿ ಒಂದು ತಪ್ಪನ್ನು ಮಾಡಿದ್ದಾರೆಂದು ಹೇಳ ಬಯಸುತ್ತೇನೆ; Terms of referenceನಲ್ಲಿ ಸೇರಬಹುದಾದ ಕರ್ಣಾಟಕ ಭಾಗಗಳು ಯಾವುವು ಮತ್ತು ಅವುಗಳ ಆರ್ಥಿಕ, ಸಾಮಾಜಿಕ, ಮತ್ತು ಸಂಸ್ಕೃತಿಯ ವಿಚಾರವಾಗಿ ಹೇಳುತ್ತಾ ಆಯಾಯ ಗಡಿಯಲ್ಲಿ ಕಡಿಮೆ ಜನ ಕನ್ನಡಿಗರು ಇದ್ದಾರೆ, ಇತರ ಹೆಚ್ಚಿನ ಜನ ಇತರ ಭಾಷೆ ಮಾತನಾಡುವವರು ಇದ್ದರೆ ಆಗ ಅವರಲ್ಲಿ ಹೋರಾಟವಾಗಬಹುದು, transfer of population ಆಗಬಹುದು ಎಂದು ಸ್ವಲ್ಪ ಅವರ ಗಡಿಯನ್ನು ವಿಚಾರಿ ಸಮಿತಿಯವರು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂದು ಹೇಳಬಹುದು. ಪ್ರಾಂತಗಳ ಪುನರ್ವಿಂಗಡನೆಯನ್ನು ಕೈಗೊಳ್ಳುವಾಗ ಗಡಿಗಳ ನಿರ್ಣಯದ ವಿಷಯದಲ್ಲಿ ಒಂದು Boundary Commission ಏರ್ಪಾಡು ಮಾಡಿ ಬೌಂಡರಿಯನ್ನು ಗೊತ್ತು ಮಾಡಿದರೆ ಎಲ್ಲಾ ಪಂಗಡದವರೂ ಮತ್ತು ಎಲ್ಲಾ ಪ್ರಾಂತ್ಯಗಳವರೂ ಅದನ್ನು ಒಪ್ಪಿಕೊಳ್ಳಲೇಬೇಕು, ಈ ರೀತಿ ಹೋರಾಟವಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಗಡಿ ನಿರ್ಣಯ ಸಮಿತಿಯವರು ಒಂದು ಗಡಿಯನ್ನು ಗೊತ್ತುಮಾಡಿದ ಮೇಲೆ ಆ ನಿರ್ಣಯಕ್ಕೆ ಎಲ್ಲರೂ ತಲೆಬಾಗಬೇಕಾಗುತ್ತದೆ. ಅದಕ್ಕೆ ಹೋರಾಟ ಮಾಡುವುದು ಒಳ್ಳೆಯದಲ್ಲ. ಆ ರೀತಿ ಮಾಡುವುದೂ ಸಾಧ್ಯವಿಲ್ಲ. ಅದ್ದರಿಂದ transfer of population ಎಂಬ ಅಂಜಿಕೆಯನ್ನು ಹುಟ್ಟಿಸುವಂಥ ಕೆಲವು ಅಭಿಪ್ರಾಯಗಳನ್ನು ಈ ವರದಿಯಲ್ಲಿ ಕೊಟ್ಟಿರುವುದು ಅಷ್ಟೊಂದು ಸಾಧುವಾದುದಲ್ಲ ಎಂದು ಹೇಳುತ್ತೇನೆ, ಹೈದರಾಬಾದ್ ಸಂಸ್ಥಾನದಲ್ಲಿ ಕನ್ನಡ ಭಾಗಗಳು ಹಿಂದುಳಿದಿರುವುದಕ್ಕೆ ಕಾರಣವಿದೆ. ಅಲ್ಲಿ ಕನ್ನಡ ಶಾಲೆಗಳಿಗೆ ಆಸ್ಪದವಿರಲಿಲ್ಲ. ಕನ್ನಡ ಜನತೆ, ಕನ್ನಡವನ್ನು ಕಲಿಯುವುದಕ್ಕೆ ಆಸ್ಪದವಿಲ್ಲದ ಹಾಗೆ ಉರ್ದು medium of instruction ಇದ್ದು ಉರ್ದು ಭಾಷೆಯನ್ನು ಕಲಿಯುತ್ತಿದ್ದರು. ಅಂಥಾದ್ದರಲ್ಲಿ ಕನ್ನಡ ಅಕ್ಷರಾಭ್ಯಾಸ ಯಾವರೀತಿ ಮುಂದುವರಿಯಬೇಕು ಎಂಬುದಕ್ಕೆ ಗಮನಕೊಡಬೇಕಾಗಿದೆ. ಯಾರು ನಮ್ಮನ್ನು ಆಳುತ್ತಿದ್ದರು, ನಾವು ಹೇಗೆ ಕಷ್ಟಗಳನ್ನು ಸಹಿಸುತ್ತಿದ್ದೆವು, ಬ್ರಿಟಿಷ್ ಸರ್ಕಾರದವರು ಜನರ ಏಳಿಗೆಗೆ ಹೇಗೆ ಆತಂಕವನ್ನು ಉಂಟುಮಾಡುತ್ತಿದ್ದರು, ವಿದ್ಯುಚ್ಛಕ್ತಿ ಯೋಜನೆಯನ್ನು ಕೈಗೊಳ್ಳಬೇಕಾಗಿದ್ದರೆ ಅವರು ಯಾವ ರೀತಿ ಬರುತ್ತಿದ್ದರು ಎಂಬುದನ್ನು ಯೋಚನೆ ಮಾಡಬೇಕು. ಜೋಗ್ ವಿದ್ಯುಚ್ಛಕ್ತಿ, ಕಾವೇರಿ ಅಣೆಕಟ್ಟು, ನಿಮ್ಮಲ್ಲಿ ಇರದೇ ಇದ್ದರೆ ಹೆಮ್ಮೆಯ ಮೈಸೂರು, ಮುಂದುವರಿದ ಮೈಸೂರು ಎಂದು ಹೇಳುವ ಪರಿಸ್ಥಿತಿ ಉಂಟಾಗುತ್ತಿತ್ತೇ ಎಂದು ಪ್ರಶ್ನೆಮಾಡುತ್ತೇನೆ.

ಅದೇ ರೀತಿಯಲ್ಲಿ ಬ್ರಿಟಿಷರು ನಮಗೇನಾದರೂ ಅನುಕೂಲತೆ ಮಾಡಿಕೊಟ್ಟಿದ್ದರೆ, ಎಲ್ಲ ಕನ್ನಡ ಭಾಗದ ಪ್ರದೇಶಗಳ ಉತ್ಕರ್ಷವಾಗಬೇಕು, ಅಲ್ಲಿನ ಜನಗಳ ಮುಂದುವರಿಯಬೇಕು ಎಂದು ಏನಾದರೂ ಒಂದು ಮಾರ್ಗವನ್ನು ಮಾಡಿಕೊಟ್ಟಿದ್ದರೆ ಮೈಸೂರಿಗಿಂತ ನಾವು ಉತ್ತಮ ಸ್ಥಿತಿಯಲ್ಲಿರುತ್ತಿದ್ದೆವೆಂದು ನಾನು ಹೇಳಬಲ್ಲೆ. ಇದಕ್ಕೆ ದೃಷ್ಟಾಂತವಾಗಿ ತುಂಗಭದ್ರಾ ಯೋಜನೆಯೊಂದನ್ನು ಪರಿಗಣಿಸಿದರೇ ಸಾಕು. 1857ನೆಯ ಇಸವಿಯಿಂದ ಅಲ್ಲಿಯ ಜನರು ಒಂದೇ ಸಮನಾಗಿ ಈ ಯೋಜನೆ ಕೈಗೊಳ್ಳಲೆಂದು ಕಂಠಶೋಷಣೆ ಮಾಡಿಕೊಂಡರೂ ಆಳರಸರಾದ ಬ್ರಿಟಿಷರು ನಮಗೆ ಕೊಟ್ಟಿರಲಿಲ್ಲ. ನಿಮ್ಮಂತೆ ವಿದ್ಯುಚ್ಛಕ್ತಿಯ ಅನುಕೂಲತೆಗಳನ್ನು ನಮಗೆ ಕಲ್ಪಿಸಿಕೊಟ್ಟಿದ್ದರೆ ನಿಮಗಿಂತ ಹೆಚ್ಚಿನ ಉತ್ಕೃಷ್ಟ ಸ್ಥಿತಿಯಲ್ಲಿರುತ್ತಿದ್ದೆವೆಂದು ಹೇಳಬಲ್ಲೆ. ಆದ್ದರಿಂದ ಇಂದು ನೀವು ಸುಖೀರಾಜ್ಯ ಕಟ್ಟಬೇಕೆಂದು ಹೊರಟಿರುವಾಗ ಕೈಗಾರಿಕಾ ಉತ್ಪಾದನೆಗೆ, ನೀರಾವರಿಗೆ ಬೇಕಾದ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಂಡರೆ ಯಾವ ಮೂಲೆಯಲ್ಲೂ ಸಹ ಆ ಜನಗಳು ಹಿಂದೆ ಬೀಳುವುದಿಲ್ಲ. ಹಿಂದುಳಿದ ನಾಡು ಎಂದು ಇನ್ನು ಮುಂದೆ ಯಾವ ಭಾಗವನ್ನೂ ಇಂಡಿಯಾ ದೇಶದಲ್ಲಿ ಕರೆಯುವ ಹಾಗಿರುವುದಿಲ್ಲ. ಇನ್ನು ಎರಡು ಮೂರು ವರ್ಷಗಳು ಮಾತ್ರ ನಮಗೆ ಸಮಯ ಕೊಟ್ಟರೆ ಸಾಕು. ಮುಂಬೈ ಕರ್ನಾಟಕವನ್ನೇ ಆಗಲಿ, ಹೈದರಾಬಾದ್ ಕರ್ನಾಟಕವನ್ನೇ ಆಗಲಿ, ಅಥವಾ ಮಾತೆತ್ತಿದರೆ ತಾವು ಬೆಟ್ಟುಟ್ಟು ತೋರಿಸುತ್ತಿರುವ ಬಳ್ಳಾರಿ ಜಿಲ್ಲೆಯಾಗಲಿ ಉನ್ನತ ಸ್ಥಿತಿಗೆ ಬರುವುದಕ್ಕೆ ಇನ್ನೂ 2-3 ವರ್ಷ ಕಾದು ನೋಡಬೇಕು ಅಷ್ಟೆ. ಈ ಸಂದರ್ಭದಲ್ಲಿ ಬಳ್ಳಾರಿಯ ವಿಷಯವನ್ನೆತ್ತಿ ಅನೇಕರು ಹೇಳಿದ್ದಾರೆ. ಅದ ಕೊರತೆಯ ಪ್ರಾಂತ್ಯ, ಬಳ್ಳಾರಿಯಲ್ಲಿ ಆಂಧ್ರರಿಗೂ ಕನ್ನಡಿಗರಿಗೂ ಇಂದು ಹೋರಾಟ ನಡೆಯುತ್ತಿದೆ ಎಂದು ಉದಹರಿಸಿ, ಇಂಥ ವಿಷಯಗಳು ಕರ್ಣಾಟಕ ಪ್ರಾಂತ್ಯವಾದರೆ ಎಷ್ಟೋ

ಆಗುತ್ತವೆ ಎಂದು ಹೇಳಿದ್ದಾರೆ. ಬಳ್ಳಾರಿಯಂಥ ಸಾಧು ಜನರು ಎಲ್ಲಿಯೂ ಇಲ್ಲ. ನಮ್ಮಲ್ಲಿ ಕರ್ಣಾಟಕರು ಬೇರೆ ಆಂಧ್ರರು ಬೇರೆ ಎಂಬ ಭಾವನೆಯಿಲ್ಲ. ಆದೋನಿ, ರಾಯಚೂರ್, ರಾಯದುರ್ಗಗಳಲ್ಲಿ ಆಂಧ್ರರು ಅಷ್ಟೊಂದು ಗಲಾಟೆ ಮಾಡುತ್ತಿದ್ದರೂ ನಾವು ಸುಮ್ಮನಿರುವುದನ್ನು ನೋಡಿದರೆ ನಮ್ಮ ಸಹನ ಶಕ್ತಿ ಕಾಣುತ್ತದೆ. ಅಮೇಲೆ ಇಂದು ನೀವು ಆಡಿ ತೋರಿಸುವ ಬಳ್ಳಾರಿ ಜಿಲ್ಲೆಯ ಕೊರತೆಯ ವಿಷಯವಾಗಿಯೂ ನಾನು ಮಾತನಾಡಬಲ್ಲೆ. ಅದು ಕೊರತೆಯ ಪ್ರದೇಶವೇ ಅಲ್ಲ. ಮದರಾಸಿನವರು ಕೊಟ್ಟ ಲೆಕ್ಕದಿಂದ ಅದು ಕೊರತೆಯ ಜಿಲ್ಲೆ ಅಷ್ಟೆ. ಅಂಥದರಲ್ಲಿ "ನಾವು ಕೊರತೆಯ ಪ್ರದೇಶವನ್ನು ಹೊತ್ತುಕೊಂಡಿದ್ದೇವೆ, ಬಹಳ ಉಪಕಾರ ಮಾಡಿದ್ದೇವೆ" ಎಂದು ಆಗಾಗ್ಗೆ ಹೇಳುತ್ತಿದ್ದೀರಿ. ನಾನು ಅಂಕಿ ಸಂಖ್ಯೆಗಳನ್ನೂ ಕೊಟ್ಟು ಅದು ಕೊರತೆಯ ಜಿಲ್ಲೆಯಲ್ಲವೆಂದು ಹೇಳಲು ಇಷ್ಟಪಡುತ್ತೇನೆ. ವಿದ್ಯುಚ್ಛಕ್ತಿಯ ಸರಬರಾಯಿಯ ವಿಚಾರವಾಗಿ ಈ ಅಧಿವೇಶನದಲ್ಲಿ ಪ್ರಶ್ನೆಗಳನ್ನು ಕೇಳುತ್ತಾ, ಹೆಚ್ಚಿನ ಮುತುವರ್ಜಿ ಆ ಭಾಗಕ್ಕೆ ವಹಿಸಿ ನಾಗಣ್ಣಗೌಡರು ಬಳ್ಳಾರಿಗೆ ವಿದ್ಯುಚ್ಛಕ್ತಿಯನ್ನು ಹರಿಸಿದ್ದಾರೆ ಎಂದು ಹೇಳಿದರು. ವಾಸ್ತವಾಂಶ ಆ ರೀತಿಯಿಲ್ಲ. ಮೈಸೂರು ಸರ್ಕಾರದವರಿಗೂ ಮದ್ರಾಸ್ ಸರ್ಕಾರದವರಿಗೂ ಬಳ್ಳಾರಿ ಜಿಲ್ಲೆಗೆ 4,000 ಕಿಲೋವಾಟ್‌ನಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಹಿಂದೆಯೇ ಒಪ್ಪಂದವಾಗಿತ್ತು. ಮದ್ರಾಸ್ ಸರ್ಕಾರದವರೇ sanction ಮಾಡಿದ್ದರು. ಅದನ್ನು ಡಾ. ನಾಗಣ್ಣಗೌಡರು ಕಾರ್ಯರೂಪಕ್ಕೆ ತಂದರೇ ಹೊರತು ಮೈಸೂರಿಗೆ ಮೀಸಲಾಗಿದ್ದ ವಿದ್ಯುಚ್ಛಕ್ತಿಯನ್ನಾವುದನ್ನೂ ಬಳ್ಳಾರಿಗೆ ಕೊಟ್ಟಿಲ್ಲವೆಂದು ನಾನು ಹೇಳಬಯಸುತ್ತೇನೆ.

ಆಡಳಿತ ವಿಚಾರವಾಗಿ ಅನೇಕ ಅಡ್ಡಿ ಆತಂಕಗಳು ಬರಬಹುದೆಂದು ಈ ರಿಪೋರ್ಟಿನಲ್ಲಿ ತಿಳಿಸಿದ್ದಾರೆ. ಅಡ್ಡಿ ಅಡಚಣೆಗಳು ಎಂದಿಗೂ ಬರುವುದಿಲ್ಲ. ಇಂದು ಮದರಾಸ್ ಪ್ರಾಂತ್ಯ ಬೊಂಬಾಯಿ ಪ್ರಾಂತ್ಯಗಳು ಯಾವ ರೀತಿ ಕೊರತೆಯನ್ನು ಸರಿದೂಗಿಸಿಕೊಂಡು ಹೋಗುತ್ತಿವೆ? ಇದು ಅವುಗಳಲ್ಲಿರತಕ್ಕ ಬಂದರಿನ ಉತ್ಪಾದನೆಯಿಂದ. ಮದರಾಸ್ ಪ್ರಾಂತ್ಯದಲ್ಲಿ ಮಲಬಾರ್ ಪ್ರದೇಶ ಎರಡು ಕೋಟಿ ರೂಪಾಯಿಗಳ ಕೊರತೆಯ ಪ್ರದೇಶ. ಅದನ್ನು ಹೇಗೆ ಸರಿದೂಗಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗಿದೆ ಗೊತ್ತಿದೆಯೇ? ಅದು ಅಲ್ಲಿರುವ ರೇವು ಪಟ್ಟಣದ ಉತ್ಪತ್ತಿಯ ಮೂಲಕ ಅಲ್ಲವೇ? ಅದೇ ರೀತಿ ನಮಗೊಂದು ಬಂದರು ಸಿಕ್ಕುವುದಾದರೆ, ಅದರಿಂದಾಗಿ ಹೆಚ್ಚಾಗುವ ವ್ಯಾಪಾರೋದ್ಯಮಗಳಿಂದ ಬರಬಹುದಾದ ಆದಾಯದಿಂದ ಯಾವ ಕೊರತೆಯೂ ಒಟ್ಟುಗೂಡಿದ ಕರ್ಣಾಟಕಕ್ಕೆ ಬರುವುದಿಲ್ಲ. ಆದ್ದರಿಂದ ಅಖಿಲ ಕರ್ಣಾಟಕವಾದರೆ ಕೊರತೆ ಬರುತ್ತದೆಂಬ ಅಂಜಿಕೆಯನ್ನಿಟ್ಟುಕೊಳ್ಳುವುದು ಬೇಡ. ಕನ್ನಡ ನಾಡಿನಲ್ಲಿ ಎಲ್ಲಾ ತೆರದ ಸಂಪತ್ತುಗಳೂ ಕಂಡುಬರುತ್ತವೆ. ಸರಿಯಾದ ರೀತಿಯಲ್ಲಿ ಅವುಗಳನ್ನು ವಿನಿಯೋಗಿಸಿಕೊಳ್ಳದೆ ಅವುಗಳಿಂದ ಹೆಚ್ಚು ಉತ್ಪಾದನೆ ಉಂಟುಮಾಡಿಕೊಳ್ಳಲು ಆಸಕ್ತಿ ವಹಿಸದೆ ನಿರ್ಲಕ್ಷ್ಯದಿಂದ ಇದ್ದುದರ ಪರಿಣಾಮವಾಗಿ ಉತ್ಪಾದನಾ ಶಕ್ತಿ ಕಡಮೆಯಾಗಿದೆ. ಅಲ್ಲದೆ ಕೊರತೆಯಾಗಬಹುದೆಂಬ ನಿಮ್ಮ ಶಂಕೆಗೆ ಇನ್ನೂ ಒಂದು ಹೇಳುತ್ತೇವೆ. ಅಂಕಿ ಸಂಖ್ಯೆಗಳಿಂದ budgetary positionನನ್ನು ಪರಿಶೀಲಿಸುವುದಾದರೂ, ಅಷ್ಟೇಲ್ಲಾ ನಿರಾಶಾದಾಯಕವಾಗಿ ಅವರು ಕೊಟ್ಟಿರುವ ಅಂಕಿಗಳನ್ನು ನೋಡುವುದಾದರೂ ಆ ಭಾಗಕ್ಕೆ ಇರುವ ಕೊರತೆಯೆಲ್ಲಾ ಕೇವಲ ಒಂದು ಕೋಟಿ ರೂಪಾಯಿ! ನಮ್ಮಲ್ಲಿರುವ ಕೊರತೆಯಾದರೋ 4 ಕೋಟಿ ರೂಪಾಯಿ! ಹೀಗಿರುವಾಗ ಆ ಪ್ರಾಂತ್ಯ ನಮಗೆ ಸೇರುವುದರಿಂದ ಯಾರಿಗೆ ಲಾಭ? ಯಾರಿಗೆ ನಷ್ಟ! ಈ ನಾಲ್ಕು ಕೋಟಿ ರೂಪಾಯಿಗಳ ಕೊರತೆಯನ್ನು ಅವರೂ ಹಂಚಿಕೊಳ್ಳುವಾಗ ಈ ನಾಡಿಗೆ ಲುಕ್ಸಾನೇ? ಎಂಬುದನ್ನು ಪರಿಶೀಲಿಸಬೇಕೆಂದು ನಾನು ವಿನಯದಿಂದ ಕೇಳುತ್ತೇನೆ.

ಇನ್ನು ನಮ್ಮೆಲ್ಲರಿಗೂ ಹಿರಿಯರೂ ಹಾಗೂ ಮೈಸೂರು ದೇಶದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ವೀರಣ್ಣಗೌಡರ ಭಾಷಣದ ಕಡೆ ಈ ಸಭಾ ಸದಸ್ಯರ ಲಕ್ಷ್ಯವನ್ನು ಎಳೆಯಬಯಸುತ್ತೇನೆ. ಅವರು ಬಹು ದಿವಸಗಳ ಹಿಂದೆ ಕರ್ಣಾಟಕ ಪ್ರಾಂತ್ಯ ಸಮಿತಿಯಲ್ಲಿದ್ದುದು ಎಲ್ಲರಿಗೂ ಗೊತ್ತಿರಬಹುದು. ಆ ಸಂದರ್ಭದಲ್ಲಿ ಅವರು ಇಲ್ಲಿಂದ ಆ ಕಡೆಗೆ ಪ್ರವಾಸ ಹೋಗುತ್ತಿದ್ದುದೂ ಗೊತ್ತಿರಬಹುದು. ಆಗ್ಗೆ ಒಂದು ಸಾರಿ, ನಮ್ಮ ಜನಪ್ರಿಯ ನಾಯಕರಾದ ನಿಜಲಿಂಗಪ್ಪನವರನ್ನು ಅಧ್ಯಕ್ಷರಾಗಿ ಒಮ್ಮತವಾಗಿ ಚುನಾಯಿಸಬೇಕೆಂಬ ಸಂದರ್ಭ ಬಂದಾಗ ನಮ್ಮ ಈ ಶ್ರೀ ವೀರಣ್ಣಗೌಡರು ಮಾಡಿದ ಭಾಷಣದ ಧೋರಣೆಯನ್ನು ಈ ಸಭೆಯ ಮಾನ್ಯ ಸದಸ್ಯರು ಗಮನಿಸಲಿ. ಹೊರನಾಡ ಕನ್ನಡಿಗರೂ ಮೈಸೂರಿಗರೂ ಸೇರಿ ಒಂದೇ ಆಡಳಿತಕ್ಕೆ ಬಂದು ಎಲ್ಲರ ಹಿತ ಸಂಬಂಧಗಳು ಏಕರೀತಿಯಲ್ಲಿ ಬೆಳೆಯಲಿ; ನಾವೂ ನೀವೂ ಒಂದಾಗಬೇಕು; ನಮ್ಮ ನಿಮ್ಮ ಬಳಕೆಗೆ ಅನುವಾಗಲು ಒಂದು ಸೇತುವೆಯನ್ನು ಕಟ್ಟುವಂತೆ ಇಂದು ನಿಜಲಿಂಗಪ್ಪನವರನ್ನು ಅಧ್ಯಕ್ಷರಾಗಿ ಆರಿಸಿಕೊಂಡಿದ್ದೇವೆ ಎಂದು ಅವರು ಮಾಡಿದ ಭಾಷಣವನ್ನು ಇಂದು ಮರೆತಂತಿದೆ. ತಮ್ಮ ನಿಜ ಅಭಿಪ್ರಾಯವನ್ನು ಬೇಕೆಂದು ಮುಚ್ಚಿಟ್ಟು ಎರಡು ಕರ್ಣಾಟಕವಾಗಬೇಕೆಂದು ಹೇಳಿದರೋ ಏನೋ ಗೊತ್ತಿಲ್ಲ. ಶ್ರೀ ಪಟ್ಟಾಭಿರಾಮಯ್ಯ ರವರು ಹಳೆಯ ಕಾಂಗ್ರೆಸ್ ಮುಖಂಡರು. ಅವರು ಎಲ್ಲರೂ ಸೇರಿ ಸ್ವಾತಂತ್ರ್ಯದ ಚಳವಳಿಯನ್ನು ಯಾವ ರೀತಿ ಸಾಗಿಸಿಕೊಂಡು ಬಂದರು, ಭಾಷಾವಾರು ಪ್ರಾಂತ್ಯ ಹೇಗೆ ಆಡಳಿತ ಸುಗಮವಾಗಿ ಹೋಗುವುದಕ್ಕೆ ಅವಶ್ಯಕವೆಂದು ಹೇಳಿ ಒಂದು ಜನತೆಯನ್ನು ಒಂದು ಆಡಳಿತದಲ್ಲಿ ತರುವುದಕ್ಕೆ ಪ್ರಯತ್ನಪಡಬೇಕೆಂದು ಯಾವ ರೀತಿ ಕಾಂಗ್ರೆಸ್ಸಿನವರು ಮಾತು ಕೊಟ್ಟಿದ್ದರು, ಅವರು ಏಕೆ ಈಗ ಮರೆತಿದ್ದಾರೆ ಎಂಬುದನ್ನು ಹೇಳಿದ್ದಾರೆ. ಅಲ್ಲದೆ, ಒಂದು ತತ್ವವನ್ನು ಒಪ್ಪಿಕೊಂಡ ಮೇಲೆ, ಆ ತತ್ವವನ್ನು ಕಾರ್ಯರೂಪಕ್ಕೆ ತರಬೇಕಾದರೆ ಎಲ್ಲೆಲ್ಲಿ ಯಾವಯಾವ ರೀತಿ ವಿಂಗಡಣೆ ಮಾಡಬೇಕು, ಯಾವಯಾವ ಮಾರ್ಪಾಡು ಮಾಡಬೇಕು, ಹಿಂದೂಸ್ಥಾನದ ನಕಾಶೆಯನ್ನು ಯಾವ ರೀತಿ ಬದಲಾವಣೆ ಮಾಡಬೇಕೆಂದು ಹೊರಟಿರುವಾಗ ಮೈಸೂರಿನವರು ಬೇಡ ಎಂದು ಕುಳಿತುಕೊಂಡರೆ ಮೈಸೂರಿನ ಚರಿತ್ರೆಯನ್ನು ಮುಂದೆ ಯಾವ ರೀತಿ ಬರೆಯುತ್ತಾರೆಂಬುದನ್ನು ಯೋಚನೆ ಮಾಡಬೇಕು. ಕನ್ನಡಿಗರು ಒಟ್ಟುಗೂಡಿ, ಕನ್ನಡ ಜನಾಂಗದ ಉತ್ಕರ್ಷವಾಗುವಾಗ, ಮೈಸೂರಿನ ಜನತೆ ಅಡ್ಡಿಯನ್ನು ಉಂಟುಮಾಡಿದರು ಎಂದು ಮುಂದಿನ ಚರಿತ್ರೆಕಾರರು ಬರೆಯಬಹುದು. ಹಿಂದೂಸ್ಥಾನ ಸರ್ಕಾರದವರು ಪುನರ್ವಿಂಗಡಣೆ ಮಾಡಿಯೇ ಮಾಡುತ್ತಾರೆ; ನಿಮಗಾಗಿ ನಿಲ್ಲುವುದಿಲ್ಲ. ಮರಾಠಿಗರನ್ನು ಕೇಳುವಂತಿಲ್ಲ; ಆಂಧ್ರರು ಈಗಾಗಲೇ ಮಾಡಿಕೊಂಡಿದ್ದಾರೆ. ಹಿಂದುಳಿದ ಅನೇಕ ಪ್ರಾಂತಗಳ ಬೆಳವಣಿಗೆಯಾಗಬೇಕಾಗಿದೆ. ಹೀಗಿರುವಾಗ ನಾವು ಸುಮ್ಮನೆ ಕುಳಿತರೆ ಯಾರೂ ಕೇಳುವುದಿಲ್ಲ.

(ಶ್ರೀ ಇಜಾರಿ ಸಿರಸಪ್ಪ)

ಇನ್ನು ಅಂಕಿ ಸಂಖ್ಯೆಗಳ ವಿಚಾರ. ಹಿಂದೆ ಒರಿಸ್ಸಾ ಮತ್ತು ಸಿಂಧ್ ಪ್ರಾಂತ್ಯಗಳಾಗುವಾಗ, ಅವು ಕೊರತೆಯ ಪ್ರಾಂತ್ಯಗಳಾಗುತ್ತವೆ, ಆದ್ದರಿಂದ ಅವುಗಳನ್ನು ಮಾಡುವುದು ಬೇಡ ಎಂದು ನಿರ್ಧರಿಸಿದ್ದರು. ಸರ್ಕಾರದವರು ಅದೇ ರೀತಿ ವಾದಿಸಿದರು. ಆದರೂ ಕಾರಣಾಂತರಗಳಿಂದ ಆ ಪ್ರಾಂತ್ಯಗಳಾದುವು. ಅಂದು ಸಿಂಧ್ ಮತ್ತು ಒರಿಸ್ಸಾ ಪ್ರಾಂತ್ಯಗಳು ಯಾವ ರೀತಿ ಕಷ್ಟಪಡುತ್ತಿದ್ದುವೆಂಬುದನ್ನು ನಾವು ಗಮನಿಸಬೇಕು. ಅಂಥಾದ್ದು ಈಗ ಕೊರತೆಯೆಲ್ಲಾ ಹೋಗಿ ಎಲ್ಲ ಜನಗಳೂ ಸುಖವಾಗಿ ಬಾಳುತ್ತಿರುವುದನ್ನು ಕಾಣಬಹುದು. ಅಂಕೆ ಸಂಖ್ಯೆಗಳನ್ನು ನೋಡಿದರೆ ಇಂದು ಒಂದು ರೀತಿಯಾಗಿರಬಹುದು ; ನಾಳೆ ಬದಲಾಯಿಸಬಹುದು. ಅಲ್ಲದೆ ಕನ್ನಡನಾಡಿನ ವಿಚಾರದಲ್ಲಿ ಅನೇಕ ಆರ್ಥಿಕ ತಜ್ಞರು ಏನು ಹೇಳಿದ್ದಾರೆಂಬುದನ್ನು ಗಮನಿಸಿ. ಕನ್ನಡ ನಾಡನ್ನು, ಕನ್ನಡ ಜನಾಂಗವನ್ನು ಒಂದು ಆಡಳಿತಕ್ಕೆ ತರುವುದರಲ್ಲಿ ಹಣಕಾಸಿನ ತೊಂದರೆ ಯಾವುದೂ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಕನ್ನಡನಾಡಿನ ಹಿತದೃಷ್ಟಿಯಿಂದ, ಹಿಂದೂಸ್ಥಾನದ ಭವಿತವ್ಯದ ಒಂದು ಚಿತ್ರದ ದೃಷ್ಟಿಯಿಂದ, ಒಗ್ಗಟ್ಟಿನ ದೃಷ್ಟಿಯಿಂದ ಸಂಕುಚಿತ ಮನೋಭಾವವನ್ನು ಬಿಟ್ಟು ಎಲ್ಲರೂ ಒಮ್ಮನಸ್ಸಿನಿಂದ ಕರ್ಣಾಟಕವಾಗಲೆಂದು ಹೇಳೋಣ. ಕರ್ಣಾಟಕವೆಂದ ಮಾತ್ರಕ್ಕೆ ಕರ್ಣಾಟಕವೆಂಬ ಬೇರೆ ಹೆಸರು ಕೊಡುವುದಕ್ಕೆ ಹೋಗುವುದಿಲ್ಲ. ವಿಸ್ತಾರ ಮೈಸೂರಾಗಬೇಕೆಂದು ಎಲ್ಲರೂ ಒಪ್ಪಿದ್ದಾರೆ. ಮೈಸೂರಿನ ರಾಜಪ್ರಮುಖರನ್ನೇ ಇಡೀ ಕರ್ಣಾಟಕದ ರಾಜಪ್ರಮುಖರೆಂದೂ ಪರಿಗಣಿಸುವುದಕ್ಕೆ ಒಪ್ಪಿಕೊಂಡಿದ್ದೇವೆಂದು ಹೇಳಿದ್ದಾರೆ. ಆಡಳಿತಕ್ಕೂ ಬೇರೊಂದು ಮುಖ್ಯ ಪಟ್ಟಣ ಬೇಡ ; ಹೆಚ್ಚಿಗೆ ಖರ್ಚಿಗೆ ಅವಕಾಶವಿಲ್ಲದಂತೆ ಮೈಸೂರು ಎಲ್ಲ ಕನ್ನಡ ಭಾಗಗಳನ್ನೂ ಒಳಗೊಂಡ ವಿಶಾಲ ಮೈಸೂರು, ಬೃಹದ್ ಮೈಸೂರನ್ನು ನಿರ್ಮಾಣ ಮಾಡಿದ ಕೀರ್ತಿಯನ್ನು ಸಂಪಾದಿಸುತ್ತೀರಿ ; ಈ ದೃಷ್ಟಿಯಿಂದ ಇದಕ್ಕೆ ಸಂಪೂರ್ಣ ಬೆಂಬಲ ನೀಡಬೇಕೆಂದು ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಅಧ್ಯಕ್ಷರೇ, ಈ ಸಭೆಯಲ್ಲಿ ವಿಪುಲವಾಗಿ ನಡೆಯುತ್ತಿರುವ ಈ ಚರ್ಚೆಯನ್ನು ಕಿವಿನೆಟ್ಟಗೆ ಮಾಡದೆ ಕೇಳದಿರುವ ಜನ ಇಲ್ಲವೆಂದು ನನ್ನ ಭಾವನೆ. ಕರ್ಣಾಟಕ ಪ್ರಾಂತ್ಯರಚನೆಯ ಪ್ರಶ್ನೆ ಮೈಸೂರಿಗೆ ಮಾತ್ರ ಸಂಬಂಧಪಟ್ಟ ಪ್ರಶ್ನೆಯಲ್ಲವೆಂದು ನಾನು ಭಾವಿಸಿದ್ದೇನೆ. ಕರ್ಣಾಟಕದ ಪ್ರಶ್ನೆಯನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವಾಗ ಅದರ ಹಿನ್ನೆಲೆಯನ್ನು ಎಷ್ಟು ದೂರ ಬಿಡಿಸಿಕೊಂಡು ಹೋಗಬೇಕೆಂಬುದನ್ನು ನಾವು ಎಚ್ಚರಿಕೆಯಿಂದ ನೋಡಬೇಕಾಗಿದೆ. ಕಾರಣವೇನೆಂದರೆ, ಕನ್ನಡನಾಡಿನ ಇತಿಹಾಸ ಸಾಧಾರಣವಾದದ್ದಲ್ಲ. ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು, ಆ ಕೀರ್ತಿ ವೈಭವದ ಚಿತ್ರವೇನೆಂಬುದನ್ನು ಮನಸ್ಸಿಗೆ ತೆಗೆದುಕೊಂಡರೆ, ಕರ್ಣಾಟಕ ರಚನೆಯಾಗಬೇಕೇ ಬೇಡವೇ ಎಂಬ ಪ್ರಶ್ನೆ ಕೇಳುವುದೇ ಅಸಂಭವವೆಂದು ಹೇಳುತ್ತೇನೆ.

ಆದರೂ ನಾವು ಈ ಪ್ರಶ್ನೆಯ ವಿಷಯದಲ್ಲಿ ಜವಾಬ್ದಾರಿಯಿಂದ ಮಾತನಾಡುವಾಗ ನಮ್ಮ ಮಾತಿಗೆ ಒಂದು ರೂಪ, ಎಲ್ಲೆಕಟ್ಟು ಹಾಕುವುದು ಅನಿವಾರ್ಯ. ಆ ದೃಷ್ಟಿಯಿಂದ ನಾನು ಹೇಳುತ್ತೇನೆ.

ಈ ಸಂದರ್ಭದಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ವಿಷಯಗಳನ್ನು ಹೇಳಿದರೆ ಸಾಕಾಗಿದೆ. ಕಮಿಟಿಯವರು ಕೊಟ್ಟ ವರದಿಯ ಮೇಲೆ ಅನೇಕ ವಿಧವಾದ, ಪರ ಮತ್ತು ವಿರೋಧವಾದ ಅಂಕಿಅಂಶಗಳನ್ನು ಕೊಟ್ಟು ಸದಸ್ಯರುಗಳು ಮಾತನಾಡಿದ್ದಾರೆ. ಕೆಲವರು ಹೇಳಿದಂತೆ, ಕಮಿಟಿಯವರು ಕೊಟ್ಟಿರತಕ್ಕ ಅಂಕಿಅಂಶಗಳೆಲ್ಲಾ ಸಂಪೂರ್ಣವಾಗಿ ಸಾಧುವಾದದ್ದಲ್ಲವೆಂದೂ ಹೇಳುವುದಕ್ಕಾಗುವುದಿಲ್ಲ, ಹಾಗೆಯೇ, ಅವರು ಸಂಗ್ರಹಿಸಿರುವ ಅಂಕಿಅಂಶಗಳೆಲ್ಲಾ ಕೇವಲ 'ಸರಸ್ವತಿಯ ಮುರುಕು' ಎಂತಲೂ ಭಾವಿಸುವುದಕ್ಕಾಗುವುದಿಲ್ಲ. ಮನುಷ್ಯನ ಮಿತಿ ಎಷ್ಟಿದೆ ಅದಕ್ಕನುಗುಣವಾಗಿ ಆಗಿನ ಸಂದರ್ಭಾನುಸಾರ giving due margin to the sentimental aspects of human nature ಎಡೆಗೊಟ್ಟು ಮಾಡಿದ್ದಾರೆನ್ನಬಹುದು. Logic ಗೊತ್ತಿರುವವರಿಗೆ ಹೇಳಬೇಕಾಗಿಲ್ಲ. ಅಂದಮೇಲೆ ಅಂಕಿಅಂಶಗಳನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬೇಕೆಂಬ ವಾದ ಮುಗಿಯಿತು.

ಇಷ್ಟಾದಮೇಲೆ ಪ್ರಾಂತ್ಯ ರಚನೆಯಾಗಲೇಬೇಕು, ಎಂದು ಈ ಬಗ್ಗೆ ಮೈಸೂರಿನ ಜನರೇನಾದರೂ ಅರ್ಜಿ ಹಾಕಿಕೊಂಡಿದ್ದರೇ ಎಂದು ಕೇಳಿದರೆ ಅದೂ ಇಲ್ಲ. ಇನ್ನು ಮೈಸೂರು ಗಡಿಯ ಹೊರಗಡೆ ಇರತಕ್ಕಂಥ ಆ ಜನಗಳೇನಾದರೂ ನೆಹರೂರವರಿಗೆ ಒಂದು ಅರ್ಜಿ ಬರೆದು ನೀವು ಒಂದು ಬೌಂಡರಿ ಕಮಿಷನನ್ನು ಕೂಡಲೇ ನೇಮಕಮಾಡಿ ನಮ್ಮನ್ನು ಮೈಸೂರಿಗೆ ಸೇರಿಸಿ ಎಂದು ಕೇಳಿಕೊಂಡಿದ್ದಾರೆಯೇ ಅಂದರೆ ಅದೂ ಸಹ ಇಲ್ಲ. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ ಸಮುದ್ರದ ಅಲೆಯೊಂದಿಗೆ ಸರಸವಾಡುತ್ತಿದ್ದಂಥವರಲ್ಲಿ ಕೆಲವರನ್ನು ಸಮುದ್ರದ ಅಲೆ ಹೊಡೆದುಕೊಂಡು ಬಂದು ತನ್ನ ದಡದಲ್ಲಿರುವ ಮರಳಿಗೆ ನೂಕಿದಾಗ ಅವರು ಹೇಗೆ ಆ ಮರಳಿನಲ್ಲಿ ಸಿಕ್ಕಿ ಹೊರಳಾಡುತ್ತಿರುತ್ತಾರೋ ಹಾಗೇ ನಾವೂ ಸಹ ಈ ದಿವಸ ಈ ವಿಚಾರದಲ್ಲಿ ಹಿಂದಕ್ಕೂ ಮುಂದಕ್ಕೂ ಹೊರಳಾಡುತ್ತಿದ್ದೇವೆ. ನೀರಿನಲ್ಲಿ ಬದ್ದಿದ್ದ ಮೀನನ್ನು ಎತ್ತಿ ದಡಕ್ಕೆ ಹಾಕಿದಾಗ ಅದು ಹದ್ದಿನ ಬಾಯಿಗೆ ಸಿಕ್ಕುವಾಗ ಆ ತಾಯಿ ಮೀನು ಹೇಗೆ ಅದನ್ನು ನೋಡುತ್ತದೋ ಹಾಗೇ ನಮ್ಮನ್ನು ಬಿಟ್ಟು ಅಗಲಿರತಕ್ಕವರನ್ನು ನಾವೀಗ ನೋಡುತ್ತಿದ್ದೇವೆ. ಈ ದಿವಸ ಮೈಸೂರು ಚರಿತ್ರೆಯಲ್ಲಿ ಯಾವ ರಕ್ತಪಾತವೂ ಇಲ್ಲದೆ ದೇಶವು ತನ್ನಷ್ಟಕ್ಕೆ ತಾನೇತಾನಾಗಿ ವಿಶಾಲವಾಗುತ್ತಿರುವಾಗ ಮತ್ತು ಈ ಹಿಂದೆ ನಾವು ಕಳೆದುಕೊಂಡಿದ್ದಂಥ ಭಾಗಗಳೆಲ್ಲಾ ಪುನಃ ನಮಗೆ ಬಂದು ಸೇರಿ ನಮ್ಮ ದೇಶ ವಿಶಾಲವಾಗತಕ್ಕಂಥ ವೇಳೆಯಲ್ಲಿ ಹೀಗೆ ವಿಶಾಲವಾಗತಕ್ಕಂಥ ದೇಶವನ್ನು "ಆಳಲಾರೆವು" ಎಂದು ಹೇಳತಕ್ಕ ಜನರು ದೇಶದಲ್ಲಿ ಇನ್ನೂ ಇದ್ದಾರಲ್ಲಾ ಅನ್ನುವುದು ಗೊತ್ತಾದುದರ ಜೊತೆಗೆ ಇಂಥವರನ್ನು ಕಣ್ಣಿನಿಂದ ನೋಡತಕ್ಕಂಥ ಆ ಒಂದು ಪುಣ್ಯ ಈ ದಿವಸ ನಮ್ಮ ಪಾಲಿಗೆ ಬಂದಿದೆ. ಆದರೆ ಈ ನಮ್ಮ ಮೈಸೂರಿನ ಕೀರ್ತಿಯನ್ನು ಕಮ್ಮಿಮಾಡಬೇಕೆಂಬ ಅಭಿಪ್ರಾಯ ನನಗಿಲ್ಲ. ಹಿಂದಿನ ರಾಜ ಮಹಾರಾಜರುಗಳ ಕಾಲದಲ್ಲಿ ಒಬ್ಬರೇ ದಿವಾನರು ಇರುತ್ತಿದ್ದಾಗ್ಯೂ ದೇಶ ಎಷ್ಟು ವಿಶಾಲವಾದಾಗ್ಯೂ ಅವರು ಆಡಳಿತ ದೃಷ್ಟಿಯಲ್ಲಿ ಯಾವ ತೊಂದರೆಯನ್ನೂ ಕಾಣದೆ ಇದ್ದಾಗ್ಯೂ, ಅಂಥ ಕಾಲದಲ್ಲಿ ಕೂಡ ಅವರೆಲ್ಲರೂ ನಮ್ಮ ದೇಶ ಇನ್ನೂ ವಿಶಾಲವಾಗಬೇಕೆಂದು ಹೇಳುತ್ತಿದ್ದರು. ಆದರೆ ನಾವು ಈ ದಿವಸ ಹಾಗೆ ದೇಶ ವಿಶಾಲವಾದರೆ

ಅದನ್ನು ನಾವು ಆಳುವುದಕ್ಕಾಗುವುದಿಲ್ಲ ಎಂದು ಕೆಲವು ಮಾನ್ಯಸದಸ್ಯರು ಎತ್ತಿರತಕ್ಕ ವಾದಸರಣಿಯನ್ನು ನೋಡಿದರೆ ಆ ಹಿಂದಿನವರ ವಾದಸರಣಿಯನ್ನು ಇವರು ತಿರುವಿ ಹಾಕಿಕೊಂಡಿರುವ ಹಾಗೆ ನನಗೆ ಭಾಸ ವಾಗುತ್ತಿದೆ. ಈ ದಿವಸ ಭಾರತದ ದೇಶಾದ್ಯಂತವೂ ಈ ಪ್ರಾಂತ್ಯಗಳ ಪುನರ್ರಚನೆಯಾಗಬೇಕೆಂಬ ಗೋಳು ಎದ್ದು ಕೇಳುತ್ತಿದೆ. ಆದಕಾರಣ ಇದನ್ನು ಪರಿಹಾರ ಮಾಡಲು ಒಂದು ಮಾರ್ಗವನ್ನು ಕಂಡುಹಿಡಿಯುವುದ ಕ್ಕಾಗಿ ಈ ದಿವಸ ಶಕ್ತಿವಂತರೂ, ಮತ್ತು ಪ್ರಭಾವ ಶಾಲಿಗಳೂ ಆದಂಥ ಜನರನ್ನು ಕೇಂದ್ರ ಸರ್ಕಾರ ಕೂಡಿಸಿದೆ. ಅವರು ಏನು ಮಾಡಬಹುದೋ ಅದನ್ನು ಮಾಡಿಯೇ ಮಾಡುತ್ತಾರೆ. ಈ ಹಿಂದೆ ಕೇಂದ್ರ ಸರ್ಕಾರ ದವರೇನೂ ನಮ್ಮ ಹತ್ತಿರ ಬಂದು ನಿಮಗೆ ಬಳ್ಳಾರಿ ಜಿಲ್ಲೆ ಬೇಕೋ ಅಥವಾ ಬೇಡವೋ ಅಂತ ನಮ್ಮನ್ನೇನೂ ಕೇಳಲಿಲ್ಲ. ಅವರ ಪಾಡಿಗೆ ಅವರೇನು ಮಾಡ ಬೇಕೋ ಅದನ್ನು ಮಾಡಿಬಿಟ್ಟರು. ಆಗ ಆ ಬಳ್ಳಾರಿ ತನ್ನ ಪಾಡಿಗೆ ತಾನೆ ಬಂದು ಮೈಸೂರಿಗೆ ಸೇರಿ ಕೊಂಡಿತು. ಈಗ ನಮ್ಮ ಮೈಸೂರಿನ ಜನಸಂಖ್ಯೆ ಸುಮಾರು ಒಂದು ಕೋಟಿಯಿರಬಹುದು. ನಾಳೆ ಅಖಂಡ ಕರ್ಣಾಟಕವಾದರೆ ಇದರ ಜನಸಂಖ್ಯೆ $2\frac{1}{2}$ ಕೋಟಿಗೆ ಹೆಚ್ಚಬಹುದು. ಅಷ್ಟು ಹೆಚ್ಚಿದಾಗ್ಯೂ ಈ ಜನಸಂಖ್ಯೆಯು ಮದರಾಸ್ ಮತ್ತು ಯು.ಪಿ. ಗಳ ಜನಸಂಖ್ಯೆಯಷ್ಟೆಂದೂ ಜಾಸ್ತಿಯಾಗಲಾರದು ಎಂದೆನ್ನತಕ್ಕವರೂ ಇಲ್ಲಿ ದುರ್ಲಭವಾಗಿದ್ದಾರೆ. ಹೀಗೆ ಇದನ್ನು ಇವರು ಯಾವುದೋ ಒಂದು ದೃಷ್ಟಿ ಯಿಂದ ದೇಶ ದೊಡ್ಡದಾಗುವುದು ಬೇಡ, ಅದು ಹಾಗೇ ಇರಲಿ ಎಂದು ಹೇಳಿದ್ದಾರೆ. ಇವರಲ್ಲಿ ಅಂಥ ಯಾವುದೋ ಒಂದು ಅಂಜಿಕೆ ಇದ್ದರೂ ಇರ ಬಹುದು. ಆದರೆ ಒಂದು ದೊಡ್ಡ ಸರಪಣಿಯಲ್ಲಿ ಯಾವುದೋ ಒಂದು ಕೊಂಡಿ ಸ್ವಲ್ಪ ವೀಕ್ ಆಗಿದ್ದರೂ ಆ ಸರಪಣಿಯ ಇತರ ಕೊಂಡಿಗಳೆಲ್ಲಾ ಒಂದಕ್ಕೊಂದು ಅಂಟಿಕೊಂಡೇ ಇರುತ್ತವೆ. ಅದರ ಹಾಗೆ ಈ ದಿವಸ ಈ ಕರ್ಣಾಟಕದ ಪ್ರಶ್ನೆಯೂ ಇರುವುದರಿಂದ ಅಲ್ಲಿ-ಇಲ್ಲಿ ಕೊಂಚ ಲೋಪದೋಷಗಳಿದ್ದರೂ ಕರ್ಣಾಟಕ ಪ್ರಾಂತ್ಯವಾಗುವುದೇನೋ ಆಗಿಯೇ ಆಗುತ್ತದೆ. ಆದರೆ ಇಲ್ಲಿಯತನಕ ಆಗಿರತಕ್ಕ ಚರ್ಚೆಯನ್ನು ನೋಡಿ ದರೆ ಕೆಲವರು ಮಾತನಾಡುತ್ತ ಕೇಂದ್ರ ಸರ್ಕಾರ ದವರು ಅವರಾಗಿಯೇ ಅವರು ಆಗಲಿ ಎಂದು ಹೇಳಿದರೆ ಆಗಬೇಕಾದರೆ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣ ವಾಗಲಿ, ಅದಕ್ಕೆ ಬದಲಾಗಿ ನಾವೇಕೆ ಈಗ ಈ ಕರ್ಣಾ ಟಕ ಪ್ರಾಂತ್ಯ ನಿರ್ಮಾಣಮಾಡಿ' ಎಂದು ಕೇಳಬೇಕು ಎಂದು ಪ್ರಶ್ನೆ ಹಾಕಿದ್ದಾರೆ. ಆದರೆ ಹಾಗೆ ಅವರು ತಲೆಮೇಲೆ ಮೆಟ್ಟಿದರೆ ಆಗ ಆಗಲಿ ಎಂದು ಹೇಳತಕ್ಕಂಥ ಜನರೂ ನಮ್ಮಲ್ಲಿದ್ದಾರೆಂದು ಗೊತ್ತಾಗುತ್ತದೆ. ಆದರೆ ಹಾಗೆ ಅವರು ನಮ್ಮ ತಲೆಯಮೇಲೆ ಮಟ್ಟಿ ನೀವು ಇಂಥಿಂಥ ಭಾಗಗಳನ್ನು ತೆಗೆದುಕೊಳ್ಳಲೇಬೇಕೆಂದು ಹೇಳುವುದಕ್ಕೆ ಮುಂಚಿತವಾಗಿಯೇ ನಾವೇ ಆ ನಮ್ಮ ಕರ್ಣಾಟಕ ಬಂಧುಗಳಿರತಕ್ಕಂಥ ಪ್ರದೇಶವನ್ನೆಲ್ಲಾ ನಮಗೆ ಸೇರಿಸಿಕೊಡಿ ಎಂದು ಕೇಳತಕ್ಕಂಥ ಒಂದು ವಿಶಾಲ ಹೃದಯವನ್ನಿಟ್ಟುಕೊಂಡು ಏಕೆ ವರ್ತಿಸಬಾರ ದೆಂಬುದೇ ನನಗೆ ಅರ್ಥವಾಗಿಲ್ಲ. ಇವರು ಹೀಗೆ ಮಾತನಾಡಿರತಕ್ಕದ್ದು ಆ ನಮ್ಮ ಸಹೋದರರು ಗಳಿಗೆಲ್ಲಾ ಅವರ ಮನಸ್ಸನ್ನು ನೋಯಿಸಿದಂತಾಗಿದೆ. ಆದರೆ ಇದಕ್ಕೆ the human nature should answer them. ಹೀಗೆ ನುಡಿದಿರತಕ್ಕ ಬಗ್ಗೆ ಅವರ ಮನಸ್ಸಿಗೆ ಅವರಿಗೆ ಅವರೇ ಉತ್ತರ ಹೇಳಿಕೊಳ್ಳ ಬೇಕು. ಆದರೆ ಹೀಗೆ ಈ ದಿವಸ ಇವರು ಈ ವಿಚಾರ ದಲ್ಲಿ ಕೇಂದ್ರ ಸರ್ಕಾರದವರು ಹೇಗೆ ಹೇಳಿದರೆ ಹಾಗೆ ನಾವು ಒಪ್ಪಿಕೊಳ್ಳುತ್ತೇವೆಂದು ಹೇಳಿದ ಹಾಗಾಯಿತು. ಆದರೆ ಈ ಹಿಂದೆ ಇದ್ದಂಥ ಆ ಒಂದು ಕರ್ಣಾಟಕ ಪ್ರಾಂತ್ಯದ ಹುಟ್ಟು, ಅದರ ನಿಜರೂಪವೇನಿತ್ತೆಂಬ ಬಗ್ಗೆ ಅದಕ್ಕೆಲ್ಲಾ ಒಂದು ಸರಿಯಾದ ಹದ್ದು ಬಸ್ತಿರು ತ್ತದೆ. ಆದಕಾರಣ ಆಡಳಿತ ದೃಷ್ಟಿಯಿಂದಲೂ ಅಂಥ ಕಷ್ಟಗಳು ಯಾವೂ ಬರಲು ಅವಕಾಶವಿಲ್ಲ. ಹಿಂದೆ ಈ ಕನ್ನಡನಾಡಿನ ಹಿರಿಮೆಯನ್ನು ನೋಡಿ ಅದನ್ನು ತಾಳಲಾರದೆ ಇದನ್ನು ಹರಿದು ಹಂಚಿಹಾಕಿಬಿಟ್ಟರು. ಹಿಂದಿನ ಕಾಲದಲ್ಲಿ ದೇಶ ಹೇಗಿತ್ತೆಂಬ ಬಗ್ಗೆ ಆ ಪರ ಕೀಯರೇ ಹೀಗೆ ಹೇಳಿದ್ದಾರೆ—

"Imperialism, in the name of Dharma, in the name of culture, in the name of custom, has taken the breath of people less fortunate than the rulers."

ಹೀಗೆಂದು ಹೇಳಿ ಅವರೇ ಇದನ್ನು ಬರೆದಿರು ತ್ತಾರೆ. ಹಿಂದೆ ನಮ್ಮ ಭಾರತದಲ್ಲಿ ಎಂತಹ ಶಕ್ತಿಯಿತ್ತು! ಅದೆಲ್ಲವನ್ನೂ ಅವರು ಶೋಷಣೆ ಮಾಡಿದರು. ಆದರೆ ಈ ದಿವಸ ಇಲ್ಲಿ ನಡೆದಿರ ತಕ್ಕಂಥ ವಾದಗಳ ಸರಣಿಯನ್ನು ನೋಡಿದರೆ 'ಹಳೆ ಬರದಲ್ಲಿ ಸತ್ತವನಿಗೆ ಹೊಸ ಬರದಲ್ಲಿ ಹೆದರಿಕೆಯಿಲ್ಲ ವೆಂದು' ಹೇಳಿದ ಹಾಗೆ ಕಾಣುತ್ತದೆ. ಆದರೆ ಹೀಗೆ ಹೇಳಿರತಕ್ಕದ್ದಾದರೂ ನಾನು ಇದನ್ನು ಒಂದು ವಾರ್ನಿಂಗ್ ರೂಪವಾಗಿದೆಯೆಂದು ಹೇಳಲಾರೆ. ಇದು ಒಂದು ಪ್ರಿಕಾಷನ್ ರೂಪವಾಗಿರುತ್ತೆಂದು ಹೇಳ ಬಹುದಾಗಿದೆ. ಈ ದಿವಸ ಯಾವ ಯಾವ ಭಾಗಗಳು ಸೇರಿದರೆ ಒಂದು ಸಮಗ್ರ ಕರ್ಣಾಟಕ ಪ್ರಾಂತ್ಯ ವಾಗುತ್ತೆಂದು ಕೆಲವರು ಹೇಳುತ್ತಿದ್ದಾರೆ ಮತ್ತೆ ಕೆಲ ವರು ಅಷ್ಟೆಲ್ಲಾ ಬೇಡ ಇಷ್ಟಾದರೇ ಸಾಕು ಎಂದು ಒಂದು ವಾದಮಾಡಿದರು. ಆದರೆ ಇಂಥ ಒಂದು ಸಂಕುಚಿತವಾದಕ್ಕೆ ಅವಕಾಶವೇ ಇಲ್ಲ. ಇಂಥ ಒಂದು ಕಲ್ಯಾಣ ಪಟ್ಟಣದಲ್ಲಿರತಕ್ಕಂಥ ಜನರೇ ಹೀಗೆ ಶಂಕೆಪಡುತ್ತಿದ್ದಾರೆ ಅಂದರೆ ಇದು ನನಗಂತೂ ಬಹಳ ಆಶ್ಚರ್ಯ. ಏನೋ ಹಳ್ಳಿಯ ಜನರು ಹಾಗೆ ಹೇಳು ತ್ತಾರೆ ಅಂತ ಅನ್ನುವಹಾಗಿಲ್ಲ. ಈ ದಿವಸ ಹಳ್ಳಿಯಿಂದ ಡೆಲ್ಲಿಯವರೆಗೂ ಈ ರೀತಿಯ ಭಯಗಳೆಲ್ಲಾ ಮಾಯ ವಾಗುತ್ತಾ ಬರುತ್ತಿವೆ. ಪ್ರಜಾಪ್ರಭುತ್ವ ಯುಗದಲ್ಲಿ ಲೀಡರ್ ಆಗಬಲ್ಲವನು ಒಬ್ಬನೇ ಇದ್ದಾನೇನು? ಮತ್ತೊಬ್ಬ ದಕ್ಷನಾದ ಲೀಡರ್ ಮುಂದೆ ಬಂದ ಕೂಡಲೇ ಹಿಂದಿದ್ದ ಲೀಡರ್ ಆಟೋಮ್ಯಾಟಿಕ್ ಆಗಿ ತಾನು ರಿಟೈರ್ ಆಗುತ್ತಾನೆ. ಇಂಥ ವಿಚಾರಗಳಿ ಗೆಲ್ಲಾ ತಾವು ಈ ದಿವಸ ಒಂದು ಬೇಲಿ ಹಾಕಿ ತಡೆ ಗಟ್ಟಲು ಖಂಡಿತ ಸಾಧ್ಯವಿಲ್ಲ. ಆ ಗ್ರೀಕ್ ಮತ್ತು ರೋಮಿನಂಥ ದೇಶಗಳಲ್ಲೂ ಎಷ್ಟೋ ಧೀರರಾದ ನಾಯಕರು ತಮ್ಮ ಪದವಿಯನ್ನು ಬೇರೆಯವರಿಗೆ ಬಿಟ್ಟುಕೊಟ್ಟು ಹೋಗಿದ್ದಾರೆ. ಧೀಮಂತರಾದಂಥ ಬ್ರಿಟಿಷ್ ಸಾಮ್ರಾಟರ ಅಂಥ ಒಂದು ಇಂಪೀರಿಯಲ್ ಪದವಿಯೇ ಇಲ್ಲಿ ಉಳಿಯಲಿಲ್ಲ ಎನ್ನುವಾಗ ನಾವೇಕೆ ಅಷ್ಟು ಇದಕ್ಕೆ ಯೋಚನೆ ಮಾಡಬೇಕು! ಎಷ್ಟೋ ಧರ್ಮಗಳು ಈಗಾಗಲೇ ಮಾಯವಾಗಿವೆ. ಈ ದಿವಸ ನಮ್ಮಲ್ಲಿರತಕ್ಕಂಥ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಲು ಈ ದಿವಸ ಆ ಪರಮಾತ್ಮನೇ ಸಾಕ್ಷಾತ್ತಾಗಿ ಬಂದಾಗ್ಯೂ— what an amount of revolutionary change has been brought about in the Gandhian Yuga—ಸಾಧ್ಯವೇ ಅನ್ನು

(ಶ್ರೀ ಕೆ. ಪ್ರಭಾಕರ್)

ಷ್ಯದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಇಂಥ ವಿಚಾರಗಳ ಬಗ್ಗೆ ತಾವು ಒಂದು ಪ್ಲೆಬಿಸೈಟನ್ನು ಹಾಕಿ ಎಂದು ಹೇಳುವುದಕ್ಕೆ ಆಗುತ್ತದೆಯೇ? ಈಗ ಇಲ್ಲಿಗೆ ಬಂದು ಕುಳಿತಿರತಕ್ಕಂಥ ಸದಸ್ಯರುಗಳಿಗೆ ಓಟ್ ಕೊಟ್ಟು ಕಳುಹಿಸಿರತಕ್ಕಂಥವರಲ್ಲಿ ಕೆಲವರು ಕರ್ಣಾಟಕ ಬೇಕು ಎನ್ನತಕ್ಕವರೂ ಓಟ್ ಕೊಟ್ಟಿರಬಹುದು ಮತ್ತು ಅದು ಬೇಡ ಎನ್ನತಕ್ಕವರೂ ಈಗ ಓಟ್ ಕೊಟ್ಟಿರಬಹುದು. ಆದರೆ ಈ ದಿವಸ ಹಾಗೆ ಕರ್ಣಾಟಕ ಪ್ರಾಂತ್ಯ ಆಗ ಬೇಕು ಅಥವಾ ಅದು ಬೇಡ ಎನ್ನತಕ್ಕವರಲ್ಲಿ ಎಷ್ಟು ಜನರು ಇದರ ಅರ್ಥವನ್ನು ಸರಿಯಾಗಿ ಮಾಡಿಕೊಳ್ಳ ಬಲ್ಲರು ಎನ್ನತಕ್ಕಂಥ ಒಂದು ಪ್ರಶ್ನೆಯನ್ನು ನಾನೀಗ ಹಾಕಬೇಕಾಗಿದೆ. ನಾವೀದಿವಸ ಸರ್ಕಾರಕ್ಕೆ ಎಷ್ಟೋ ವಿಚಾರಗಳಲ್ಲಿ ಸಲಹೆ ನೀಡುತ್ತಿದ್ದೇವೆ. ಅಂದರೆ ಈ ಸಲಹೆಗಳೆಲ್ಲಕ್ಕೂ ಅವರ ಅಭಿಮತವನ್ನು ಪಡೆದೇ ನೀಡಬೇಕೆಂದರೆ ಅದ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ? ಈ ದಿವಸ ಹರಿಜನರ ಉದ್ಧಾರ ವಿನ್ನೂ ಆಗಿಲ್ಲ, ಅವರ ಬುದ್ಧಿಯ ಮಟ್ಟ ಬೆಳೆದಿಲ್ಲ, ಅವರಲ್ಲಿ ಅಜ್ಞಾನದ ಮಟ್ಟ ಇನ್ನೂ ಎಷ್ಟಿದೆ ಅನ್ನ ತಕ್ಕ ಬಗ್ಗೆ ಅದನ್ನು ನಿರ್ಧರಿಸಲು ಈ ಬಗ್ಗೆ ಒಂದು ಓಟ್ ಹಾಕಿ ಎಂದು ಹೇಳಿದರೆ ಇದನ್ನು ಹಾಗೆ ತೀರ್ಮಾನಮಾಡಲು ನೆಹ್ರೂರವರ ಕೈಲಿ ಆದರೂ ಸಾಧ್ಯವಾದೀತೆ? ಹೀಗೆ ಹೇಳುತ್ತಾ ಹೋದರೆ ಎಷ್ಟೋ ವಿಚಾರಗಳಿರುತ್ತವೆ. ಇಂಥವುಗಳ ಬಗ್ಗೆ ನಾವು ಓಟ್ ಹಾಕುವುದಕ್ಕಾಗುವುದಿಲ್ಲ. ಜನರು ಓಟ್ ಮಾಡುವುದಕ್ಕೆ ಮುಂಚೆ ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಹಾಗೆ ಅರ್ಥ ಮಾಡಿ ಕೊಂಡು ಓಟ್ ಮಾಡಬಲ್ಲ ಜನರು ಎಷ್ಟಿದ್ದಾರೆ?

There are people who say that democracy is too early for India. It is not a vain talk. Considering the implications and complications of democracy, it is no doubt too early, but it requires the great nerve of a great man to swim in the troubled water of politics.

ಈ ದಿವಸ ಜನರಲ್ಲಿ ಇನ್ನೂ ಅಷ್ಟರಮಟ್ಟಿಗೆ ವಿದ್ಯಾ ಪ್ರಸಾರಣೆ ನಡೆದಿಲ್ಲ. ಈ ದಿವಸ ಜನರು ಯಾವ ಸ್ಥಿತಿಯಲ್ಲಿದ್ದಾರೆ ಎನ್ನುವುದನ್ನು ನಾವು ಗಮನಿಸ ಬೇಕಾದದ್ದು ಮುಖ್ಯ. ಬಲಾಢ್ಯರಾಗಿ ಜನ ರನ್ನು ತಮ್ಮ ಕೈಲಿಟ್ಟುಕೊಂಡರೆ ಆಗ ಈ ಕರ್ಣಾಟಕ ಪ್ರಾಂತ್ಯಬೇಕೆ, ಬೇಡವೇ ಎನ್ನುವ ಪ್ರಶ್ನೆಯೇ ಮಾಯ ವಾಗಬಹುದು. ಈಕಡೆ ಸೇರಿದರೆ ಅನುಕೂಲ ಹೆಚ್ಚೋ ಆ ಕಡೆ ಸೇರಿದರೆ ಅನುಕೂಲ ಹೆಚ್ಚೋ ಎನ್ನತಕ್ಕಂಥ ಮನೋಭಾವ ಜನರಲ್ಲಿರುವಾಗ ವಿಷಯಗಳ ಅರ್ಥದ ವಿಚಾರಕ್ಕೆ ಯಾರೂ ಮನಸ್ಸು ಕೊಡುವುದಿಲ್ಲ. ಆದರೆ ಈಗತಾನೆ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ನಾನು ಹರಿಜನ ಸ್ತ್ರೀಯಾಗಿ ಹುಟ್ಟಿದ್ದರೆ ಚೆನ್ನಾ ಗಿತ್ತು ಎಂದು ಹೇಳಿದರು. ಆದರೆ ನಾವೇನೂ ಇದರ ವಿಚಾರ ತಿಳಿಯದೆ ಹೇಳುತ್ತಿದ್ದೇವೆಂದು ಅವರು ಭಾವಿಸಿದ್ದಾರೋ ಏನೋ ತಿಳಿಯದು. ಆದರೆ ನಾವು ಈ ಕಡೆಯಿವರೂ ಅಲ್ಲ, ಆ ಕಡೆಯವರೂ ಅಲ್ಲ. ಕರ್ಣಾಟಕದ ಹಿರಿಮೆಯೇನೆಂಬುದನ್ನು ತಿಳಿದು ಕೊಂಡಿರುವುದರಿಂದಲೇ ನಾವೀಗ ಈ ವಿಚಾರ ಪ್ರಸ್ತಾಪಮಾಡುತ್ತಿದ್ದೇವೆ. ಈಗ ಇಂಡಿಯಾ ದೇಶದಲ್ಲಿ ಗ್ರೇಡ್‌ವಾರ್ ಅಡ್ಮಿನಿಸ್ಟ್ರೇಷನ್ ನಡೆಯು ತ್ತಿದೆ. ಹೀಗೆ ಈ ಇಂಡಿಯಾ ದೇಶದಲ್ಲಿ ಒಂದು ದೇಶ ವನ್ನು ಚಿಕ್ಕದಾಗಿಯೂ, ಮತ್ತೊಂದನ್ನು ದೊಡ್ಡ ದಾಗಿಯೂ ಯಾರು ವಿಭಾಗ ಮಾಡಿದರು? ಹೀಗೆ ಚಿಕ್ಕ ಪುಟ್ಟ ಸಂಸ್ಥೆಗಳು ನೂರಾರನ್ನು ಮಾಡಿದ್ದಾಗ್ಯೂ ಅವುಗಳ ಬಗ್ಗೆ ಅಷ್ಟು ಅಶ್ರದ್ಧೆಯನ್ನು ತೋರಿಸಲು ಕಾರಣವಿಲ್ಲ. ಆದರೂ ಅವುಗಳ ಬಗ್ಗೆ ಅಂಥ ಅಶ್ರದ್ಧೆ ಯನ್ನು ತೋರಿಸಿರುತ್ತಾರೆಂಬ ಅಂಶವನ್ನು ಮರೆಯ ಬಾರದೆಂದು ಶ್ರೀ ಕೆ. ಪಟ್ಟಾಭಿರಾಮರ್‌ರವರು ತಿಳಿಸಿ ದ್ದಾರೆ. We are believers in the virtues of democracy. ಹೀಗೆ ಅವರು ಈ ದಿವಸ ತಮ್ಮ ಅನುಕೂಲತೆಗಾಗಿ ಕ್ಯೂನಲ್ಲಿ ನಿಲ್ಲಬೇಕಾಗಿದೆ. ಇದಕ್ಕೆ ಸಂಖ್ಯಾ ಬಲವೇ ಬಹಳ ಮುಖ್ಯ. ಹಾಗಿದ್ದರೂ ಈ ಸಂಖ್ಯಾಬಲದಿಂದೇನೂ ಅನುಕೂಲವಾಗುವುದಿಲ್ಲ, ರಾಜ್ಯ ಚಿಕ್ಕದಾಗಿಯೇ ಇರಲಿ ಎಂದು ಹೇಳುತ್ತಿರುವುದು ಸರಿಯಲ್ಲ. ಆದರೆ ಈ ದಿವಸ ಈ ಪ್ರಶ್ನೆಗೆ ಸರಿಯಾದಂಥ ಉತ್ತರವನ್ನು ಯಾರು ಹೇಳಬೇಕಾಗಿದೆ ಅಂದರೆ ಯಾರು ಈ ದಿವಸ ಗಂಜಿಗೆ ಉಪ್ಪಿಲ್ಲದೆ ಅದನ್ನು ಹಾಗೇ ಕುಡಿಯುತ್ತಿದ್ದಾರೋ ಅವರೇ ಇದಕ್ಕೆ ಉತ್ತರ ಹೇಳ ಬೇಕಾಗಿದೆ. We cannot develop democracy in mutual distrust. ಈ ದಿವಸ ಯಾವ ಒಂದು ರಾಜ್ಯಕ್ಕಾಗಲಿ ಅಥವಾ ರಾಷ್ಟ್ರಕ್ಕಾಗಲಿ ಯಾರು ಒಂದು ಕವಚದೋಪಾದಿಯಲ್ಲಿದ್ದಾರೋ ಅಂಥ ಜನ ಈ ಪರಿಸ್ಥಿತಿಯ ಬಗ್ಗೆ ಇನ್ನೂ 'ಅಯ್ಯೋ ಪಾಪ' ಎನ್ನತಕ್ಕಂಥ ಭಾವನೆ ಇರುತ್ತದೆ. ಇಂಥ ಭಾವನೆಯ ಶೇಷ ಅಷ್ಟಿಷ್ಟು ಅವರಲ್ಲಿ ಈ ದಿವಸ ಉಳಿದಿರುತ್ತೆಂದು ನಾನು ತಿಳಿದುಕೊಂಡಿ ದ್ದೇನೆ. ಆದರೆ ಈ ದಿವಸ ಯಾವ ಜನರು ಈ ಕರ್ಣಾ ಟಕ ಏಕೀಕರಣ ಆಗಲೇಬಾರದೆಂದು ಹೇಳಿದ್ದಾರೋ ಅಂಥವರ ಹೃದಯವನ್ನು ಕೂಲಂಕಷವಾಗಿ ಬಿಚ್ಚಿ ನೋಡಿದರೆ ಅವರ ಅಂತರಾಳದಲ್ಲಿ ಇದು ಆಗಲೇ ಬೇಕು ಎನ್ನುವಂಥ ಅಂಶವಿನ್ನೂ ಉಳಿದಿರುತ್ತೆಂಬುದು ಗೊತ್ತಾಗುತ್ತದೆ. ನಮ್ಮ ಸ್ಟೇಟ್ ಒಂದು ಕಾಂಪೋ ಜಿಟ್‌ಸ್ಟೇಟು—ಇದರ ಕೀರ್ತಿ ಹೀಗೆಯೇ ಉಳಿಯಲಿ ಎನ್ನುವುದಾಗಿದ್ದರೆ ಏಕೆ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಬೇಕಾಗಿತ್ತು? ಈ ಸ್ವರಾಜ್ಯ ಸ್ಥಾಪನೆಗಾಗಿ ನಮಗಿಂತಲೂ ಉತ್ತರ ಕರ್ಣಾಟಕದವರು ಹೆಚ್ಚು ಕಷ್ಟಗಳನ್ನು ಅನುಭವಿಸಿದ್ದಾರೆ. ಅಲ್ಲಿ ನಮ್ಮ ಅನೇಕ ಅಕ್ಕತಂಗಿಯರೂ, ಅಣ್ಣತಮ್ಮಂದಿರುಗಳೂ ಜೈಲಿಗೆ ಹೋಗಿದ್ದಾರೆ, ಗಂಡ ಪಾತಾಳಕ್ಕೆ ಹೋದರೆ— ಹೆಂಡತಿ ವೈಕುಂಠಕ್ಕೆ ಹೋದಳು ಎನ್ನುವಂತಾಗಿದೆ. ಅವರು ಹಾಗೆ ಈ ದೇಶಸೇವೆಗಾಗಿ ಎಷ್ಟರಮಟ್ಟಿಗೆ ದುಡಿದಿದ್ದಾರೆಂಬುದನ್ನು ನಾವೀದಿವಸ ಕಣ್ಣು ತೆರೆದು ನೋಡಿದರೆ ಆಗ ಏತಕ್ಕಾಗಿ ನಾವೀದಿವಸ ಉತ್ತರ ಕರ್ಣಾಟಕವನ್ನು ನಮ್ಮ ದೇಶಕ್ಕೆ ಸೇರಿಸಿಕೊಳ್ಳ ಬೇಕೆಂಬುದು ಚೆನ್ನಾಗಿ ಅರ್ಥವಾಗುತ್ತದೆ. ಆದರೆ ಅವರೇನೂ ಬೇರೆ ಜನರಲ್ಲ—ಅಥವಾ ಮತ್ತೊಬ್ಬರ ಬಲವಿಲ್ಲದೆ, ನಿಸ್ಸಹಾಯಕರಾಗಿರತಕ್ಕಂಥ ಜನ ರೇನೂ ಅಲ್ಲ. ಅವರೆಲ್ಲರೂ ಉತ್ಸಾಹ, ಶ್ರದ್ಧೆ, ಇವೆ. ಅವರಿಗೆ ಈ ದಿವಸ ನಮ್ಮೊಡನೆ ಸೇರಲು ಅವಕಾಶ ದೊರೆಯದಿದ್ದರೆ ಅವರೇನೂ ಇನ್ನು ಉಳಿಯುವುದೇ ಕಷ್ಟ ಎನ್ನುವಂಥ ಪ್ರಸಂಗವೇನೂ ಇಲ್ಲ. ಆದರೆ ಈ ಹಿಂದೆಯೇ ನೆಹರೂರವರು ಮೊದಲು ಗೊಂಡು ಅನೇಕ ದೊಡ್ಡ ದೊಡ್ಡ ಮಹನೀಯರುಗಳು ಈ ಏಕೀಕರಣದ ವಿಚಾರವಾಗಿ ಅಖಂಡ ಕರ್ಣಾಟಕ ಕೂಡಲೇ ನಿರ್ಮಾಣವಾಗಬೇಕೆಂಬುದಾಗಿ 3-4 ನಿರ್ಣಯಗಳನ್ನು ಪಾಸ್‌ಮಾಡಿದ್ದಾರೆ. ಈ ಮಧ್ಯೆ ದೇಶದಲ್ಲಿ ಯುದ್ಧ ದಾಹದಿಂದ ವಾತಾವರಣ

ಬಸಿಯಾಗಿದ್ದುದರಿಂದ ಕೆಲವು ಅನಿವಾರ್ಯಗಳಿಗೋಸ್ಕರವಾಗಿ ಈ ಪ್ರಶ್ನೆಯನ್ನು ತಾತ್ಕಾಲಿಕವಾಗಿ ಬಿಟ್ಟಿರೋಣವೆಂದು ಆಗ ಹೇಳಿದ್ದರು. ಆದರೆ ಹಾಗೆ ಒಂದಾವರ್ತಿ ಶಿಫಾರ್ಸು ಮಾಡಿರತಕ್ಕಂಥ ವಿಚಾರದಲ್ಲಿ ಜನರು ಇಷ್ಟು ಬೇಗ ಬ್ಯಾಂಕ್‌ರಪ್ಟ್ಸ್ ಆಗುತ್ತಾರೆಂದು ಯಾರೂ ಭಾವಿಸಿರಲಿಲ್ಲ. ಈ ದಿವಸ ಹಿಂದಿನ ದಿನಗಳ ಒಂದು ನೆನಪನ್ನು ಜನರ ಮನಸ್ಸಿಗೆ ತರುವುದಕ್ಕಾಗಿ ಈ ವಿಚಾರಗಳನ್ನೆಲ್ಲಾ ಪ್ರಚಾರ ಮಾಡಬೇಕಾಗಿರುತ್ತದೆಯೇ ಹೊರತು ಸುಮ್ಮನೆ ಜನರಲ್ಲಿ ಒಂದು ಇಲ್ಲದ ಸೆಂಟಿಮೆಂಟನ್ನು ಹುಟ್ಟಿಸಿ ಜನರಿಗೆ ನೀರು ಕುಡಿಸಬೇಕು ಎಂದು ಯಾರಲ್ಲೂ ಆ ಭಾವನೆಗಳಿಲ್ಲ. ಉತ್ತರ ಕರ್ಣಾಟಕ ಕಾಂಗ್ರೆಸ್ ಸಂಸ್ಥೆಯು ದೇಶಾಭ್ಯುದಯಕ್ಕಾಗಿ ಶ್ರಮಿಸಿರತಕ್ಕಂಥ ಹಿಂದಿನ ಚರಿತ್ರೆಯನ್ನು ತಾವೀದಿವಸ ತೆಗೆದು ನೋಡುವುದಾದರೆ ಅಲ್ಲಿಯ ಜನರು ಮೈಸೂರು ಕಾಂಗ್ರೆಸ್‌ನವರು ಸಲ್ಲಿಸಿರತಕ್ಕಂಥ ಸೇವೆಗಳೇನಿರುತ್ತವೆಯೋ ಅವುಗಳಿಗೆ ಯಾವುದಕ್ಕೂ ಕಡಮೆಯಿಲ್ಲದಂಥ ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಅವರು ಈ ದಿವಸ ಬಡತನಕ್ಕೆ ಸಿಕ್ಕಿದ್ದಾರೆ; ಬಡವರಿಗೆ ಮಕ್ಕಳು ಜಾಸ್ತಿ. ಏತಕ್ಕೆಂದರೆ ಶ್ರೀಮಂತರಿಗೆ ಕೊಬ್ಬು ಜಾಸ್ತಿಯಾಗಿ productive capacity ಕಮ್ಮಿಯಾಗಿ ಅವರಿಗೆ ಮಕ್ಕಳು ಕಮ್ಮಿ. ಈ ದಿವಸ ಒಬ್ಬ ಕಡುಬಡವನಿಗೆ ಉಡುತೊಡಲು ಏನೂ ಗತಿಯಿಲ್ಲದಿದ್ದಾಗ್ಗೂ ಆತನಿಗೆ ಐದು ಜನ ಮಕ್ಕಳಿದ್ದರೆ—ಮುಂದೆ ಅವರು ದೊಡ್ಡವರಾದಮೇಲೆ, ಅವರು ಪ್ರಾಯಕ್ಕೆ ಬಂದಮೇಲೆ ಅವರು ದುಡಿಮೆಮಾಡಲು ಶಕ್ತರಾದಕೂಡಲೇ ಆ ಸಂಸಾರದ ಬಡತನ ಕೂಡಲೆ ಮಾಯವಾಗುತ್ತದೆ. ಈ ದಿವಸ ಕರ್ಣಾಟಕ ಪ್ರಾಂತ್ಯದ ವಿಚಾರವೂ ಅಷ್ಟೆ. ಈ ಹಿಂದೆ ಇಡೀ ಭಾರತದಲ್ಲೇ ಈ ಕರ್ಣಾಟಕದ ವೈಭವ ಹೇಗಿತ್ತೆಂಬುದನ್ನು ನಾವೆಲ್ಲರೂ ಓದಿ ತಿಳಿದಿದ್ದಾಗಿದೆ. ಈಗಲೂ ಸಹ ಅದೇ ರೀತಿಯಾಗಿ ಆ ಹಿಂದಿನ ವೈಭವಗಳೆಲ್ಲಾ ಮತ್ತೊಮ್ಮೆ ಉದಯವಾಗಿ 'ಕರ್ಣಾಟಕ ರತ್ನ ಸಿಂಹಾಸನಾಧೀಶ್ವರ' ಎಂಬ ಬಿರುದಾಂಕಿತವನ್ನು ಕನ್ನಡನಾಡಿನ ಜನತೆ ಪಡೆಯಬೇಕೆಂದು ಹಾರೈಸುತ್ತೇನೆ—ಜೈ ಹಿಂದ್!

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಅಧ್ಯಕ್ಷರೇ, ಈಗ ಈ ಮಾನ್ಯ ಸಭೆಯಲ್ಲಿ ಈ ಕರ್ಣಾಟಕ ಏಕೀಕರಣದಮೇಲೆ ಆಗಿರತಕ್ಕಂಥ ಎಲ್ಲಾ ದಿವಸಗಳ ಚರ್ಚೆಯನ್ನೂ ಒಟ್ಟಾಗಿ ಕೂಡಿಸಿ ಒಂದೇ ಪುಸ್ತಕದಲ್ಲಿ ಅಚ್ಚು ಹಾಕಿಸಿ ಸದಸ್ಯರುಗಳಿಗೆ ಅವುಗಳನ್ನು ಒದಗಿಸಬೇಕೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

7 P.M.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಅಧ್ಯಕ್ಷರೇ, ಈ ಶೇಷಾದ್ರಿ ಸಮಿತಿಯ ವರದಿ ವಿಷಯದಲ್ಲಿ 4-5 ದಿವಸಗಳಿಂದ ವಿಪುಲವಾದ ಚರ್ಚೆ ನಡೆಯುತ್ತಿದೆ. ಮಾನ್ಯ ಸದಸ್ಯರುಗಳು ಶೇಷಾದ್ರಿ ವರದಿಯಲ್ಲಿ ಅಷ್ಟಾಗಿ ಉಪಯೋಗಕರವಾದ ಅಂಶಗಳಿಲ್ಲ ಎನ್ನುವ ಭಾವನೆಯಿಂದ ಮಾತನಾಡುತ್ತಿದ್ದಾರೆ. ಹಾಗಾದರೆ ಸರ್ಕಾರದವರು ಸುಮಾರು 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಈ ಸಮಿತಿಯನ್ನು ಏತಕ್ಕೋಸ್ಕರ ರಚನೆ ಮಾಡಿದರು ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಆದರೆ ಫಸಲಾಲಿ ಸಮಿತಿಯವರು ನಮ್ಮ ಸಂಸ್ಥಾನಕ್ಕೆ ಬಂದಾಗ ಅವರ ಮುಂದೆ ಈ ವಿಷಯದಲ್ಲಿ ನಮ್ಮ ತೀರ್ಮಾನವನ್ನು ಹೇಳಲು ಈ ಸಮಿತಿಯ ವರದಿಯನ್ನು ಆಧಾರವಾಗಿಟ್ಟುಕೊಳ್ಳಬೇಕೆಂದು ಸದಸ್ಯರೂ ಸರ್ಕಾರದವರೂ ಇದುವರೆಗೆ ಯಾವ ತೀರ್ಮಾನವನ್ನೂ ಕೊಡದೆ-ತಡೆ ಮಾಡಿರುವುದು ತಮಗೆಲ್ಲಾ ಗೊತ್ತಿದೆ. ಇವೊತ್ತಿನ ದಿವಸ- ನಮ್ಮ ಕೈ ಇದು ಸೇರಿ ಇದರಿಂದ ನಿಜವಾದ ಅಂಕಿಅಂಶಗಳು ನಮ್ಮ ಮುಂದೆ ಇರುವಾಗ ಅವು ಅನಾವಶ್ಯಕ ಎನ್ನುವ ವಾದವನ್ನು ನಮ್ಮ ಸ್ನೇಹಿತರು ಮಾಡುತ್ತಿದ್ದಾರೆ. Facts and figures ಇಲ್ಲದೆ ಏನು ವಾದ ಮಾಡಿದರೂ ಅದರಿಂದ ಪ್ರಯೋಜನವಾಗುವುದಿಲ್ಲ. ಸ್ನೇಹಿತರು ಕಾಂಗ್ರೆಸ್ಸಿನ resolutions ವಗೈರೆಗಳನ್ನು ಉದಹರಿಸಿ ಹಿರಿಯ ನಾಯಕರು ಕರ್ಣಾಟಕ ಏಕೀಕರಣ ಆಗಬೇಕು ಎಂದು ಹೇಳಿದ್ದನ್ನು ನಮ್ಮ ಗಮನಕ್ಕೆ ತಂದರು. ಆಗ ಸರ್ಕಾರ ತಮ್ಮ ಕೈಗೆ ತೆಗೆದುಕೊಳ್ಳದೇ ಇರುವಾಗ, ಆಡಳಿತ ತಮ್ಮ ಕೈಯಲ್ಲಿ ಇಲ್ಲದೇ ಇರುವಾಗ ಕಾಂಗ್ರೆಸ್ಸಿನ ರೀತಿ ನೀತಿಗಳು ಬೇರೆಯಾಗಿದ್ದವು. ಸರ್ಕಾರವನ್ನು ಈಗ ಕೈಗೆ ತೆಗೆದುಕೊಂಡಮೇಲೆ practical difficulties ಏನು ಎಂಬುದು ಗೊತ್ತಾಗಿದೆ. ಅಂಕಿ ಅಂಶಗಳನ್ನು ಬಿಟ್ಟು ಮಾತನಾಡಲು ಸಾಧ್ಯವಿಲ್ಲ. ಶ್ರೀ ಪುಟ್ಟಸ್ವಾಮಿಯವರು ಕೂಲಂಕಷವಾಗಿ ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿದ್ದಾರೆ. ನಮ್ಮ ಸ್ನೇಹಿತರು facts ಬೇಕಿಲ್ಲ. ಭಾರತ ದೇಶವೆಲ್ಲಾ ಒಂದು ಎಂಬ ದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಹೇಳಿದರು. ಅದು ಖಂಡಿತ. ಈ ರೀತಿ ಭಾರತ ಒಂದಲ್ಲ ಎನ್ನುವ ದೃಷ್ಟಿ ಇರುವುದಾದರೆ ನಾವು ಒಬ್ಬರಿಗೊಬ್ಬರಿಗೆ ಕಷ್ಟಕಾಲದಲ್ಲಿ ಸಹಾಯ ಮಾಡುತ್ತಿರಲಿಲ್ಲ. ನಮ್ಮ ದೇಶದಲ್ಲಿ ಆಗಾಗ್ಗೆ ಭೂಕಂಪ ಇತ್ಯಾದಿ ಆಗಿ ನಮ್ಮ ದೇಶದ ಜನರು ತೊಂದರೆಗೆ ಸಿಕ್ಕಿಕೊಂಡಾಗ ನಾವೆಲ್ಲರೂ ಕೈಲಾದ ಸಹಾಯವನ್ನು ಮಾಡಲಿಲ್ಲವೇ? ನಮ್ಮಲ್ಲಿ ಭೇದಭಾವನೆ ಇಲ್ಲ. ನಾನು ಒಬ್ಬ ಜವಾಬ್ದಾರಿಯುತ ಸದಸ್ಯ. ಆಯಾ ಕ್ಷೇತ್ರಗಳ ಅಭಿಪ್ರಾಯ ಏನು ಎಂಬುದನ್ನು ಪ್ರತಿಬಿಂಬಿಸಿ ಆಯಾ ಕ್ಷೇತ್ರಗಳ ಜನರ ಮನೋಭಾವನೆ ಏನು ಇದೆಯೆಂಬುದನ್ನು ತಿಳಿದುಕೊಂಡು ಅದರಂತೆ ಮಾತನಾಡಬೇಕು. ಅದು ನಮ್ಮ ಹೆಗ್ಗುರಿ ಎಂದು ತಿಳಿದುಕೊಂಡು ಮಾತನಾಡುತ್ತಿದ್ದೇನೆ. ನಾನು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಉತ್ತರ ಕರ್ಣಾಟಕ ಪ್ರಾಂತ್ಯಕ್ಕೆ ಹೋಗಿದ್ದೆ. ಆ ಪ್ರದೇಶಗಳು ನಿಜವಾಗಿಯೂ ತಾವು ಹೇಳುವಷ್ಟು ಮಟ್ಟಿಗೆ ಹಿಂದುಳಿದಿವೆ ಎಂದು ಹೇಳುವುದಿಲ್ಲ. ಅಲ್ಲಿ ಬೇಕಾದಷ್ಟು ಸೌಲಭ್ಯಗಳಿವೆ. ಆದರೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತೆಗೆದುಕೊಂಡಮೇಲೆ ಕರ್ಣಾಟಕ ಪ್ರಾಂತ ಮಹಾರಾಷ್ಟ್ರ ಎಂಬ ಭೇದಭಾವದಿಂದ ರಾಜ್ಯಭಾರ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಯಾವ ಯಾವ ಪ್ರಾಂತ್ಯದಲ್ಲಿ ಕೊರತೆ ಇದೆಯೋ ಅಲ್ಲಿಗೆ ಸಾಕಾದಷ್ಟು ಹಣ ಒದಗಿಸಿ ಸರಿದೂಗಿಸುವುದಕ್ಕೆ ಬೇಕಾದಷ್ಟು ಶ್ರಮಪಡುತ್ತಿದ್ದಾರೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಕರ್ಣಾಟಕದ ಭಾಗಗಳ ಜನರು ಬಹಳ ಕಷ್ಟಪಡುತ್ತಿದ್ದಾರೆಎಂದು ಹೇಳಿದರು. ಆದರೆ ಬೊಂಬಾಯಿನಲ್ಲಿ ಮಹಾರಾಷ್ಟ್ರದವರು, ಕನ್ನಡಿಗರು ಎಂಬ ಭೇದ ಭಾವನೆಯನ್ನು ಅಲ್ಲಿಯ ಸರ್ಕಾರದ ರಾಜಸೂತ್ರಗಳನ್ನು ಹಿಡಿದಿರುವವರು ತೋರಿಸುತ್ತಿಲ್ಲ. ಕರ್ಣಾಟಕದ ಜನರು ಮೈಸೂರಿನ ಜನತೆಗೆ ಕರ್ಣಾಟಕ ಆಗಬೇಕೆಂದು ಹೇಳುತ್ತಿದ್ದಾರೆ. ಹೀಗೆ ಕರ್ಣಾಟಕ ಒಂದಾಗಬೇಕು ಎಂಬ ಮನೋಭಾವನೆ ಇರುವುದು ಸಾಮಾನ್ಯವಾಗಿ ರಾಜಕೀಯದಲ್ಲಿರುವವರಲ್ಲಿ ಮತ್ತು ವಿಷಯಗಳನ್ನು ಅರಿತುಕೊಂಡಿರತಕ್ಕವರಲ್ಲಿ, ಅಂಥ ಜನರು ಅಲ್ಲಿ ಹೆಚ್ಚಾಗಿ ಇದ್ದಾರೆ. ಇಲ್ಲಿ ಸಾಮಾನ್ಯ ಜನಗಳಿಗೆ ಈ

(ಶ್ರೀ ಕೆ. ವಿ. ಬೈರೇಗೌಡ)

ವಿಷಯ ಅಷ್ಟಾಗಿ ಗೊತ್ತಿಲ್ಲ. ನಮ್ಮ ಮೈಸೂರು ಸಿಟಿ, ಬೆಂಗಳೂರು ಮತ್ತು ಕೋಲಾರ, ತುಮಕೂರು, ಮಂಡ್ಯ ಈ ಭಾಗಗಳಲ್ಲಿ ಸೇರಿ ಕರ್ಣಾಟಕ ಎಂಬುದು ಕನಸಾಗಿದೆ, ಕರ್ಣಾಟಕ ಏತಕ್ಕೆ ಒಂದಾಗಬೇಕು ಎಂದು ಆಶ್ಚರ್ಯಪಡುತ್ತಾರೆ. ನಮ್ಮ ದೇಶಕ್ಕೆ ಈಗ ಬೇಕಾದ ಸೌಕರ್ಯಗಳಮೇಲೆ ಜನರ ಗಮನ ಹೋಗಿದೆ. ರಾಜ್ಯ ದೊಡ್ಡದು ಆಗಬೇಕು; ಕರ್ಣಾಟಕ ಪ್ರಾಂತ ಮಾಡಬೇಕು ಎನ್ನುವ ವಿಷಯಕ್ಕೆ-ಗಮನ ಕೊಡುತ್ತಾ ಇಲ್ಲ. ಈ ಸಂದರ್ಭದಲ್ಲಿ ಅದರಲ್ಲೂ ಈಗ ಒಳ್ಳೆಯ ರಾಜ್ಯಭಾರ ನಡೆಯುತ್ತಾ ಇರುವಾಗ, ಕರ್ಣಾಟಕ ಪ್ರಶ್ನೆಯನ್ನು ಹುಟ್ಟಿಸಿ ವಾತಾವರಣವನ್ನು ಕಲಕಿಸುವುದು ಒಳ್ಳೆಯದಲ್ಲ. ದೇಶ ಕಟ್ಟುವುದಕ್ಕೋಸ್ಕರ 5 ವರ್ಷಗಳ ಮತ್ತು 10 ವರ್ಷಗಳ ಯೋಜನೆಗಳಿವೆ. ಅದನ್ನೆಲ್ಲಾ ಕಾರ್ಯಗತ ಮಾಡುವುದಕ್ಕೆ ಎಲ್ಲರೂ ಪ್ರಯತ್ನ ಮಾಡಿ ಪ್ರಗತಿಯನ್ನು ಸ್ಥಾಪಿಸಬೇಕೆಂದು ಕಾಂಗ್ರೆಸ್ ಸರಕಾರದವರೂ ಮತ್ತು ರಾಜಕೀಯ ಮುಂದಾಳುಗಳೂ ಹೇಳುತ್ತಿದ್ದಾರೆ. ಅದನ್ನು ಸಾಧಿಸಲು ಮನಸ್ಸು ಮಾಡಬೇಕು. ಅದನ್ನು ಬಿಟ್ಟು ಕರ್ಣಾಟಕಪ್ರಾಂತ್ಯ ಮಾಡಿ, ರಾಜ್ಯ ದೊಡ್ಡದು ಮಾಡಿ ಪ್ರಗತಿಯನ್ನು ಸಾಧಿಸುತ್ತೇವೆ ಎಂದರೆ, ಅದರಲ್ಲಿ ರುಳಿಲ್ಲವೆಂದು ಹೇಳುತ್ತೇನೆ. ಇವೊತ್ತಿನ ದಿವಸ ನಾವು ದೇಶದ ಪ್ರಜೆಗಳ ಅಭಿಪ್ರಾಯವನ್ನು ಪ್ರತಿಬಿಂಬಿಸಲು ಮತ್ತು ಆಯಾ ಕ್ಷೇತ್ರದ ಜನರ ಅಭಿಪ್ರಾಯಗಳನ್ನು ಪ್ರತಿಬಿಂಬಿಸಲು ಈ ಸಭೆಗೆ ಬಂದಿದ್ದೇವೆ. ನನ್ನ ಕ್ಷೇತ್ರದ ಅಭಿಪ್ರಾಯವನ್ನು ಹೇಳುವುದಾದರೆ, ನನ್ನ ಕ್ಷೇತ್ರದ ಜನರಿಗೆ ಇದರಲ್ಲಿ ಹೆಚ್ಚಿಗೆ ಆಸಕ್ತಿ ಇಲ್ಲ. ಈ ಪ್ರಶ್ನೆಯನ್ನು ಇನ್ನು ತೆಗೆದುಕೊಳ್ಳದೇ ಇರುವುದು ಕ್ಷೇಮ. ಮೊದಲನೆಯ ಮತ್ತು ಎರಡನೆಯ ಪಾಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು. ಈಗ ಈ ಗೊಂದಲದಲ್ಲಿ ಕೈಹಾಕಿ ವಾತಾವರಣವನ್ನು ಕಲಕಬೇಡಿ. ಇದನ್ನೇ ನಮ್ಮ ಮುಖಂಡರುಗಳು ಹೇಳುತ್ತಿದ್ದಾರೆ. ಮೈಸೂರು ದೇಶದಲ್ಲಿ ನಾಲ್ಕಾರು ಭಾಷೆಗಳಿವೆ. ತೆಲುಗರು, ತಮಿಳರು, ಕನ್ನಡಿಗರು ಎಂಬ ಭೇದಭಾವವಿಲ್ಲದೆ ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದಾರೆ. ನಮಗೆ ಮುಖ್ಯವಾಗಿ ಬೇಕಾಗಿರುವುದು ದೇಶಾಭಿಮಾನ. ದೇಶಾಭಿಮಾನವಿದ್ದ ವ್ಯಕ್ತಿ ಯಾರೇ ಆಗಲಿ ಚುನಾಯಿಸಿ ಬರುವುದಕ್ಕೆ ಈಗ ಅವಕಾಶವಿದೆ. ಇಂತಹ ವಾತಾವರಣವನ್ನು ಕಲಕದೆ ಕೆಲವುಕಾಲ ಹೀಗೆ ನಡೆದುಕೊಂಡು ಹೋಗಬೇಕು; ಮತ್ತು ಯೋಜನೆಗಳು ಯಶಸ್ವಿಯಾಗಲು ಬಹಳ ದುಡಿಯಬೇಕಾಗುತ್ತದೆ. ಸ್ನೇಹಿತರು ಭಾಷೆಯ ಆಧಾರದಮೇಲೆ ಪ್ರಾಂತ್ಯ ನಿರ್ಮಾಣ ಮಾಡಬೇಕೆಂದು ಹೇಳುತ್ತಾರೆ. ಹೀಗೆ ಕರ್ಣಾಟಕ ಮಾಡುವುದಾದರೆ, ಸ್ವಾಭಾವಿಕವಾಗಿ ಇನ್ನೊಂದು ಪ್ರಶ್ನೆ ಏಳುತ್ತದೆ. ಮೈಸೂರಿನಲ್ಲಿ ಇತರ ಭಾಷೆಗಳನ್ನು ಮಾತನಾಡತಕ್ಕ ಜನ ಕೋಲಾರ ಮತ್ತು ಬೆಂಗಳೂರಿನ 6-7 ತಾಲ್ಲೂಕುಗಳಲ್ಲಿದ್ದರೆ ನಾವು ಭಾಷೆಯನ್ನು ಗುರಿಯಾಗಿಟ್ಟುಕೊಂಡು ದೇಶವನ್ನು ಕಟ್ಟುವುದಾದರೆ, ಅವರು ಭಾಷೆಯ ಆಧಾರದಮೇಲೆ ಆಂಧ್ರಕ್ಕೋ ತಮಿಳುನಾಡಿಗೋ ಹೋಗಲು ತಯಾರಾಗಿದ್ದೇವೆಂದು ಹೇಳಬಹುದು. ಸಹಸ್ರಾರು ವರ್ಷಗಳಿಂದ ಒಂದು ಕಡೆ ಇದ್ದು, ಈಗ ಅವರನ್ನು ಕೈಬಿಡುವುದು ನ್ಯಾಯವೇ, ಧರ್ಮವೇ ಎಂಬುದನ್ನು ಮುಂದೆ ಯೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಸಮಸ್ಯೆಯನ್ನು ಯೋಚನೆ ಮಾಡಬೇಕು. ಹೈ ಪವರ್ ಕಮಿಷನ್‌ಅವರು ದೇಶವನ್ನು ಪುನರ್ನಿರ್ಮಾಣ ಮಾಡುವವರಾಗಿದ್ದಾರೆ. ಆದ್ದರಿಂದ ಅದಕ್ಕೆ ನಾವು ಹೆಚ್ಚಿನ ಪ್ರಾಧಾನ್ಯತೆ ಕೊಡದೆ ದೇಶ ಮುಂದೆ ಬರಬೇಕು ಎಂಬ ಉದ್ದೇಶದಿಂದ ದೇಶದ ಜನತೆಗೆ ಏನೇನು ಅಗತ್ಯವಾಗಿ ಆಗಬೇಕೋ ಆ ಕೆಲಸಕಾರ್ಯಗಳಿಗೆ ಹೆಚ್ಚು ಗಮನ ಕೊಡಬೇಕು. ಅದಕ್ಕೆ ಮನಸ್ಸು ಕೊಡಬೇಕು. ಒಂದು ಕಡೆ ನಮ್ಮ ಸ್ನೇಹಿತರು ಕರ್ಣಾಟಕವಾಗಬೇಕು ಎಂಬ ಪ್ರಚಾರಕಾರ್ಯದಲ್ಲಿ ತೊಡಗುವುದಾದರೆ ಅಷ್ಟೇ ಪ್ರಮಾಣದಲ್ಲಿ ಇನ್ನೊಂದರ ಭಾಗದ ಜನರು ಅದನ್ನು ಮಾಡಕೂಡದು ಎಂದು ಪ್ರಚಾರ ಮಾಡಲು ಹೊರಡುತ್ತಾರೆ. ಇದು ಮನುಷ್ಯನ ಸ್ವಾಭಾವಿಕವಾದ ಗುಣ. ಇಂತಹ ಒಂದು ಗುಣಕ್ಕೆ ಅವಕಾಶಕೊಡದೆ ದೇಶಾಭಿವೃದ್ಧಿಗೆ ಮತ್ತು ದೇಶದ ಹಿತಕ್ಕೆ ಕೆಲಸ ಮಾಡಿ, ಮೈಸೂರು ಈಗ ಯಾವ ರೀತಿ ಇದೆಯೋ ಅದೇ ರೀತಿ ಅದು ಇನ್ನೂ ಕೊಂಚ ಕಾಲ ಇರಬೇಕು. ಕೇಂದ್ರ ಸರಕಾರದವರು ಹಾಕಿರತಕ್ಕಂಥ plans successful ಆಗಬೇಕಾದರೆ, ಅದೇ ರೀತಿ ಕೊಂಚಕಾಲ ಇರುವುದು ಕ್ಷೇಮ. ಮೈಸೂರು ಮೈಸೂರಾಗಿಯೇ ಉಳಿಯಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ಈ ಅಂಕಿ ಅಂಶಗಳ ಪರಿಶೀಲನಾ ಸಮಿತಿ ವರದಿಯ ಮೇಲೆ ಈಗ ನಡೆದಿರತಕ್ಕಂಥ ವಿಪುಲವಾದ ಚರ್ಚೆಯ ವಿಷಯದಲ್ಲಿ ಎರಡು ಅಭಿಪ್ರಾಯಗಳು ವ್ಯಕ್ತವಾಗಿವೆ. ಸ್ವಾಮಿ, ಬಹಳ ದೊಡ್ಡದಾಗಿ ನಾವು ಈ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ ಎಂದು ನನ್ನ ಅಭಿಪ್ರಾಯ. ಈಗ ಕರ್ಣಾಟಕ ಏಕೀಕರಣ ವಿಚಾರದಲ್ಲಿ ಚಳವಳಿ ಹೋರಾಟದ ಬಗ್ಗೆ ಚರ್ಚೆ ಮಾಡತಕ್ಕ ಕಾಲ ಮೀರಿಹೋಗಿದೆ ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ ಕರ್ಣಾಟಕವಾಗಬೇಕು ಎನ್ನುವ ಕನ್ನಡಿಗರ ಚಳುವಳಿಯ ಕಾಲ ಒಂದು ಇತ್ತು. ಅದು ಪೂರೈಸಿ ಹೋಗಿದೆ. ಈಗ ನಮ್ಮ ದೇಶದ ನಾಯಕರು ಈ ಕನ್ನಡ ಮಾತನಾಡತಕ್ಕ ಜನರ ವಿಷಯವಾಗಲೀ ಇಲ್ಲವೇ ಇನ್ನೊಂದು ಪ್ರಾಂತದ ವಿಷಯವೇ ಆಗಲೀ ಅಖಿಲ ಭಾರತ ದೃಷ್ಟಿಯಿಂದ ನೋಡುತ್ತಾ ಇದ್ದಾರೆ. ದೇಶದ ರಾಜಕೀಯ ಪರಿಸ್ಥಿತಿ, ವಿವಿಧ ಪ್ರಾಂತಗಳ ರಾಜಕೀಯ ಅಭಿವೃದ್ಧಿಗಳು ಇವನ್ನೆಲ್ಲಾ ಗಮನಿಸಿರತಕ್ಕ ನಮ್ಮ ನಾಯಕರು ಇದನ್ನು ಅಖಿಲ ಭಾರತ ಪ್ರಶ್ನೆಯಾಗಿ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಕರ್ಣಾಟಕ ಏಕೀಕರಣ ಅಗತ್ಯ. ಅಷ್ಟೇ ಅಲ್ಲ. ಅದು ಅವಶ್ಯಕವೂ ಹೌದು. ಈ ಬಗ್ಗೆ ನಮ್ಮ ಸರ್ಕಾರದವರು ನೇಮಿಸಿದ ಅಂಕಿ ಅಂಶಗಳ ಸಮಿತಿಯ ವರದಿ ನಮ್ಮ ಕೈಯಲ್ಲಿದೆ. ಈ ಭೌಗೋಳಿಕ, ಚಾರಿತ್ರಿಕ, ಸಂಸ್ಕೃತಿ, ಭಾಷೆ ಇವುಗಳಿಂದ ಮತ್ತು ಜನತೆಯ ಅಭಿಪ್ರಾಯದಿಂದ ದೂರ ಸರಿದು, ಕೇವಲ ನಿರ್ಜೀವವಾದ ಅಂಕಿ ಅಂಶಗಳಿಂದಲೇ ಈ ಸಮಸ್ಯೆಯನ್ನು ನೋಡತಕ್ಕದ್ದು ಅಷ್ಟು ಸಮಂಜಸ ಅಲ್ಲ. ಈ ವರದಿ ಪೂರ್ಣ ಚಿತ್ರವನ್ನು ಕೊಡುವುದಿಲ್ಲ ಎನ್ನುವ ಬಗ್ಗೆ ಅನೇಕರು ಈಗಾಗಲೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿರುವ ಕೆಲವು ಸತ್ಯಾಂಶಗಳನ್ನು ಕೂಡ ಗಮನಿಸಬೇಕಾಗುತ್ತದೆ. ನಾನು ಅಂಕಿ ಅಂಶಗಳ ವಿಷಯಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಮೈಸೂರು ಕೆಲವು ವಿಚಾರಗಳಲ್ಲಿ ಮುಂದುವರಿದಿದ್ದರೆ ಇನ್ನು ಕೆಲವು ವಿಚಾರಗಳಲ್ಲಿ ಇತರ ಕನ್ನಡ ಭಾಗಗಳಿಗಿಂತ ಹಿಂದುಳಿದಿದೆ. ಅಂಕಿಅಂಶಗಳಮೇಲೆ ನನಗಿಂತ ಮುಂಚೆ ಮಾತನಾಡಿದ ಸದಸ್ಯರು ಬಹಳ ಸ್ಪಷ್ಟವಾಗಿ ಅಭಿ

ಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ. ನಾವು ಏನು ಒಂದು ತತ್ವನನ್ನು ಒಪ್ಪಿಕೊಂಡು ಬಂದಿದ್ದೇವೋ ಆ ಒಂದು ತತ್ವವನ್ನು ನಾವು ಬಿಡದೆ ಹಾಗೆಯೇ ಅನುಸರಿಸಿಕೊಂಡು ಬರಬೇಕೆಂಬುದೇ ನನ್ನ ಅಭಿಪ್ರಾಯ. ಅನೇಕ ವರ್ಷಗಳಿಂದ ಕಾಂಗ್ರೆಸ್ಸಿನ ಪವಿತ್ರ ಧ್ಯೇಯಗಳಲ್ಲಿ Linguistic Provinces ಸೇರಿದೆ. ಅದನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಯುಗಪುರುಷರಾದ ಮಹಾತ್ಮ ಗಾಂಧಿ, ಮುಂತಾದ ಮಹಾ ನಾಯಕರು ರಾಷ್ಟ್ರದ ಪ್ರಗತಿಯಾಗಬೇಕಾದರೆ, ಸುಭದ್ರವಾದ ರಾಜ್ಯವನ್ನು ರಚಿಸಬೇಕಾದರೆ ಭಾಷೆಗಳಿಗೆ ಅನುಗುಣವಾಗಿ ಪ್ರಾಂತಗಳನ್ನು ರಚಿಸಬೇಕಾದ್ದು ನಿರ್ವಿವಾದವಾಗಿದೆ ಎಂದು ಅವರ ಭಾಷಣಗಳಲ್ಲಿ ಹೇಳಿರುವುದು ಎಲ್ಲರಿಗೂ ವೇದ್ಯವಾಗಿದೆ. ಹೀಗಿದ್ದೂ ಭಾಷಾವಾರು ದೃಷ್ಟಿಯಿಂದ ಪ್ರಾಂತ್ಯಗಳನ್ನು ಮಾಡುವುದಕ್ಕೆ ವಿರೋಧ ಸೂಚಿಸುವುದು ಒಳ್ಳೆಯದಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಹೀಗೆ ಅಂಕಿ ಅಂಶಗಳಿಗೆ ತತ್ವವನ್ನು ಒಳಪಡಿಸುವುದು ಬುದ್ಧಿವಂತರ ಲಕ್ಷಣವಲ್ಲ. ಆ ತತ್ವಕ್ಕೆ ಅಂಕಿ ಅಂಶಗಳು ಸಾಧಕವಾಗಬೇಕೇ ವಿನಾ ಆ ತತ್ವಕ್ಕೆ ಅಂಕಿ ಅಂಶಗಳನ್ನು ಅಡ್ಡಿ ತರುವುದು ವಿವೇಕವಲ್ಲ ಎಂದು ನಾನು ಹೇಳುತ್ತೇನೆ. ಇದರಲ್ಲಿ ಸಾಧಕ ಬಾಧಕಗಳಿವೆ. ಕರ್ಣಾಟಕದ ಇತರ ಭಾಗಗಳು per capita ಭೂಮಿ ಮತ್ತು ಖಾಸಗೀ ಉದ್ಯಮದ ವಿಷಯದಲ್ಲಿ ನಮಗಿಂತಲೂ ಹೆಚ್ಚು ಇದೆಯೆಂದು ಹೇಳುತ್ತಾರೆ.

ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ನಾವು ಇವೊತ್ತಿನ ದಿವಸ ಈ ವಿಷಯದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಈಗ ನಾವು ಕೈಕೊಳ್ಳತಕ್ಕ ತೀರ್ಮಾನ ಮುಂದಿನ ಜನಾಂಗದ ಭವಿಷ್ಯತ್ತಿಗೆ, ಎರಡು ಕೋಟಿ ಕನ್ನಡಿಗರು ಓದತಕ್ಕ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವಾದ ವಿಷಯ. ಮುಂದಿನ ಜನಾಂಗ ಓದತಕ್ಕ ಸಂದರ್ಭದಲ್ಲಿ ಇಂಥ ಮಹಾ ಸಭೆ ಇಂಥ ಪ್ರಾಮುಖ್ಯವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿತು, ಅದರಿಂದಾಗಿ ಇಂಥ ಒಂದು ಬಲಾಢ್ಯ ಪ್ರಾಂತ್ಯವನ್ನಾಳುವ ಸುಯೋಗ ಒದಗಿತೆಂಬ ಕೀರ್ತಿ ಆಚಂದ್ರಾರ್ಕವಾಗಿ ಈ ಸಭೆಗೆ ದೊರೆಯಲಿ. ಆದಕಾರಣ ಎಲ್ಲರೂ ಒಮ್ಮನಸ್ಸಿನಿಂದ ಸ್ವಾಗತಿಸಿ ಏಕಮನಸ್ಸಿನಿಂದ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಸುಮಾರು ನಾಲ್ಕೈದು ದಿವಸಗಳಿಂದಲೂ ಶೇಷಾದ್ರಿ ಸಮಿತಿಯವರು ಒದಗಿಸಿರುವ ಅಂಕಿ ಅಂಶಗಳ ಮೇಲೆ ನಮ್ಮ ಮೈಸೂರು ದೇಶ ಯಾವರೀತಿಯಿರಬೇಕು, ಈಗಿನ ಸ್ಥಿತಿಯೇ ಇರಬೇಕೇ ಅಥವಾ ವಿಶಾಲವಾಗಬೇಕೇ ಎಂಬ ವಿಷಯದಲ್ಲಿ ವಿಪುಲವಾದ ಚರ್ಚೆ ನಡೆಯುತ್ತಿರುವುದು ನಮಗೆಲ್ಲರಿಗೂ ಗೊತ್ತೇ ಇದೆ. ಮುಖ್ಯವಾಗಿ ಮೈಸೂರುದೇಶ ವಿಶಾಲವಾಗಬೇಕೆನ್ನುವುದರಲ್ಲಿ ಯಾವರೀತಿ ಆಗಬೇಕು, ಯಾವ ಉದ್ದೇಶಕ್ಕಾಗಿ ಆಗಬೇಕೆಂಬುದನ್ನು ಎಲ್ಲರೂ ಗಾಢವಾಗಿ ಯೋಚನೆ ಮಾಡಬೇಕು. ಏಕೆಂದರೆ ನಾವೆಲ್ಲರೂ ಭಾರತೀಯರು ಎಂಬ ಭಾವನೆಯಿಂದ ದೇಶವನ್ನು ಕಟ್ಟುವುದರಲ್ಲಿ ನಿರತರಾಗಿದ್ದೇವೆ. ಆದ್ದರಿಂದ ನಾವು ಯಾವುದೇ ಒಂದು ಭಾಷೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇ ಆದರೆ ಖಂಡಿತವಾಗಿ ಇಂಡಿಯಾ ದೇಶಕ್ಕೆ ಬಹಳ ಹಾನಿಯಾಗುತ್ತದೆ. ನಾವು ರಾಜ್ಯಭಾರ ನಡೆಸುವುದರ ಅನುಕೂಲತೆಯ ದೃಷ್ಟಿಯಿಂದ ಈ ವಿಷಯವನ್ನು ಪರಿಶೀಲಿಸಬೇಕೇ ಹೊರತು ಭಾಷೆಯ ಆಧಾರದಮೇಲೆ ಪ್ರಾಂತ್ಯಗಳನ್ನು ಕಟ್ಟುತ್ತಾ ಹೋದರೆ ಖಂಡಿತವಾಗಿಯೂ ಒಳ್ಳೆಯದಾಗುವುದಿಲ್ಲ. ಯಾವ ಉದ್ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟ ನಡೆಸಿದೆವೋ, ಆ ಉದ್ದೇಶಕ್ಕೆ ಇದು ಕಳಂಕ ತರುವುದರಲ್ಲಿ ಯಾವ ಸಂಶಯವೂ ಇಲ್ಲ. ನಮ್ಮ ರಾಜಪ್ರಮುಖರೂ ಕೂಡ ಇದೇ ವಿಷಯವನ್ನು ಒತ್ತಿ ಹೇಳಿದ್ದಾರೆ. ನಮ್ಮ ಮೈಸೂರು ವಿಶಾಲವಾಗಬೇಕಾದರೆ ನಮ್ಮ ದೇಶದ ಹಿತದೃಷ್ಟಿಯೇ ನಮ್ಮ ಮುಖ್ಯ ಗುರಿಯಾಗಿರಲಿ, ಮತ್ತಾವ ಕಾರಣದಿಂದಲೂ ವಿಶಾಲ ಮಾಡುವ ಯೋಚನೆ ಮಾಡುವುದು ಸೂಕ್ತವಲ್ಲವೆಂದು ರಾಜಪ್ರಮುಖರು ಹೇಳಿರುವುದೂ ಮಾನ್ಯ ಸದಸ್ಯರು ಯೋಚನೆ ಮಾಡಬೇಕಾದ ವಿಷಯ. ಅದಕ್ಕೆ ಸರಿಯಾಗಿ ಶೇಷಾದ್ರಿ ಸಮಿತಿಯವರೂ ಅಂಕಿಅಂಶಗಳನ್ನು ಸವಿಸ್ತಾರವಾಗಿ ಒದಗಿಸಿದ್ದಾರೆ. ಅವರು ಭಾಷಾವಾರು ಪ್ರಾಂತ್ಯವಾಗಲಿ ಅಥವ ಹೋಗಲಿ ಎಂಬ ಯಾವ ಪಕ್ಷವನ್ನು ವಹಿಸಿಯೇನೂ ಹೇಳಿಲ್ಲ. ತಮಗೆ ಸಿಕ್ಕಿದಂಥ ಅಂಕಿ ಅಂಶಗಳನ್ನು ಮುಚ್ಚುಮರೆಯಿಲ್ಲದೆ ತಿಳಿಸಿ ನಮ್ಮ ಅಭಿಪ್ರಾಯಕ್ಕೆ ಬಿಟ್ಟಿದ್ದಾರೆ. ಅದನ್ನು ನೋಡಿ ನಮ್ಮ ರಾಜ್ಯ ಯಾವರೀತಿ ವಿಸ್ತಾರವಾಗಬೇಕು, ಯಾವರೀತಿ ವಿಸ್ತಾರವಾದರೆ ನಮ್ಮ ಜನರಿಗೆ ಒಳ್ಳೆಯದಾಗುತ್ತದೆಂಬುದನ್ನು ನಿರ್ಧರಿಸಿಕೊಳ್ಳಬಹುದು. ಇವೊತ್ತು ಬೊಂಬಾಯಿ ಪ್ರಾಂತ್ಯ ವಿಶಾಲವಾಗಿರುವುದರಿಂದ, ಅವರ ರಾಜ್ಯಭಾರದಲ್ಲಿ ಜನತೆಗೆ ಎಷ್ಟುಮಟ್ಟಿಗೆ ಅನುಕೂಲತೆ ದೊರೆಯಬೇಕಾಗಿತ್ತೋ ಅಷ್ಟುಮಟ್ಟಿಗೆ ಸಿಕ್ಕುತ್ತಿಲ್ಲವೆಂಬ ವಿಷಯ ತಮಗೆಲ್ಲರಿಗೂ ತಿಳಿದು ಬರುತ್ತಿದೆ. ಆದ್ದರಿಂದ ಎಷ್ಟರಮಟ್ಟಿಗೆ ವಿಸ್ತಾರವಾಗಬೇಕು, ಎಷ್ಟು ವಿಸ್ತಾರವಾದರೆ ಒಳ್ಳೆಯದಾಗುತ್ತದೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದಾಗಿದೆ. ಇವೊತ್ತಿನ ದಿವಸ ವಿದ್ಯಾಭ್ಯಾಸ, ವೈದ್ಯಕೀಯ ಸೌಕರ್ಯ, ರಸ್ತೆ ಮೊದಲಾದ ಪ್ರತಿಯೊಂದು ವಿಷಯದಲ್ಲೂ ನಮ್ಮದೇಶದಲ್ಲಿ ದಕ್ಷತೆಯಿಂದ ಕೆಲಸ ನಡೆಯುತ್ತಿರುವುದಕ್ಕೆ, ನಮ್ಮ ದೇಶ ಇಂಡಿಯಾ ದೇಶದಲ್ಲೇ ಮಾದರಿಯಾಗುವರೀತಿಯಲ್ಲಿ ಕೆಲಸ ಮಾಡುತ್ತಿರುವುದಕ್ಕೆ ಒಂದು ಮುಖ್ಯ ಕಾರಣ ನಮ್ಮದೇಶದ ಚೌಕಟ್ಟು ಅಷ್ಟು ವಿಶಾಲವಾಗದೆ ಚಿಕ್ಕದಾಗಿರುವುದರಿಂದ ಎಲ್ಲ ವಿಷಯಗಳಿಗೂ ಗಮನಕೊಡುವುದಕ್ಕೆ ಸಾಧ್ಯವಾಗಿರುವುದು. ಈ ಸಂದರ್ಭದಲ್ಲಿ ನೇಮಕವಾಗಿರುವ ಫಸಲಾಲಿ' ಕಮಿಟಿಯವರು ಕೂಡ ಬರೀ ಭಾಷೆಗೆ ಗಮನಕೊಡದೆ ಆಡಳಿತ ದೃಷ್ಟಿಯಿಂದ ರಾಜ್ಯ ಎಷ್ಟರಮಟ್ಟಿಗೆ ವಿಸ್ತಾರವಾಗುವುದು ಉಚಿತವೆಂಬುದನ್ನು ಗಮನಿಸಿ ಗಡಿ ನಿರ್ಧಾರ ಮಾಡುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಅದೇ ಪ್ರಕಾರ ನಾವೂ ಕೂಡ ಇಂದು ಭಾಷೆಗೆ ಅಷ್ಟು ಪ್ರಾಧಾನ್ಯ ಕೊಡದೆ ಮೈಸೂರು ದೇಶ ಎಷ್ಟರಮಟ್ಟಿಗೆ ವಿಸ್ತಾರವಾದರೆ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆಂಬುದನ್ನು ಯೋಚನೆ ಮಾಡುವುದಾದರೆ ಸೌತ್ ಕೆನರಾ, ಕೊಡಗು, ಕೊಳ್ಳೇಗಾಲ, ಮಡಕಶಿರ—ಈ ಪ್ರದೇಶಗಳನ್ನು ಸೇರಿಸಿಕೊಂಡರೆ ಒಳ್ಳೆಯದಾಗಬಹುದೆಂದು ಅನೇಕ ಮಾನ್ಯ ಸ್ನೇಹಿತರು ಹೇಳಿರುವುದನ್ನು ಯೋಚನೆ ಮಾಡಬಹುದು.

ಹಾಗಿಲ್ಲದೆ, ಕೆಲವು ಮಾನ್ಯ ಸ್ನೇಹಿತರು ಹೇಳಿದ ಹಾಗೆ ಭಾಷೆಗೆ ಪ್ರಾಧಾನ್ಯತೆ ಕೊಡುವುದಾದರೆ, ನಮ್ಮಲ್ಲಿನ ಕೋಲಾರದ ಗತಿಯೇನಾಗುತ್ತದೆಂಬುದನ್ನು ಯೋಚನೆಮಾಡಿ. ನಮ್ಮ ಬೆಂಗಳೂರಿನಲ್ಲಿಯೂ ತಮಿಳರ ಸಂಖ್ಯೆಯೇ ಜಾಸ್ತಿಯಿದೆ ಎಂದು ಬೇರೆ ಹೇಳಿದ್ದಾರೆ. ಇವೊತ್ತಿನ ದಿವಸ ನಾವು ನಮ್ಮ

(ಶ್ರೀ ಡಿ. ಎಂ. ಗೋವಿಂದರಾಜು)

ಮೈಸೂರಿನ ಯಾವ ಪ್ರಜೆಯನ್ನೂ ಹೊರಕ್ಕೆ ಕಳುಹಿಸುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ನಾವಿಂದು ಭಾಷಾವಾರು ಪ್ರಾಂತ್ಯ ವಿಂಗಡಣೆಯ ವಿಷಯಕ್ಕೆ ತಲೆ ಕೆಡಿಸಿಕೊಳ್ಳುವುದಕ್ಕಿಂತ ದೇಶದ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ, ದೇಶದಲ್ಲಿ ಸುಭದ್ರವಾದ ಆಡಳಿತವನ್ನು ಉಂಟುಮಾಡುವುದಕ್ಕೆ ಯಾವರೀತಿ ವಿಂಗಡಣೆ ಮಾಡಬೇಕೆಂಬ ದೃಷ್ಟಿಯಿಂದ ಎಲ್ಲರೂ ಕೆಲಸಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಜೈಹಿಂದ್.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಮಾನ್ಯ ಅಧ್ಯಕ್ಷರೇ, ಶೇಷಾದ್ರಿ ಸಮಿತಿಯವರು ಒಪ್ಪಿಸಿರತಕ್ಕ ಅಂಕಿ ಅಂಶಗಳ ವರದಿಯಮೇಲೆ ಇದುವರೆಗೂ 50 ಜನರು ಭಾಗವಹಿಸಿ 32 ಜನರು ಪ್ರಾಂತ್ಯ ವಿಸ್ತರಣೆಯಾಗಬೇಕೆಂದೂ, 18 ಜನರು ವಿಸ್ತರಣೆ ಬೇಡವೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಈ 18 ಜನ ಬೇಡವೆಂದವರಲ್ಲಿಯೂ ಕೂಡ ಅವರು ಹೇಳಿದ ವಾದವನ್ನು ಸ್ವಲ್ಪ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡುವುದಾದರೆ, ಕೆಲವರು ಎರಡು ಕರ್ನಾಟಕ ಬೇಕೆನ್ನುವವರೂ ಇದ್ದಾರೆ. ಅಲ್ಲಿಗೆ ಪ್ರಾಂತ್ಯ ವಿಂಗಡಣೆಯ ತತ್ವವನ್ನೊಪ್ಪಿಕೊಂಡು, ಅಕ್ಕಪಕ್ಕದ ರಾಜ್ಯವನ್ನೊಳಗೊಂಡ ಮೈಸೂರು ಒಂದು ಕರ್ಣಾಟಕ, ಇತರ ಕನ್ನಡ ಪ್ರದೇಶಗಳು ಒಂದು ಕರ್ನಾಟಕವೆಂದು ಮಾಡಿ ಎಂದು ಹೇಳಿದಂತಾಯಿತು. ಇವರಲ್ಲೇ ಇನ್ನು ಕೆಲವರು, ಸದ್ಯಕ್ಕೆ ಈ ಪ್ರಶ್ನೆ ಬೇಡ, ಇನ್ನು ಕೆಲವಾರು ವರ್ಷವಾದಮೇಲೆ ಒಂದು ಕರ್ಣಾಟಕವನ್ನು ಮಾಡೋಣವೆಂದೂ ಹೇಳಿದ್ದಾರೆ. ಇವರನ್ನೆಲ್ಲಾ ಬಿಟ್ಟು ನಿಜವಾಗಿ ವಿರೋಧಮಾಡಿದವರನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಖಂಡಿತವಾಗಿ ಪ್ರಾಂತ್ಯ ವಿಸ್ತರಣೆಯಾಗುವುದು ಬೇಡವೆನ್ನುವವರು ಹತ್ತನೆಯ ಒಂದು ಭಾಗದಷ್ಟು ಕೂಡ ಆಗುವುದಿಲ್ಲ.

ಇನ್ನು ನನ್ನ ಸ್ವಂತ ಅಭಿಪ್ರಾಯ ಹೇಳುವುದಾದರೆ, ಈ ಪ್ರಶ್ನೆ ನಮ್ಮ ಮುಂದೆ ಬರುವುದಕ್ಕೆ ಕಾಲ ಸನ್ನಿಹಿತವಾಗಿಲ್ಲ. ಯಾವ ಕಾಲದಲ್ಲಿ ಚರ್ಚೆಯಾಗಬೇಕಾಗಿದೆಯೋ ಆ ಕಾಲ ಬಂದಿಲ್ಲ. ಸರ್ಕಾರದವರು ಅನಿರೀಕ್ಷಿತವಾಗಿ ಮುಂಚಿತವಾಗಿ ತಂದಿದ್ದಾರೆಂದು ಹೇಳಬೇಕಾಗಿದೆ. ಏಕೆಂದರೆ ವಿಸ್ತರಣೆಯನ್ನೇ ಆಗಲಿ, ಸಂಕುಚಿತಮಾಡುವುದನ್ನೇ ಆಗಲಿ ಯಾವ ಪ್ರಾಂತ್ಯಕ್ಕೂ ತೀರ್ಮಾನ ಮಾಡಿಕೊಳ್ಳುವುದಕ್ಕೆ ಸರ್ವಾಧಿಕಾರವಿಲ್ಲ; ರಾಜ್ಯಾಂಗದ ಪ್ರಕಾರ ರಾಷ್ಟ್ರಾಧ್ಯಕ್ಷರಿಗೂ, ಆ ಮೂಲಕ ಲೋಕಸಭೆಗೂ ಕೊಟ್ಟಿದ್ದಾರೆ. ರಾಜ್ಯಾಂಗದ ಮೂರನೆಯ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರು ಒಂದು ಮಸೂದೆಯ ರೂಪದಲ್ಲಿ ಇದನ್ನು ಲೋಕಸಭೆಯಮುಂದೆ ತಂದು, ಆ ಮೇಲೆ ಆ ಮಸೂದೆಗೆ ಯಾವಯಾವ ಪ್ರಾಂತ್ಯಗಳ ಗಡಿ ವ್ಯತ್ಯಾಸವಾಗುತ್ತವೆಯೋ ಆ ಪ್ರಾಂತ್ಯಗಳ ಶಾಸನಸಭೆಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿದೆಯೇ ಹೊರತು ಅವರು ತೀರ್ಮಾನ ತೆಗೆದುಕೊಳ್ಳಬಹುದೆಂದೂ ಇಲ್ಲ. ಅಲ್ಲದೆ ಈಗ ಯಾವಯಾವ ಕನ್ನಡ ಮಾತನಾಡತಕ್ಕ ಜನಗಳು ಮೈಸೂರಿಗೆ ಸೇರಬೇಕೆಂದಿದ್ದಾರೋ ಅವರಿಗೆ ಸಂಬಂಧಪಟ್ಟ ಶಾಸನ ಸಭೆಗಳ ಮುಂದೆ ಈ ವಿಧವಾದ ಚರ್ಚೆ ಬಂದಿರುವುದನ್ನೂ ನಾವು ನೋಡಿಲ್ಲ. ಅಂಥಾದ್ದರಲ್ಲಿ, ಕಾಲ ಪರಿಪಕ್ವವಾಗಿ ಈ ವಿಷಯ ಬರುವುದಕ್ಕೆ ಮೊದಲೇ, ಇದನ್ನು ಸಭೆಯ ಮುಂದಿಟ್ಟು ಏಕೆ ಗೊಂದಲ ಮಾಡಿದರೋ ಗೊತ್ತಿಲ್ಲ. ಇದು ಕೇಂದ್ರ ಸರ್ಕಾರದವರು ರಚನೆ ಮಾಡಿರುವ ಫಸಲಾಲಿ ಸಮಿತಿಯವರು ಕೇಂದ್ರ ಸರ್ಕಾರದವರಿಗೆ ತಮ್ಮ ವರದಿಯನ್ನು ಕೊಡುವುದಕ್ಕೆ ಆಯಾ ಪ್ರಾಂತ್ಯ ಸರ್ಕಾರಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಾಂತ್ಯ ಸರ್ಕಾರಗಳನ್ನು ಖಚಿತವಾಗಿ ಕೇಳಿರುವಲ್ಲಿ, ಇವರು ಇದನ್ನು ಶಾಸನಸಭೆಯಲ್ಲಿ ಹಾಕಿ ಗೊಂದಲಕ್ಕೆ ಕಾರಣವಾಗಿ ಮಾಡಿದ್ದಾರೆ.

Mr. SPEAKER.—It is not a fact. They have not asked the Government to give its opinion. It is only the Central Government that can ask the State Government to give its opinion. The Government has organised the Fact Finding Committee to collect the data and to furnish its opinion. The Hon'ble Members invited to give their opinion.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಕೇಂದ್ರ ಸರ್ಕಾರದಿಂದಲೇ ಆಗಲಿ, ಪ್ರಾಂತ್ಯ ಪುನರ್ವಿಂಗಡಣಾ ಸಮಿತಿಯ ವರಿಂದಲೇ ಆಗಲಿ ಈ ಪ್ರಶ್ನೆಯನ್ನು ಶಾಸನ ಸಭೆಯ ಮುಂದೆ ಇಡಬೇಕೆಂದು ಇಲ್ಲದಿರುವಾಗ ಇದನ್ನು ಈ ಸಭೆಯ ಮುಂದೆ ತಂದಿದ್ದೇ ಉಚಿತವಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯಾವಾಗಲಾದರೂ ಬರುತ್ತಿತ್ತು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಬರುವಾಗ ಬರಲಿ. ಇದು ಸಮಯವಲ್ಲ. ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವಾಗ, ಲೋಕ ಸಭೆಯಲ್ಲಿ ಮುಂಚೆ ಇಟ್ಟು, ಅನಂತರ, ಆ ಮಸೂದೆಯ ಮೇಲೆ ನಮ್ಮ ಅಭಿಪ್ರಾಯವನ್ನು ಕೇಳಿದರೇ ವಿನಾ, ಆ ಮಸೂದೆ ತಯಾರಾಗುವುದಕ್ಕೆ ಮೊದಲೇ ನಮ್ಮನ್ನು ಕೇಳಲಿಲ್ಲ. ಆ ರೀತಿಯಾಗಿ ಈ ವಿಷಯದಲ್ಲೂ ಮಾಡಿದ್ದರೆ ಚೆನ್ನಾಗಿತ್ತು. ಅದನ್ನು ಮಾಡುವುದಕ್ಕೆ ಮೊದಲೇ ಇವರು ಇದನ್ನು ಸಭೆಯಮುಂದೆ ತಂದಿದ್ದೇ ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ.

ಹೇಗೇ ಆಗಲಿ, ಮುಂದಾದರೂ ಇದನ್ನು ಚರ್ಚೆ ಮಾಡಬೇಕಾಗಿತ್ತು ಎಂದು ಒಪ್ಪಿಕೊಂಡರೂ ಪ್ರಾಂತ್ಯ ವಿಸ್ತರಣೆಯನ್ನು ಯಾವ ಹಿನ್ನೆಲೆಯಿಂದ ನೋಡಬೇಕು ಎಂಬುದು ಮುಖ್ಯ. ಇವೊತ್ತಿನ ದಿವಸ ರಾಷ್ಟ್ರದ ಮುಂದಿನ ಗುರಿ ಸಮಾಜವಾದ ಸಿದ್ಧಾಂತವಾಗಿದೆ. ಈ ದೃಷ್ಟಿಯಿಂದ ಹೊರಟು ದೇಶವನ್ನು ಶಕ್ತಿಯುತವಾದ, ಸಂಪದ್ಯುಕ್ತವಾದ ಮತ್ತು ಜಾತ್ಯತೀತವಾದ ರಾಷ್ಟ್ರವಾಗಿ ಮಾಡಬೇಕೆಂಬ ಹಿನ್ನೆಲೆಯಿಂದ ಈ ಪ್ರಶ್ನೆಯನ್ನು ಪರಿಶೀಲಿಸುವುದಾದರೆ ಏಕೀಕರಣದ ಬಗ್ಗೆ ಯಾವ ವಿರೋಧವಾಗಲಿ, ವೈಷಮ್ಯವಾಗಲಿ ಬರುವುದಕ್ಕೆ ಕಾರಣವಿಲ್ಲವೆಂದು ಹೇಳಬಲ್ಲೆ. ಏಕೆಂದರೆ, ಪರಕೀಯರು ಹಿಂದೂಸ್ಥಾನವನ್ನು ಆಕ್ರಮಿಸಿಕೊಂಡಾಗ ಯಾವರೀತಿ ಪ್ರಾಂತ್ಯವಿಂಗಡಣೆ ಮಾಡಿಕೊಂಡರೆಂಬುದನ್ನು ಸ್ವಲ್ಪ ಯೋಚಿಸಿದರೆ ಅರ್ಥವಾಗುತ್ತದೆ. ಮುಂಚೆ ಅವರು ಕೇವಲ ಜಲದುರ್ಗಗಳನ್ನು ಆಕ್ರಮಣ ಮಾಡಿಕೊಂಡು ಅಲ್ಲಿ ಪಟ್ಟಣಗಳನ್ನು ನಿರ್ಮಿಸಿಕೊಂಡರು. ಹೀಗೆ ಬೊಂಬಾಯಿ, ಮದರಾಸ್, ಕಲ್ಕತ್ತ ಮುಂತಾಗಿ ಮೊದ ಮೊದಲು ಯಾವ ಯಾವುದನ್ನು ಆಕ್ರಮಣ ಮಾಡಿಕೊಂಡರೋ ಅವುಗಳನ್ನೇ ಕೇಂದ್ರವಾಗಿ ಮಾಡಿಕೊಂಡು ಅಲ್ಲಿ ಆಡಳಿತವನ್ನು ರೂಡಿಸುವುದಕ್ಕೆ ಅನುಕೂಲವಾಗಿ ಪ್ರಾಂತ್ಯ ವಿಭಜನೆ ಮಾಡಿಕೊಂಡರು. ಅಂದಮೇಲೆ ಅವರು ಮಾಡಿದ ಪ್ರಾಂತ್ಯ ವಿಭಜನೆ ಯಾವ ತತ್ವದಮೇಲೆಯೂ ಮಾಡಿದ್ದಲ್ಲವೆಂಬುದು ವೇದ್ಯವಾಗಿದೆ. ಆದ್ದರಿಂದಲೇ ಪರಕೀಯರು ನಮ್ಮ ದೇಶವನ್ನು ಬಿಟ್ಟಮೇಲೆ ಸ್ವಾತಂತ್ರ್ಯ ಸಂಪಾದಿಸಿದ ಮಹಾ

ನಾಯಕರು ಬ್ರಿಟಿಷರು ಮಾಡಿದ ವಿಭಜನೆ ನ್ಯಾಯವಾಗಿಲ್ಲ, ಅವರ ಆಡಳಿತ ಸೌಕರ್ಯಕ್ಕಾಗಿ ಮಾಡಿದ ವಿಭಜನೆ, ದೇಶದ ಐಕ್ಯತೆಗೆ, ದೇಶದ ಉನ್ನತಿಗೆ ಸಮಂಜಸವಾಗಿಲ್ಲ, ಅದನ್ನು ಪುನರ್ವಿಂಗಡಣೆ ಮಾಡುವುದು ಸೂಕ್ತವೆಂದು ಒಪ್ಪಿಕೊಂಡಿರುವುದು ಸಮ್ಮತವಾಗಿದೆ.

ಅಂದಮೇಲೆ, ಪ್ರಾಂತ್ಯ ಪುನರ್ವಿಂಗಡಣೆ ಮಾಡುವುದರ ಅವಶ್ಯಕತೆಯಿದೆಯೆಂದಾಯಿತು. ಇನ್ನು ಈ ವಿಂಗಡಣೆಗೆ, ಯಾವ ದೃಷ್ಟಿಯಿಂದಲೇ ನೋಡಲಿ ಭಾಷೆ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ರಾಜಕೀಯ ದೃಷ್ಟಿಯಿಂದ ನೋಡುವುದಾದರೆ, ಹಿಂದೆ ಕಾಂಗ್ರೆಸ್ಸಿನವರು ಕಾಂಗ್ರೆಸ್ ಪ್ರಾಂತ್ಯ ಸಮಿತಿಗಳನ್ನು ಮಾಡಿದಾಗ ಭಾಷಾವಾರು ತತ್ವದಮೇಲೆಯೇ ಮಾಡಿದರೆಂಬುದನ್ನು ನಮ್ಮ ಕಾಂಗ್ರೆಸ್ ಮಿತ್ರರು ಮರೆಯಬಾರದು. ಸಾಂಸ್ಕೃತಿಕ ದೃಷ್ಟಿಯಿಂದ ನೋಡುವುದಾದರೂ ಕೂಡ ಮೈಸೂರಿನ ತಾತಂದಿರೂ ಕನ್ನಡ ಸಾಹಿತ್ಯ ಪರಿಷತ್ತಿನ ಪಿತಾಮಹರೂ ಆದ ವಿಶ್ವೇಶ್ವರಯ್ಯನವರು ಸಾಂಸ್ಕೃತಿಕ ದೃಷ್ಟಿಯಿಂದ ನಮ್ಮ ಪರಿಷತ್ತು ಇಡೀ ಕರ್ಣಾಟಕಕ್ಕೆ ಒಂದು ಸಾಹಿತ್ಯ ಕೇಂದ್ರ, ಒಂದು ಸಾಹಿತ್ಯ ಪರಿಷತ್ತು ಆಗಬೇಕೆಂದು ಹೇಳಿದ್ದಾರೆ. ಹೀಗೆ ಹೇಳಿರುವುದರಲ್ಲಿ ಯಾವ ಅನುಮಾನಕ್ಕಾಗಲಿ, ಈರ್ಷೆಗಾಗಲಿ ಎಡೆ ಕೊಟ್ಟಿಲ್ಲವೆಂಬುದನ್ನು ಮರೆಯಬಾರದು. ಈಗ ಕೇಂದ್ರ ಸರ್ಕಾರದವರು ಆಡಳಿತ ವಹಿಸಿಕೊಂಡಮೇಲೆ, ಯಾವ ಭಾಷಾವಾರು ಪ್ರಾಂತ್ಯ ಮಾಡತಕ್ಕದ್ದೂ ಅನಾವಶ್ಯಕ, ಹಾಗೆ ಮಾಡುವುದು ಸೂಕ್ತವಲ್ಲ ಎಂದು ಕೆಲವರು ಹೇಳಿದರು. ಆದರೆ ಇಂಥ ವಿಷಯವನ್ನು ಅಷ್ಟು ಸುಲಭವಾಗಿ ತೀರ್ಮಾನಮಾಡುವುದಕ್ಕಾಗುವುದಿಲ್ಲ. ಇದನ್ನು ಬಹಳ ವಿಶಾಲ ದೃಷ್ಟಿಯಿಂದ ನಿರ್ಣಯಿಸಲು ಅವಕಾಶವಿರಬೇಕು ಎಂದು ತಿಳಿಸಿದ್ದಾರೆ. ಆದರೆ ಈ ದಿವಸ ದೇಶದಲ್ಲಿರತಕ್ಕಂಥ ಪ್ರತಿಯೊಬ್ಬರ ಮುಂದೆ ಹೋಗಿ ತಮ್ಮ ಅಭಿಪ್ರಾಯವೇನು ಎಂದು ಕೇಳುವ ಮೊದಲು ಆ ಜನರಿಗೆಲ್ಲಾ ಅಷ್ಟು ತಿಳಿವಳಿಕೆಯಿದೆಯೇ ಅನ್ನುವುದನ್ನು ನಾವು ಮೊದಲು ಯೋಚಿಸಬೇಕು. ಯಾವಾಗ ಕೇಂದ್ರ ಸರ್ಕಾರದವರು ಈ ಪ್ರಾಂತ್ಯಗಳನ್ನು ಭಾಷಾವಾರು ಆಧಾರದಮೇಲೆ ವಿಂಗಡಿಸಬೇಕೆಂಬ ತತ್ವವನ್ನು ಒಪ್ಪಿಕೊಂಡರೋ ಹಾಗೆ ಒಂದಲ್ಲ ಹಲವಾರು ಬಾರಿ ಒಪ್ಪಿಕೊಂಡಮೇಲೆ ಈ ದಿವಸ ಹಾಗೆಲ್ಲಾ ಆಗಬಾರದೆಂದು ಹೇಳುವುದು ಸರಿಯಲ್ಲ. ಈ ದಿವಸ ಮೈಸೂರನ್ನು ವಿಸ್ತರಣ ಮಾಡಿದರೆ ಆರ್ಥಿಕ ದೃಷ್ಟಿಯಿಂದ ತುಂಬ ಅನಾನುಕೂಲಗಳೂ, ಇಲ್ಲದ ಅನುಕೂಲ್ಯಗಳೂ ಉಂಟಾಗುತ್ತವೆಂದು ಕೆಲವರು ಹೇಳಿದರು. ಈಗ ಉದಾಹರಣೆಗಾಗಿ ನಾನು ಹೇಳುವುದಾದರೆ ಮೊನ್ನೆ ತಾನೆ ನಾವು ಈ ಜೋಡಿ-ಜಹಗೀರುಗಳನ್ನು ರದ್ದುಪಡಿಸಿದೆವು. ಈ ದೊಡ್ಡ ದೊಡ್ಡ ಜಮೀನ್ದಾರರೂ, ಜೋಡೀದಾರರೂ ನೂರಾರು ವರ್ಷಗಳಿಂದ ಅನುಭವಿಸಿಕೊಂಡು ಬರುತ್ತಿದ್ದಂಥ ಸ್ವತ್ತುಗಳನ್ನೆಲ್ಲಾ ಕಿತ್ತುಕೊಂಡು ಅವರ ಹೊಟ್ಟೆಯಮೇಲೆ ಹೊಡೆದ ಹಾಗೆ ಮಾಡತಕ್ಕಂಥ ಸಂದರ್ಭ ಬಂದಿದ್ದಾಗ ದೇಶದಲ್ಲಿ ಹೋಗಿ ಎಷ್ಟು ಜನರ ಓಟ್ ಪಡೆದು ಅದನ್ನು ಮಾಡಿದರು ಎಂದು ನಾನೀಗ ಕೇಳಬೇಕಾಗಿದೆ. ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು ಮಾತನಾಡುತ್ತ ನಾವೆಲ್ಲರೂ ಭಾರತೀಯರು, ಭಾರತದ ದೇಶದ ಜನರು ಎಂಬುದನ್ನು ಯಾರೂ ಮರೆಯಬಾರದು ಎಂದು ಹೇಳಿದರು. ಅವರು ಹೇಳಿದ್ದನ್ನೇ ಅವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದರೆ ಈ ಕಷ್ಟ ಸಮಸ್ಯೆಯೇ ಉದ್ಭವವಾಗದಂತೆ ಇದನ್ನು ಪರಿಹರಿಸಲು ಎಂದೋ ಸಾಧ್ಯವಾಗುತ್ತಿತ್ತು. ಈಗ ಬೇರೆ ಪ್ರಾಂತ್ಯಗಳ ಪುನರ್ರಚನೆಯಾಗಲಿ ಅಥವಾ ಅವುಗಳ ವಿಭಜನೆಯಾಗಲಿ ಈ ಒಂದು ತಕರಾರಿನಿಂದ ಅದು ಸರ್ವ ಸಮನ್ವಯವಾಗಿ ಆಗುವುದಿಲ್ಲ. ಈ ದಿವಸ ಆ ಕೇಂದ್ರ ಸರ್ಕಾರದವರೇ ಪ್ರತಿಯೊಂದು ಭಾಗದಲ್ಲಿಯೂ ಹೆಚ್ಚು ಆಡಳಿತವನ್ನು ಅವರೇ ವಹಿಸಿಕೊಂಡಿದ್ದಾರೆ. ಆದುದರಿಂದ ಈಗ ಒಂದು ಪ್ರಾಂತ್ಯವು ಇನ್ನೊಂದು ಪ್ರಾಂತ್ಯದ ಮೇಲೆಯೂ ಯುದ್ಧಮಾಡಿ ಆ ದೇಶದಲ್ಲಿರುವಂಥ ಜನರನ್ನು ಓಡಿಸಿಬಿಡಬೇಕು ಎನ್ನುವಂಥ ಪ್ರಶ್ನೆಯೇನೂ ಈಗ ಇರುವುದಿಲ್ಲ. ಹೀಗಿರುವಾಗ ಕೆಲವರು ಏತಕ್ಕಾಗಿ ಹೀಗೆ ಇದನ್ನು ವಿರೋಧಿಸುತ್ತಿದ್ದಾರೆ ಎನ್ನುವುದೇ ಅರ್ಥವಾಗುತ್ತಿಲ್ಲ. ಮೈಸೂರು ಸರ್ಕಾರಕ್ಕೆ ಈಗಾಗಲೇ $4\frac{1}{2}$ ಕೋಟಿ ರೂಪಾಯಿಗಳ ಖೋತಾ ಆಗಿದೆ, ಅಂಥಾದ್ದರಲ್ಲಿ ಈಗ ಈ ಪ್ರಾಂತ್ಯಗಳ ವಿಂಗಡಣೆಯಿಂದ ಈ ಖೋತಾ ಮತ್ತಷ್ಟು ಜಾಸ್ತಿಯಾಗುತ್ತದೆಂದು ಹೇಳಿದರು. ಈ ವಾದಕ್ಕೂ ಸಹ ಅವಕಾಶವಿಲ್ಲ. ಈ ದಿವಸ ಮೈಸೂರು ದೇಶದ ಸಂಪದಭಿವೃದ್ಧಿಯು ಅಷ್ಟು ಸರ್ವತೋಮುಖವಾಗಿ ನಡೆದಿದ್ದರೆ ಈ ದಿವಸವೂ ಸಹ ನಾವು ಜನರ ಮೇಲೆ ಒಂದಾದಮೇಲೆ ಒಂದರಂತೆ ತೆರಿಗೆಗಳನ್ನು ಹೇರಬೇಕಾದಂಥ ಪ್ರಮೇಯವೇಕೆ ಇರುತ್ತಿತ್ತು? ಹೀಗೆ ಕೇವಲ ಸಾಮಾನ್ಯ ವಿಚಾರಗಳ ಕಡೆಗೆ ಗಮನ ಕೊಟ್ಟು ಇಂಥ ಮಹತ್ವಪೂರಿತವಾದಂಥ ಪ್ರಶ್ನೆಯನ್ನು ಬೇಡ ಎಂದು ಹೇಳುವುದು ಸರಿಯಾದದ್ದಲ್ಲ. ಈ ದಿವಸ ನಾವೇಕೆ ಈ ಪ್ರಶ್ನೆಯನ್ನು ಇಷ್ಟು ತೀವ್ರವಾಗಿ ಇಲ್ಲಿ ಚರ್ಚಿಸಬೇಕು! ಯಾವ ಜನರು ನಮ್ಮೊಡನೆ ಸೇರಬೇಕೆಂದು ಇಷ್ಟಪಡುತ್ತಾರೋ ಅವರು ಬೇಕಾದರೆ ಇದನ್ನು ಇತ್ಯರ್ಥಪಡಿಸಿಕೊಂಡು ಬರಲಿ ಎಂದು ಒಬ್ಬರು ಮಾನ್ಯ ಸದಸ್ಯರು ಹೇಳಿದರು. ಆದರೆ ಇದು ಅಷ್ಟು ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ಮತ್ತೆ ಕೆಲವರು ಈ ಮೈಸೂರು ತನ್ನದೇ ಆದಂಥ ಒಂದು ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ ಎಂದು ಹೇಳಿ ಆ ಕೊಡಗಿನ ಉದಾಹರಣೆ ಹೇಳಿಕೊಟ್ಟರು. ಹಾಗೆ ದೇಶ ಎಷ್ಟು ಚಿಕ್ಕದಾದರೆ ಅಷ್ಟೂ ಒಳ್ಳೆಯದೆಂದು ಹೇಳತಕ್ಕವರು ಈಗ ಮೈಸೂರು ದೇಶದಲ್ಲಿರತಕ್ಕಂಥ 10 ಜಿಲ್ಲೆಗಳನ್ನೂ 10 ದೇಶಗಳನ್ನಾಗಿಯೆ ಮಾಡಿದ್ದರೆ ಇನ್ನೂ ಚೆನ್ನಾಗಿರುತ್ತೆಂದು ಹೇಳಿದ ಹಾಗಾಯಿತು. ಈ ದಿವಸ ಮೈಸೂರಿನ ಮೇಲ್ಮೈಯ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಈ ದೇಶವನ್ನು ಮಲೆನಾಡು ಮೈದಾನ ಮತ್ತು ಬೆಂಗಾಡು ಸೀಮೆ ಎಂದು ಸಾಮಾನ್ಯವಾಗಿ ಮೂರು ವಿಭಾಗಗಳನ್ನಾಗಿ ವಿಂಗಡ ಮಾಡಬಹುದು. ಹೀಗೆ ಮಾಡಿದರೆ ಒಂದು ಜಿಲ್ಲೆಯಲ್ಲೇ ಒಂದು ಭಾಗಕ್ಕಿಂತ ಮತ್ತೊಂದು ಭಾಗ ಹೆಚ್ಚಿನ ಅಭಿವೃದ್ಧಿಗೆ ಬಂದಿರುವುದು ಗೊತ್ತಾಗುತ್ತದೆ. ಹೀಗೆ ದೇಶದ ಪ್ರತಿಯೊಂದು ಭಾಗವೂ ಎಲ್ಲಾ ರೀತಿಯಲ್ಲೂ ಅಭಿವೃದ್ಧಿಗೆ ಬಂದಿರುವುದಿಲ್ಲವೆಂಬ ಅಂಶವನ್ನು ಸರ್ವರೂ ಅರಿತಿದ್ದೀರಿ. ಈ ದಿವಸ ಆ ಕರ್ಣಾಟಕ ಪ್ರಾಂತ್ಯದಲ್ಲೂ ಹೀಗೆ ಕೆಲವು ಚೆನ್ನಾಗಿ ಮುಂದುವರಿದಿರುವ ಪ್ರದೇಶಗಳೂ ಮತ್ತೆ ಕೆಲವು ಮುಂದುವರಿಯದಿರುವ ಪ್ರದೇಶಗಳೂ ಇರುತ್ತವೆ. ಈ ದಿವಸ ಹಿಂದುಳಿದಿರತಕ್ಕಂಥ ಪ್ರದೇಶಗಳ ಏಳಿಗೆಗಾಗಿ ಕೇಂದ್ರ ಸರ್ಕಾರ ನೆರವನ್ನು ನೀಡಲು ಸಿದ್ಧವಾಗಿದೆ. ದೇಶದಲ್ಲಿ ಯಾವ ಯಾವ ಭಾಗದಲ್ಲಿ ಅನುಕೂಲತೆಗಳು ಕಡಮೆಯಾಗಿವೆಯೋ ಮತ್ತು ದೇಶದಲ್ಲಿ ಬಡತನ ಹೆಚ್ಚಾಗಿ ಎಲ್ಲೆಲ್ಲಿದೆಯೋ ಅಂಥ ಪ್ರದೇಶಗಳಿಗೆ ಒಂದು ಹೆಚ್ಚಿನ ಸಹಾಯ ಸೌಕರ್ಯಗಳನ್ನು ಒದಗಿಸಲು ನಾವೆಲ್ಲರೂ ಹಿಂದೆ

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

ಏನೊಂದು ತ್ಯಾಗಮಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದೆವೋ ಅದಕ್ಕಿಂತಲೂ ಮಿಗಿಲಾಗಿ ಈ ದಿವಸ ನಾವು ಆ ಹಿಂದುಳಿದಿರತಕ್ಕಂಥ ನಮ್ಮ ಸಹೋದರರುಗಳಿಗೆ ತ್ಯಾಗ ಮಾಡಿದರೇನೇ ದೇಶ ಉತ್ತಮಸ್ಥಿತಿಗೆ ಬರಲು ಸಾಧ್ಯವಾಗುತ್ತದೆ ಎನ್ನುವುದೇ ನನ್ನ ವಾದ. ಈ ದಿವಸ ಇರತಕ್ಕಂಥ ಪ್ರಾಂತ್ಯಗಳಲ್ಲಿ ಕೊಡಗಿನಂಥ ಚಿಕ್ಕ ದೇಶವೂ ಮತ್ತು ಉತ್ತರ ಪ್ರದೇಶದಂಥ ದೊಡ್ಡ ದೇಶವೂ ಇರತಕ್ಕದ್ದನ್ನು ನೋಡಿದರೆ ಇವುಗಳಿಗೆ ಅಜಗಜಾಂತರ ವ್ಯತ್ಯಾಸವಿದೆ. ಹೀಗಿರುವುದು ಖಂಡಿತ ಸೂಕ್ತವಾದುದಲ್ಲ. ಲೋಕ ಸಭೆಯಲ್ಲಿ. ಕೂಡ ಈ ಸಂಸ್ಥಾನಗಳ ಪ್ರಾತಿನಿಧ್ಯ ಇವುಗಳಿಗೆ ಸಾಕಷ್ಟು ದೊರಕುತ್ತಿಲ್ಲ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಈ ಭಾಷಾವಾರು ಪ್ರಾಂತ್ಯರಚನೆಗಳಾಗಬೇಕೆಂದು ಹೇಳಿರತಕ್ಕದ್ದನ್ನು ಕೆಲವು ಮಾನ್ಯ ಸದಸ್ಯರು ಇದನ್ನು ಅತಿರೇಕವಾಗಿ ತೆಗೆದುಕೊಂಡಿದ್ದಾರೆ. ಒಂದು ಭಾಷೆಯ ಪ್ರಾಂತ್ಯ ನಿರ್ಮಾಣವಾದರೆ ಅಲ್ಲಿ ಬೇರೆ ಭಾಷೆಯನ್ನಾಡತಕ್ಕ ಜನರನ್ನು ಆ ಪ್ರಾಂತ್ಯದಿಂದಲೇ ಬಿಟ್ಟು ಓಡಿಸಬೇಕು ಎನ್ನತಕ್ಕಂಥ ವಾದವನ್ನು ಯಾರೂ ಒಪ್ಪುವುದಿಲ್ಲ. ಇಂಥ ವಿಚಾರದಲ್ಲಿ ಮಿಠಾಯಿ ಕೊಯ್ದುಹಾಗೆ ವಿಭಾಗ ಮಾಡುವುದಕ್ಕಾಗುವುದಿಲ್ಲ. ಭಾಷಾವಾರು ಪ್ರಾಂತ್ಯಗಳ ವಿಭಜನೆ ಮಾಡಬೇಕೆಂದರೆ ಬಹುಸಂಖ್ಯಾತರು ಮಾತನಾಡುವ ಭಾಷೆ ಆಧಾರದ ಮೇಲೆ ಅವರನ್ನೆಲ್ಲಾ ಒಂದುಗೂಡಿಸುವುದು ಎಂದರ್ಥ. ಇಷ್ಟು ಹೊರತು ಇವರೆಲ್ಲರನ್ನೂ ಒಂದುಮಾಡಬೇಕಾದರೆ ಅನ್ಯಭಾಷೆ ಆಡತಕ್ಕವರನ್ನು ಅಲ್ಲಿಂದ ಬಿಟ್ಟೋಡಿಸಬೇಕೆಂದು ಇದರ ಅರ್ಥವಲ್ಲ. 1920 ರಿಂದಲೂ ಪತ್ರಿಕೋದ್ಯಮಿಗಳು ಈ ಕರ್ಣಾಟಕಪ್ರಾಂತ್ಯ ನಿರ್ಮಾಣವಾಗಬೇಕೆಂದು ಹೇಳುತ್ತಲೇ ಇದ್ದಾರೆ; ಮೈಸೂರು ವಿಸ್ತಾರವಾಗಬೇಕೆಂದು ಹೇಳುತ್ತಿದ್ದಾರೆ. ಮಹಾತ್ಮಗಾಂಧಿಜಿಯವರೇ ಮೊದಲಾಗಿ ಅನೇಕಜನ ರಾಷ್ಟ್ರನಾಯಕರು ಸಹ ನೆಹ್ರೂ ಅವರು ಮೊದಲುಗೊಂಡು ಎಲ್ಲರೂ ಈ ಪ್ರಾಂತ್ಯಗಳನ್ನು ಪುನರ್ವಿಂಗಡಣೆ ಮಾಡಬೇಕಾದರೆ ಈ ಭಾಷಾವಾರು ತತ್ವದ ಹೊರತು ಮತ್ತೆ ಯಾವುದನ್ನೂ ಆಧಾರವಾಗಿಟ್ಟುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಸಾಹಿತಿಗಳೆಲ್ಲರೂ ಕೂಡ ಭಾಷಾವಾರು ಪ್ರಾಂತ್ಯರಚನೆ ಸೂಕ್ತ ಎಂದು ಸಾರಿದ್ದಾರೆ. ಅನೇಕ ವೇಳೆ ಈ ಆಕಾಶವಾಣಿ ಮೂಲಕವೂ ಕೂಡ ಈ ಭಾಷಾವಾರು ಪ್ರಾಂತ್ಯದ ಅಗತ್ಯವನ್ನು ಪ್ರಕಟಣೆ ಮಾಡಿದ್ದಾರೆ. ಅನೇಕ ಕವಿಪುಂಗವರು "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಎಂದು ಹಾಡಿ ಕರ್ಣಾಟಕ ಪ್ರಾಂತ್ಯದ ನಿರ್ಮಾಣ ಬೇಗ ಆಗಬೇಕೆಂದು ಹೇಳಿದ್ದಾರೆ. ಶ್ರೀ ಕೆ. ವಿ. ಪುಟ್ಟಪ್ಪನವರು ಈ ಅಖಂಡ ಕರ್ಣಾಟಕದ ಅಗತ್ಯವನ್ನೂ ಮತ್ತು ಅದರ ಹಿರಿಮೆಯನ್ನೂ ನಿರ್ಭಯವಾಗಿಯೂ ಮತ್ತು ನಿರ್ದಾಕ್ಷಿಣ್ಯವಾಗಿಯೂ ಚಿತ್ರಿಸಿ ಸಾರ್ವಜನಿಕರ ಮುಂದೆ ಇಟ್ಟಿದ್ದಾರೆ. ಹೀಗೆ ಪ್ರತಿಯೊಬ್ಬರೂ ಕರ್ಣಾಟಕ ಪ್ರಾಂತ್ಯ ಬೇಕೆಂದು ಸಾರಿದ್ದಾರೆ. ಇನ್ನು ಪ್ರತಿಯೊಂದು ರಾಜಕೀಯ ಪಕ್ಷಗಳೂ ಕೂಡ ಇದನ್ನು ಒಪ್ಪಿಕೊಂಡಿವೆ. ಹೀಗೆ ದೇಶದಲ್ಲಿರುವ ಜನರೆಲ್ಲಾ ಕರ್ಣಾಟಕ ಪ್ರಾಂತ್ಯನಿರ್ಮಾಣ ಎಂದಿಗಾದೀತೋ ಎಂದು ಕಾದು ಕೂತಿದ್ದಾರೆ.

ಶ್ರೀ ಎಂ. ರಾಜಶೇಖರಮೂರ್ತಿ (ಎಳಂದೂರು) — ರವೀಂದ್ರನಾಥ ಟ್ಯಾಗೋರ್ ಅವರು "ಪಂಜಾಬು, ಸಿಂಧು, ಗುಜರಾತ, ಮರಾಠಾ। ದ್ರಾವಿಡಉತ್ಕಲ ವಂಗ"—ಎಂಬುದಾಗಿ ಹಾಡಿದ್ದಾರೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹೌದು. ಎಂದಿಗೂ ಈ ಭಾಷಾವಾರು ತತ್ವದ ಮೇಲೆ ದೇಶವನ್ನು ವಿಭಜನೆ ಮಾಡಬೇಕೆಂಬ ಉದ್ದೇಶ ಬುಡಮೇಲಾಗಿಲ್ಲ. ಆದರೆ ಈ ದಿವಸ ಈ ಭಾಷಾವಾರು ತತ್ವದ ಮೇಲೆ ಕರ್ಣಾಟಕ ಪ್ರಾಂತ್ಯವನ್ನು ನಿರ್ಮಾಣ ಮಾಡಿದರೆ ನಮ್ಮ ಮೈಸೂರಿನವರಿಗೆ ಕೆಲವು ಸೌಲಭ್ಯಗಳು ಈಗ್ಗೆ ಸದ್ಯಕ್ಕೆ ಕಡಮೆಯಾಗುವುದಾದರೂ ಮುಂದೆ ಇದು ಬಹು ಬೆಲೆಯುಳ್ಳ ಪ್ರಾಂತ್ಯವಾಗುತ್ತದೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆ ಹೊರಗಡೆಯ ಕರ್ಣಾಟಕ ಪ್ರದೇಶದಲ್ಲಿರತಕ್ಕಂಥ ಜನರು ನಮ್ಮವರಿಗಿಂತಲೂ ದುಡಿಮೆಯಲ್ಲಿ ಬಹಳ ಘಟ್ಟಿಗರು. ಇದರ ಜೊತೆಗೆ ಕೇಂದ್ರಸರ್ಕಾರದಿಂದ ಹೆಚ್ಚಿನ ಸಹಾಯ ಬರತಕ್ಕಂಥ ಅವಕಾಶ ಬೇರೆಯಿದೆ. ಆದರೆ ಮೈಸೂರು ಈ ದಿವಸ ಇಷ್ಟು ಉನ್ನತಮಟ್ಟಕ್ಕೆ ಬರಲು ಇದು ಒಂದು ಚಿಕ್ಕ ದೇಶವಾಗಿದ್ದುದೇ ಕಾರಣ ಎಂದು ಹೇಳಿದ್ದನ್ನು ನಾನು ಖಂಡಿತ ಒಪ್ಪಲಾರೆ. ಕಾಂಗ್ರೆಸ್ ಆಡಳಿತ ಬರುವುದಕ್ಕೆ ಮುನ್ನ ಅನೇಕ ರಾಜಕೀಯತಜ್ಞರು ಈ ದೇಶದ ಆಡಳಿತವನ್ನು ವಹಿಸಿಕೊಂಡಿದ್ದುದರಿಂದ, ಅವರ ಮೇಧಾವಿತನದಿಂದ ಈ ದೇಶ ಮುಂದುವರಿಯಲು ಸಾಧ್ಯವಾಯಿತೇ ವಿನಾ ದೇಶ ಚಿಕ್ಕದಾದುದರಿಂದ ಮುಂದುವರಿಯಿತು ಎನ್ನುವುದು ಅರ್ಥವಿಲ್ಲದ ಮಾತು ಎಂದು ಹೇಳಲೇಬೇಕಾದ್ದಿಲ್ಲ. ಹಿಂದೆ ಮೈಸೂರು ಸಂಸ್ಥಾನದ ಉತ್ಪತ್ತಿ ಮೂರು ಕೋಟಿ ರೂಪಾಯಿಗಳಿದ್ದಾಗಲೇ ದೇಶ ಪ್ರಗತಿ ಮಾರ್ಗದಲ್ಲಿತ್ತು. ಆಗ ದೇಶದಲ್ಲಿದ್ದ ಜನರೂ ಸಹ ಹೆಚ್ಚಿನ ರೀತಿಯಲ್ಲಿ ಸಹಾಯ ನೀಡುತ್ತಿದ್ದರು. ಆದರೆ ಅವರ ಆಡಳಿತ ಮುಗಿದ ಮೇಲೆ ದೇಶ ಅಷ್ಟು ಪ್ರಗತಿಮಾರ್ಗದಲ್ಲೇನೂ ಮುಂದುವರಿದಿಲ್ಲ. ಹೀಗಿದ್ದರೂ ದೇಶ ಚಿಕ್ಕದಾಗಿಯೇ ಇರಬೇಕು; ಹೀಗಿದ್ದರೇ ಮುಂದುವರಿಯಲು ಸಾಧ್ಯ ಎಂದು ಮಾಡಿರತಕ್ಕ ವಾದವನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಅದು ಸರಿಯಾದ ವಾದವೇ ಅಲ್ಲ. ದೇಶ ಇಷ್ಟೇ ಇರಬೇಕು, ಇದಕ್ಕಿಂತ ಜಾಸ್ತಿ ಆಗಬಾರದು ಎಂದು ತೀರ್ಮಾನ ಹೇಳತಕ್ಕಂಥ ಅಧಿಕಾರ ಈ ದಿವಸ ನಮ್ಮ ಕೈಯಲ್ಲಿಲ್ಲ. ಅದಕ್ಕಾಗಿ ಈ ದಿವಸ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಈ ದಿವಸ ಆ ಇಂಡಿಯಾ ಸರ್ಕಾರದವರು ನೇಮಕಮಾಡಿರತಕ್ಕಂಥ ಆ ಫಜಲಾಲಿ ಸಮಿತಿಯವರು ಕೊಡತಕ್ಕಂಥ ತೀರ್ಮಾನಕ್ಕೆ ಎಲ್ಲರೂ ತಲೆಬಾಗಬೇಕು. ಸರ್ವದೃಷ್ಟಿಯಿಂದಲೂ ದೇಶ ದೊಡ್ಡದಾಗುವುದು ಒಳ್ಳೆಯದು, ನಾವು ಇದನ್ನು ಸ್ವಾಗತ ಮಾಡಲೇಬೇಕು. ಮುಂದಕ್ಕೆ ಇದರ ಅಭಿವೃದ್ಧಿ ಬಹಳ ಉಜ್ವಲ ಉಳ್ಳದ್ದಾಗಿದೆ. ಈ ದಿವಸ ನಮ್ಮ ಕಣ್ಣು ಮುಂದೆ ಕಾಣುತ್ತಿರುವಂಥ ಅನುಕೂಲತೆಗಳು ನಮಗೆ ಬೇಡ ಎಂದು ಹೇಳುವುದು ಅಂಥ ಒಂದು ರಾಜಕೀಯ ನೈಪುಣ್ಯತೆಯೆಂದು ಹೇಳಲಾರೆ. ಪ್ರಾಂತ್ಯಗಳೆಲ್ಲಾ ವಿಸ್ತಾರವಾಗಲೇಬೇಕು. ಅದು ಆಗಿಯೇ ಆಗುತ್ತದೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಸ್. ಎಂ. ಲಿಂಗಪ್ಪ (ಕೃಷ್ಣರಾಜಪೇಟೆ).—ಸ್ವಾಮಿ, ಕೆಲವು ದಿವಸಗಳಿಂದಲೂ ಈ ರಾಜ್ಯಗಳ ಪುನರ್ನಿರ್ಮಾಣದ ವಿಚಾರವಾಗಿ ಶೇಷಾದ್ರಿ ಸಮಿತಿಯವರು ಒಪ್ಪಿಸಿರತಕ್ಕಂಥ ವರದಿಯ ಬಗ್ಗೆ ವಿಪುಲವಾದ ಚರ್ಚೆ ನಡೆಯುತ್ತಿದೆ. ಈ ಭಾಷಾವಾರು ಆಧಾರದ ಮೇಲೆ ನಮ್ಮ ಸಂಸ್ಥಾನ ವಿಶಾಲವಾಗಬೇಕು ಎಂದು ಕೆಲವರೂ ಮತ್ತು ಈ ಭಾಷಾವಾರು ಪ್ರಾಂತ್ಯದ ತತ್ವಗಳ ಮೇಲೆ ಮಾಡಬಾರದೆಂದು, ವಿರೋಧಿಸುತ್ತ ಕೆಲವರು ಮಾತನಾಡಿರುತ್ತಾರೆ. ಹೀಗೆ ಭಾಷಾವಾರು

ಆಧಾರದಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವುದು ಅಷ್ಟೇನೂ ಮುಖ್ಯವಾದುದಲ್ಲ. ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಬೇಕಾಗಿದ್ದರೆ ಅನೇಕ ವಿಚಾರಗಳನ್ನು ಗಮನಿಸಬೇಕಾಗಿದೆ ಎಂದು ಈಗ ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸಭೆಯ ಮುಂದೆ ವ್ಯಕ್ತಪಡಿಸಿದ್ದಾರೆ. ಆದರೆ ಕೆಲವರ ಅಭಿಪ್ರಾಯದಲ್ಲಿ ರಾಜ್ಯಗಳ ಪುನರ್ವಿಂಗಡಣೆಗೆ ಈ ಭಾಷೆಯೇ ಬಹು ಮುಖ್ಯವಾದ ಆಧಾರವಾಗಿರಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಈ ರಾಜ್ಯಗಳ ಪುನರ್ನಿರ್ಮಾಣದ ಬಗ್ಗೆ ನಾವು ಬಹು ಮುಖ್ಯವಾಗಿ ಆಲೋಚಿಸಬೇಕಾದದ್ದು ಏನೆಂದರೆ ಅವುಗಳ ಭೌಗೋಳಿಕ ವಿಚಾರ, ಆಡಳಿತ ಸೌಕರ್ಯ, ಆರ್ಥಿಕ ಪರಿಸ್ಥಿತಿ ಇತ್ಯಾದಿ ವಿಚಾರಗಳ ಬಗ್ಗೆ ನಾವು ನಮ್ಮ ಪೂರ್ಣ ಗಮನವನ್ನಿಡಬೇಕಾಗಿರುತ್ತೆಂದು ನನಗನ್ನಿಸುತ್ತಿದೆ. ಈ ದೃಷ್ಟಿಗಳಿಂದ ನಾವೀದಿವಸ ಈ ಶೇಷಾದ್ರಿ ಸಮಿತಿಯ ವರದಿಯಲ್ಲಿ ಅಡಗಿರತಕ್ಕಂಥ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ನೋಡಿದರೆ ಮೈಸೂರು ಹೊರಗ್ಗಡೆಯ ಕರ್ಣಾಟಕ ಪ್ರದೇಶದಲ್ಲಿರತಕ್ಕಂಥ ಆರ್ಥಿಕ ಪರಿಸ್ಥಿತಿಯನ್ನೂ ಮತ್ತು ನಮ್ಮ ಮೈಸೂರಿನ ಆರ್ಥಿಕ ಪರಿಸ್ಥಿತಿಯನ್ನೂ ಒಂದಕ್ಕೊಂದು ಹೋಲಿಸಿ ನೋಡಬೇಕಾದುದು ಬಹಳ ಮುಖ್ಯವಾದಂಥ ವಿಚಾರ. ಹೀಗೆ ನಾವು ಈ ದಿವಸ ನಮ್ಮ ಸಂಸ್ಥಾನದ ಆರ್ಥಿಕ ಪ್ರಗತಿಯನ್ನು ಹೊರಗಡೆ ಇರತಕ್ಕಂಥ ಆ ಕನ್ನಡ ಪ್ರಾಂತ್ಯಗಳ ಆರ್ಥಿಕ ಪರಿಸ್ಥಿತಿಗೆ ಹೋಲಿಸಿ ನೋಡಿದರೆ ನಮ್ಮಲ್ಲಿರತಕ್ಕಂಥ ಸ್ಥಿತಿಗತಿಗಳು ಅಲ್ಲಿರುವುದಿಲ್ಲವೆಂಬುದು ಕಂಡುಬರುತ್ತದೆ. ಇಂಥ ದೇಶಗಳ ಪುನರ್ವಿಂಗಡಣೆಯಲ್ಲಿ ಬಹಳ ವ್ಯತ್ಯಾಸವಿದೆ. ಈ ದಿವಸ ನಾವು ಈ ರಾಜ್ಯಗಳ ಪುನರ್ವಿಂಗಡಣೆಗೆ ಭಾಷೆಯೇ ಮುಖ್ಯವಾದಂಥ ಮೂಲಾಧಾರವಾಗಿರಬೇಕೆಂದು ಹೇಳಿದ ಮೇಲೆ ಅನೇಕ ವರ್ಷಗಳಿಂದ, ಅನೇಕ ಶತಮಾನಗಳಿಂದಲೂ ಇಲ್ಲಿ ನೆಲಸಿರತಕ್ಕಂಥ ಅನ್ಯಭಾಷೆಯನ್ನಾಡುವ ಜನರನ್ನು ನಾವು ಈ ದಿವಸ ಹೊರಗಡೆ ಬೇರೆ ಪ್ರದೇಶಕ್ಕೆ ಕಳುಹಿಸಬೇಕಾಗುತ್ತದೆ. ಹೀಗೆ ಭಾಷೆಯ ಆಧಾರವನ್ನೇ ತೆಗೆದುಕೊಂಡು ಹೇಳುವುದಾದರೆ ಈ ದಿವಸ ನಮ್ಮ ಸಂಸ್ಥಾನದಲ್ಲಿರುವ ಅಂದರೆ ಶತಮಾನಗಳಿಂದಲೂ ನಮ್ಮೊಡನೆ ಬಾಳಿಕೊಂಡು ಬಂದಿರುವಂಥ ಅನ್ಯಭಾಷೆಯ ಜನರನ್ನು— ನಮ್ಮ ಕಷ್ಟ-ಸುಖಗಳಲ್ಲಿ ಭಾಗಿಗಳಾಗಿದ್ದಂಥ ಜನರನ್ನು, ನಾವು ಅವರು ಬೇರೆ ಪ್ರಾಂತ್ಯಗಳಿಗೆ ಇಷ್ಟಪಟ್ಟರೆ ಹೋಗಬಹುದೆಂದು ಹೇಳಿದಹಾಗಾಯಿತು. ಆದರೆ ಈ ತತ್ವಕ್ಕೆ ಒಪ್ಪಿಕೊಂಡು ಈ ನಮ್ಮ ಬಂಧುಗಳನ್ನೆಲ್ಲಾ ಅವರು ಬೇರೆ ಕಡೆಗೆ ಹೋಗಬೇಕೆಂದರೆ ಅವರನ್ನು ಹಾಗೆ ಬಿಟ್ಟುಕೊಡಲು ನಾನೀ ದಿವಸ ಸಿದ್ಧವಾಗಿಲ್ಲ. ನಾನು ಈ ಬಗ್ಗೆ ನನ್ನ ಕ್ಷೇತ್ರದಲ್ಲಿರತಕ್ಕಂಥ ಜನರ ಅಭಿಪ್ರಾಯವನ್ನು ಕೇಳಬೇಕಾಗಿದೆ. ಆದರೆ ನನ್ನ ಕ್ಷೇತ್ರದಲ್ಲಿರತಕ್ಕಂಥ ಜನರ ಅಭಿಪ್ರಾಯದಲ್ಲಿ ಈ ನಮ್ಮ ಮೈಸೂರಿನ ವಿಸ್ತರಣಕ್ಕೆ ವಿರೋಧವಾಗಿದ್ದಾರೆಂದು ಹೇಳುತ್ತೇನೆ. ಇಂದು ನಾವೆಲ್ಲರೂ ಭಾರತೀಯರು. ನಾವು ಭಾಷಾವಾರು ಆಧಾರದ ಮೇಲೆ ಪ್ರಾಂತ್ಯಗಳನ್ನು ಅಥವಾ ರಾಜ್ಯಗಳನ್ನ ವಿಂಗಡಣೆ ಮಾಡಬೇಕು ಎಂದು ಹೇಳುವ ಭಾಗದಲ್ಲಿ ನಮ್ಮಲ್ಲಿ ರಾಷ್ಟ್ರೀಯ ಮನೋಭಾವನೆಗಿಂತ ಪ್ರಾಂತೀಯ ಮನೋಭಾವನೆ ಜಾಸ್ತಿಯಾಗುತ್ತದೆ. ಇನ್ನು ನಾವು ಈ ವಿಶಾಲ ಭಾರತದಲ್ಲಿ ಯಾವ ಭಾಷೆಯನ್ನೇ ಆಡಲಿ, ಯಾವ ಭಾಗದಲ್ಲೇ ಇರಲಿ ನಾವು ಭಾರತೀಯರು ಎಂಬುದನ್ನು ಮರೆಯಬಾರದು. ಈ ದೃಷ್ಟಿಯಿಂದ ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವುದಾದರೆ ಪ್ರಾಂತೀಯ ಪುನರ್ವಿಂಗಡಣೆ ಮತ್ತು ಮೈಸೂರು ವಿಶಾಲವಾಗುವುದ ಅನಾವಶ್ಯಕ. ನಮ್ಮ ದೇಶದಲ್ಲಿ ನಾನಾ ಭಾಷೆಗಳನ್ನು ಆಡತಕ್ಕ ಜನರಿದ್ದಾರೆ. ಮೈಸೂರು ವಿಶಾಲವಾಗುವುದರಿಂದ ಮೈಸೂರಿನ ಪ್ರಗತಿಗೆ ಬಹಳ ಅಡ್ಡಿಯಾಗುತ್ತದೆ. ಮೈಸೂರಿನ ಜನತೆಯ ಮೇಲೆ ನಾವು ಹೊರಬಾರದ ಹೊರೆಯನ್ನು ಹೊರಿಸಿ ಅವರ ಪ್ರಗತಿಯನ್ನು ಇನ್ನೂ 50 ವರ್ಷಗಳಕಾಲ ತಡೆದು ನಿಲ್ಲಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಮೈಸೂರು ಈಗ ಹೇಗೆ Composite State ಆಗಿ ನಾನಾ ಭಾಷೆಗಳನ್ನು ಆಡತಕ್ಕ ಜನಗಳನ್ನೊಳಗೊಂಡು ಇದೆಯೋ ಅದೇ ರೀತಿ ಮುಂದೆಯೂ ಇರಬೇಕೆಂದು ನನ್ನಭಿಪ್ರಾಯ.

ಶ್ರೀ ಮಲ್ಲಿಕಾರ್ಜುನಪ್ಪಗೌಡ (ಸೊರಬ—ಶಿಕಾರಿಪುರ).—ಈಗ ಅಂಕಿ ಅಂಶಗಳ ವರದಿಯ ಆಧಾರದ ಮೇಲೆ ಅನೇಕಾನೇಕ ವಿಧವಾಗಿ ಈ ಸಭೆಯ ಮುಂದೆ ಚರ್ಚೆನಡೆದಿದೆ. ನಾನು ಒಂದು ಅಭಿಪ್ರಾಯ ಸೂಚಿಸುತ್ತೇನೆ. ಏನು ಎಂದು ಹೇಳಿದರೆ, ಮೇಲೆ ಮಾತನಾಡತಕ್ಕಂಥಾದ್ದೇ ಒಂದು, ಒಳಗೆ ನಮಗೆ ಇರತಕ್ಕ ಸಂಶಯವೇ ಬೇರೆ. ಆ ಭಾಗಗಳು ಸೇರಿದರೆ, ಆ ಜಾತಿಯವರು ಎಷ್ಟು ಜನಬರಬಹುದು, ಈ ಭಾಗಗಳು ಸೇರಿದರೆ ಈ ಜಾತಿಯವರು ಎಷ್ಟು ಜನ ಬರಬಹುದು ಎನ್ನುವ ಶಂಕೆಯನ್ನು ಇಟ್ಟುಕೊಂಡು ಚರ್ಚೆನಡೆಯುತ್ತಿದೆ ಎಂದು ನಾನು ನಂಬಿದ್ದೇನೆ. ಇನ್ನು ಮುಂದೆ ಅದಕ್ಕೆಲ್ಲಾ ಅವಕಾಶವಿಲ್ಲ. ಇನ್ನು ಜಾತೀಯತೆ ಇರಲಾರದು ಎಂದು ಹೇಳುತ್ತೇನೆ. ಈಗ ಹೊಸದಾಗಿ ರಾಷ್ಟ್ರದಲ್ಲಿ ಸಮತಾವಾದದ ರಾಜ್ಯವನ್ನು ಸ್ಥಾಪನೆ ಮಾಡುತ್ತಿದ್ದೇವೆ. ಯಾವ ಜಾತಿಯಲ್ಲಿದ್ದರೂ ಇನ್ನು ಮುಂದೆ ಎರಡು ವರ್ಗಗಳು ತಾನಾಗಿ ಉತ್ಪನ್ನವಾಗುತ್ತವೆ ಎಂದು ನನ್ನ ಭಾವನೆ. ಇವು ಯಾವುವು ಎಂದರೆ ಇದ್ದವರು ಮತ್ತು ಇಲ್ಲದವರು.. ಇಂತಹ ಸಮಾಜರಚನೆಯ ಕಾಲದೊಳಗೂ ಕೂಡ ಆ ಕೋಮಿನವರು ಹೆಚ್ಚಾಗಿ ಆಗಬಹುದು, ಈ ಕೋಮಿನವರು ಹೆಚ್ಚಾಗಿ ಆಗಬಹುದು ಎಂಬ ರಾಜಕೀಯ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಶಂಕೆಪಟ್ಟುಕೊಂಡು ಈ ರೀತಿ ವಾದ ಮಾಡುವುದು ಸರಿಯಲ್ಲ ಎಂದು ನನ್ನ ಭಾವನೆ. ಹೆಚ್ಚಿಗೆ ಮಾತನಾಡತಕ್ಕ ಅವಶ್ಯಕತೆ ಇಲ್ಲ. ಅನೇಕರು ಇದರ ಮೇಲೆ ವಿಶದವಾಗಿ ಚರ್ಚೆಮಾಡಿದ್ದಾರೆ. ಅಂಕಿ ಅಂಶಗಳ ವರದಿಯ ವಿಚಾರದಲ್ಲಿ ಒಂದು ಅಂಶವನ್ನು ತಮ್ಮ ಎದುರಿಗೆ ಇಡುತ್ತೇನೆ.. ಅದು ಅಪೂರ್ಣವೆಂದು ಎಲ್ಲರೂ ಒಪ್ಪುತ್ತಾರೆ. ಅದರಲ್ಲಿ ಅಶ್ವತ್ಥಾಮೋ ಹತಃ ಎಂದು ಹೇಳಿಬಿಟ್ಟು ಕುಂಜರ ಎಂಬುದನ್ನು ಹೇಳಿಲ್ಲದೆ ಇರುವುದರಿಂದ ಇಷ್ಟು ಅಂಕಿಅಂಶಗಳ ಆಧಾರಗಳು ಇಷ್ಟೊಂದು ಸಂಶಯಕ್ಕೆ ಎಡೆ ಕೊಟ್ಟು ಚರ್ಚೆ ಮಾಡುವುದಕ್ಕೆ ಅವಕಾಶವಾಗಿದೆ ಎಂದು ಭಾವಿಸುತ್ತೇನೆ. ಇನ್ನು ನಾನು ಹೆಚ್ಚುಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಕೆಲವರು ಉತ್ತರ ಕರ್ಣಾಟಕದಲ್ಲಿ ಇರುವುದು ಕಪ್ಪು ಭೂಮಿ ಎಂದು ಹೇಳಿದರು. ಅಲ್ಲಿಯ ಭೂಮಿ ಬಹಳ ಒಳ್ಳೆಯದು. ಅಲ್ಲಿ ಚಿನ್ನದಂಥ ಹತ್ತಿ ಬೆಳೆಯತಕ್ಕ ಭೂಮಿ ಇದೆ. ಇವತ್ತಿನ ದಿವಸ ಅದನ್ನು ಕೈ ಬಿಡುವುದು ಒಳ್ಳೆಯದಲ್ಲ. ಹಿಂದೆ ದೇಶ ವಿಸ್ತೀರ್ಣ ಮಾಡುವುದಕ್ಕೋಸ್ಕರ ಅನೇಕ ಯುದ್ಧಗಳಲ್ಲಿ ಪ್ರಾಣಾಪಾಯಗಳಿಗೊಳಗಾಗುತ್ತಿದ್ದರು. ಇವತ್ತಿನ ದಿವಸ ತಾನಾಗಿ ಬಂದು ಭೂಮಿ ನಮಗೆ ಸೇರುತ್ತದೆ ಎಂದರೆ ಅದನ್ನು ಬೇಡ ಎಂದು ಹೇಳುವುದು ಸರಿಯಲ್ಲ. ಇನ್ನು ಕೆಲವರು administration ಅನುಕೂಲಕ್ಕೋಸ್ಕರ ಸೇರಿಕೊಳ್ಳೋಣ ಎಂದು ಹೇಳುತ್ತಿದ್ದಾರೆ. ಅವೆಲ್ಲಾ ಏನೇ ಇರಲಿ, ಇವತ್ತಿನ ದಿವಸ ರಾಜ್ಯವಿಂಗಡನೆ

(ಶ್ರೀ ಮಲ್ಲಿಕಾರ್ಜುನಪ್ಪಗೌಡ.)

ಮಾಡುವುದಕ್ಕೋಸ್ಕರ ನಾವು ಸೇರಿಕೊಳ್ಳಲೇಬೇಕು; ಮತ್ತು ಹಾಗೆ ಸೇರುವುದು ಒಳ್ಳೆಯದು. ಇವೊತ್ತಿನ ದಿವಸ ನಾವು ನೀವು ಚರ್ಚೆ ಮಾಡುವ ಕಾಲ ಬಹಳ ಒಳ್ಳೆಯಕಾಲವೆಂದು ಭಾವಿಸಿದ್ದೇನೆ. ಇದು ಒಳ್ಳೆಯ ಶುಭಲಗ್ನದಕಾಲ. ಕೇಂದ್ರ ಸರಕಾರದವರು ನೇಮಿಸಿದ ಫಸಲಾಲಿ ಸಮಿತಿಯವರು ಇನ್ನೂ ವರದಿ ಕೊಟ್ಟಿಲ್ಲ. ಈಗ ಕೊಡತಕ್ಕ ಕಾಲ. ಅವರೂ ಕೂಡ ಮೈಸೂರಿನ ಜನತೆಯ ದೃಷ್ಟಿಯನ್ನು ನೋಡುತ್ತಾ ಇರಬಹುದು. ಆದ್ದರಿಂದ ಇವೊತ್ತು ಒಳ್ಳೆಯ ಶುಭ ದಿವಸದೊಳಗೆ ನಾವು ಇದನ್ನು ವಿಚಾರ ಮಾಡುತ್ತಿದ್ದೇವೆ. ನಮ್ಮ ಅನೇಕ ಮಾನ್ಯ ಮಿತ್ರರು ಮೈಸೂರು ವಿಸ್ತರಣೆ ಆಗುವುದಕ್ಕೋಸ್ಕರ ಏನೇನೋ ಶಂಕೆಗಳನ್ನು ಇಟ್ಟುಕೊಂಡು ಈ ರೀತಿ ಚರ್ಚೆಮಾಡುತ್ತಾ ಇರಬಹುದು. ಮೈಸೂರು ವಿಸ್ತರಣೆ ಆಗಿಯೇ ಆಗುತ್ತದೆ. ಇದಕ್ಕಿಂತ ಹೆಚ್ಚಿಗೆ ಹೇಳಲಾರೆ. ಒಂದ ಮಾತಿನೊಳಗೆ ಅವರನ್ನೆಲ್ಲಾ ಪ್ರಾರ್ಥನೆಮಾಡಿ ಹೇಳಬೇಕೆಂದಿದ್ದೇನೆ. ಅದನ್ನು ಹೇಳಿದರೆ ಅವರ ಮನಸ್ಸಿಗೆ ಸಂತೋಷವಾಗಬಹುದು ಎಂದು ಈ ವಚನವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

“ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ।
ರಾಶಿಕೂಟ ಋಣಸಂಬಂಧ ಉಂಟೆಂದು ಹೇಳಿರಯ್ಯ॥
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ।
ಕರ್ನಾಟಕ ಏಕೀಕರಣಬೇಕೆಂದು ಹೇಳಿರಯ್ಯ।
ಕೂಡಲಸಂಗಮ ದೇವನ ಪೂಜಿಸಿದ ಫಲ ಸಿಕ್ಕುವುದಯ್ಯ॥

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಎರಡು ಮೂರು ದಿವಸಗಳಿಂದ ಈ ಅಂಕಿ ಅಂಶಗಳ ವರದಿಯಮೇಲೆ ಚರ್ಚೆನಡೆಯುತ್ತಾ ಇರುವುದು ತಮಗೆಲ್ಲಾಗೊತ್ತಿದೆ. ಅನೇಕರು ಕರ್ಣಾಟಕ ಏಕೀಕರಣವಾಗಬೇಕು ಎಂದು ವಾದ ಮಾಡಿದ್ದಾರೆ. ಹಲವಾರು ಜನರು ಮೈಸೂರು ಇದ್ದ ಹಾಗೆ ಇರಬೇಕು ಎಂದು ಹೇಳಿದ್ದಾರೆ. ಇನ್ನು ಕೆಲವರು ಎರಡು ಕರ್ಣಾಟಕ ಪ್ರಾಂತಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಆದರೂ ನಾವು ಇರುವ ರೀತಿಯಲ್ಲಿ ಮೈಸೂರು ಸ್ಟೇಟ್ ಇರುತ್ತದೆಂದು ನಂಬುವುದಕ್ಕೆ ಆಗುವುದಿಲ್ಲ. ವಿಸ್ತಾರವಾದ ಮೈಸೂರು ಆಗುತ್ತದೆಂದೂ ಹೇಳುವುದಕ್ಕಾಗುವುದಿಲ್ಲ. ಪುನರ್ವ್ಯವಸ್ಥೆ ಮಾಡುವ ಕಾಲದಲ್ಲಿ ಮೈಸೂರು ಸ್ವಲ್ಪ ದೊಡ್ಡದಾಗುತ್ತದೆಂದು ಕಾಣುತ್ತದೆ. ಈಗ ಸಾಧಾರಣವಾಗಿ ಚರ್ಚೆಮಾಡಿರುವುದನ್ನು ನೋಡಿದರೆ, ಉತ್ತರ ಕರ್ಣಾಟಕದವರು ಒಳ್ಳೆಯ ಖೋತ್ರಾ ದೇಶದಲ್ಲಿದ್ದಾರೆ, ಅವರು ಮೈಸೂರು ದೇಶಕ್ಕೆ ಸೇರಿ ನಮಗೆ ಬೇಕಾದಷ್ಟು ನಷ್ಟವನ್ನು ತಂದು ಒದಗಿಸುತ್ತಾರೆ ಎನ್ನುವ ಹಾಗೆ ಕಾಣುತ್ತದೆ. ಆದರೂ ಅಲ್ಲಿಗೆ ಹೋಗಿ ಬಂದಿರತಕ್ಕ ಅನೇಕ ಸ್ನೇಹಿತರು ಅಲ್ಲಿ ಅರಣ್ಯ ಸಂಪತ್ತು ಹೆಚ್ಚಾಗಿದೆ. ಖನಿಜಗಳು ಹೆಚ್ಚಾಗಿ ಸಿಕ್ಕುತ್ತವೆ. ವಿದ್ಯಾಭ್ಯಾಸ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಆದರೆ ಶೇಷಾದ್ರಿ ಸಮಿತಿಯವರು ಅಲ್ಲಿ ಬಹಳ ಕೊರತೆ ಇದೆ. ಭಾಷಾವಾರು ರೀತಿಯಲ್ಲಿ ನಾವು ಪುನರ್ವಿಂಗಡನೆ ಮಾಡುವುದಾದರೆ ನಮ್ಮ ದೇಶದಲ್ಲಿ ಬೇರೆ ಬೇರೆ ಭಾಷೆ ಮಾತನಾಡತಕ್ಕ ಜನರ ವರ್ಗಾವಣೆ ಮಾಡಬೇಕಾಗುತ್ತದೆ ಎಂದು ಹೇಳಿರುವುದನ್ನೂ ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಶ್ರೀ ಕಂಠಿಯವರ ವರದಿಯನ್ನು ಸಹ ನಮ್ಮ ಮುಂದೆ ಇಟ್ಟಿದ್ದಾರೆ. ಈ ಎರಡು ವರದಿಗಳನ್ನೂ ನೋಡಿ, ಇಷ್ಟು ಚರ್ಚೆನಡೆದುದನ್ನೂ ನೋಡಿ ನನಗೆ ಭಯವಾಗುತ್ತದೆ. ಮೈಸೂರು ದೇಶ ಯಾವ ಕಾಲದಲ್ಲಿ ಈ ಆಕಾರಕ್ಕೆ ಬಂತು. ಯಾವ ಕಾಲದಲ್ಲಿ ಈ ಆಕಾರವನ್ನು ಬದಲಾಯಿಸಬಹುದು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳದೇ ಹೋದರು. ನನ್ನ ಸ್ನೇಹಿತರನ್ನು ನೋಡಿದರೆ, ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ನನಗೆ ತುಂಬ ನೆಂಟರು ಇದ್ದಾರೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ತುಂಬ ಬಂಧುಗಳು, ನೆಂಟರು ಮತ್ತು ಸ್ನೇಹಿತರು ಇದ್ದಾರೆ. ನನಗೆ ಓಟುಮಾಡಿದ ಮತದಾರರು ಇದ್ದಾರೆ. ಅವರೆಲ್ಲರೂ “ನಾವು ಭಾಷೆಯ ಆಧಾರದ ಮೇಲೆ ಕರ್ಣಾಟಕ ಏಕೀಕರಣ ಮಾಡುವ ಪಕ್ಷದಲ್ಲಿ” ವಿಸ್ತಾರವಾದ ಮೈಸೂರು ರಾಜ್ಯವನ್ನು ಮಾಡುವ ಪಕ್ಷದಲ್ಲಿ ನಾವು ಕ್ರಮ ಬದ್ಧವಾಗಿಯೇ ಅದೇ ಭಾಷೆಯ ಆಧಾರದ ಮೇಲೆಯೇ ನಿಮ್ಮಿಂದ ಹೊರಗೆ ಹೋಗಬೇಕಾದ ಸ್ಥಿತಿ ಬರುತ್ತದೆ. ಆ ಸ್ಥಿತಿಗೆ ನಮ್ಮನ್ನು ಬಿಡಬೇಡಿರಿ” ಎಂದು ಹೇಳುತ್ತಿದ್ದಾರೆ. ದೇಶದ ಅಭಿವೃದ್ಧಿಗೆ ದುಡಿದ ಶ್ರೀ ಟಿ. ಚನ್ನಯ್ಯನವರನ್ನು ಬಿಟ್ಟು ಬಿಡುವುದು ಹೇಗೆ? ಶ್ರೀ ನಾಗಯ್ಯರೆಡ್ಡಿಯವರು, ಶ್ರೀ ಲಿಂಗಾರೆಡ್ಡಿಯವರು, ಶ್ರೀ ನಾರಾಯಣಗೌಡರು, ಮತ್ತು ಇನ್ನೂ ಅನೇಕ ಸ್ನೇಹಿತರುಗಳು ಈ ದೇಶಕ್ಕೆ ದುಡಿದಿದ್ದಾರೆ. ಭಾಷಾವಾರು ರೀತಿಯಲ್ಲಿ ಪ್ರಾಂತಗಳು ವಿಭಜನೆಯಾದ ಕಾಲದಲ್ಲಿ ಅವರನ್ನು ನಾವು ಕಳೆದುಕೊಳ್ಳುವ ಸ್ಥಿತಿಗೆ ಬರುತ್ತೇವೆ. ಭಾಷೆಯ ಮೇಲೆ ವಿಭಜನೆಯಾಗುವ ಕಾಲದಲ್ಲಿ ಲಕ್ಷಗಟ್ಟಲೆ ಜನರು ಕನ್ನಡ ದೇಶಕ್ಕೆ ಅಧೀನರಾಗಿ ಇರುವುದಿಲ್ಲ. ಶ್ರೀ ಪಿ. ಆರ್. ರಾಮಯ್ಯನವರು ಹೇಳಿದ ಹಾಗೆ ಭಾಷಾವಾರು ವಿಭಜನೆ ಮಾಡುವಾಗ ನೇರವಾಗಿ ಒಂದು ಗೆರೆ ಹಾಕಿದರೆ ಆನೆಕಲ್ಲಿನಿಂದ ಪಾವುಗಡದ ಪೂರ್ವಕ್ಕಿರುವ ಭಾಗವೆಲ್ಲಾ ಕರ್ನಾಟಕವನ್ನು ಬಿಟ್ಟು ಹೋಗುತ್ತದೆ. ಖಂಡಿತವಾಗಿ ಮೈಸೂರಿನ ಯಾವ ಭಾಗಗಳನ್ನು ನಾವು ಬಿಡಬಾರದು ಎಂದು ಆಶೆ ಇದೆಯೋ ಅಂತಹ ಭಾಗಗಳನ್ನು ಆಗ ನಾವು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಭಾಷೆಯನ್ನು ಆಧಾರವಾಗಿಟ್ಟುಕೊಂಡು ಪುನರ್ವ್ಯವಸ್ಥೆಯನ್ನು ಮಾಡುವುದು ಸರಿಯಾಗಿ ಕಾಣುವುದಿಲ್ಲವೆಂದು ತೋರುತ್ತದೆ. ಆದರೆ ಆಡಳಿತ ದೃಷ್ಟಿಯಿಂದ ನಾವು ಸ್ವಲ್ಪ ಮಟ್ಟಿಗೆ ವ್ಯವಸ್ಥೆಮಾಡುವ ಸ್ಥಿತಿಗೆ ಬರಬಹುದು ಎಂದು ಕಾಣುತ್ತದೆ. ಅದಕ್ಕೋಸ್ಕರ ಪುನರ್ವ್ಯವಸ್ಥೆ ಮಾಡಲು ಫಸಲಾಲಿ ಸಮಿತಿಯವರನ್ನು ನೇಮಿಸಿದ್ದಾರೆ. ಇದು ಇಡೀ ಭಾರತದ ಪ್ರಶ್ನೆಯಾಗಿದೆ. ಅವರು ವಿಶಾಲ ದೃಷ್ಟಿಯಿಂದ ವಿಷಯಗಳನ್ನು ಅರಿತಿರತಕ್ಕಂಥವರು. ಅವರು ಯಾವ ರೀತಿ ತೀರ್ಮಾನ ಕೊಡುತ್ತಾರೋ ಅದನ್ನು ಕಾದು ನೋಡಬೇಕು ಎಂದು ಹೇಳುತ್ತೇನೆ.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕರ್ಣಾಟಕ ಪ್ರಾಂತ ಆಗಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆಯ ಮೇಲೆ ಅವರ ಅಭಿಪ್ರಾಯವನ್ನು ಸೂಚಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಕರ್ಣಾಟಕಪ್ರಾಂತ ಆಗತಕ್ಕದ್ದು ಅಗತ್ಯವೆಂದು ತಿಳಿದಿದ್ದೇನೆ. ಮೈಸೂರುದೇಶ ಬಹಳ ಚಿಕ್ಕದಾಗಿ ಇರುವ ದೇಶ, ಹೊರಗಿನ ಕನ್ನಡಿಗರು ಸೇರುವುದರಿಂದ ಇನ್ನು ಕಷ್ಟಪಡಬೇಕಾಗಿದೆ, ಆರ್ಥಿಕ ಮುಗ್ಗಟ್ಟು ಭರುತ್ತದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳುತ್ತಾರೆ. ನಾನು ಹೇಳುವುದಾದರೆ ಯಾವದೇಶ ವಿಶಾಲವಾಗಿರುತ್ತದೋ ಅಲ್ಲಿ ಕುಂದು

ಕೊರತೆ ಬರುವುದಿಲ್ಲ. ಆದ್ದರಿಂದ ಅವೇ ರೀತಿ ದೇಶ ವಿಶಾಲವಾಗಬೇಕೆಂದು ತಿಳಿಸುತ್ತೇನೆ. ಅಲ್ಲಿ ವಾಣಿಜ್ಯ ಕೈಗಾರಿಕೆ ಹೆಚ್ಚಾಗಿದ್ದು ನೀರಾವರಿ ಪ್ರದೇಶಗಳು ಇರುವುದರಿಂದ ಅಲ್ಲಿ ಉತ್ಪತ್ತಿ ಜಾಸ್ತಿ ಇದ್ದೇ ಇರುತ್ತದೆ. ಅವರವರ ಉತ್ಪತ್ತಿ ದೇಶದ ಆಡಳಿತವನ್ನು ನಡೆಸಿಕೊಂಡು ಬಂದಿರುತ್ತದೆ. ದೇಶ ವಿಶಾಲವಾದರೆ ನಮ್ಮ ದೇಶದ ಬೆಳವಣಿಗೆಗೆ ಯಾವ ಅಡ್ಡಿಯೂ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಕರ್ಣಾಟಕ ಪ್ರಾಂತ ಕೂಡಲೇ ಆಗಬೇಕಾಗಿದೆ ಎಂದು ನಾನು ಈ ಸಮಯದಲ್ಲಿ ಭಾವಿಸಿಕೊಂಡಿದ್ದೇನೆ. ಈಗ ಬಳ್ಳಾರಿ ನಮಗೆ ಸೇರಿದೆ. ನಮಗೆ ಬೇಕಾದಷ್ಟು ಕಷ್ಟ ಬರುತ್ತದೆ ಎಂದು ಇದೇ ಸಭೆಯಲ್ಲಿ ಅನೇಕ ಚರ್ಚೆಗಳು ನಡೆದುವು. ಮಾನ್ಯ ಸದಸ್ಯರು ಹೇಳಿರುವಂತೆ ತುಂಗಭದ್ರಾ ಅಣೆಕಟ್ಟಿನಿಂದ ಬೇಕಾದಷ್ಟು ಉತ್ಪತ್ತಿ ಬರುವುದಕ್ಕೆ ಅವಕಾಶವಿದೆ. ಎಲ್ಲಾ ದೃಷ್ಟಿಯಿಂದ ಕರ್ಣಾಟಕ ಪ್ರಾಂತರಚನೆಯಾದರೆ ಯಾವ ಅಡ್ಡಿ ಆತಂಕಗಳೂ ಬರುವುದಿಲ್ಲವೆಂದೂ ತಿಳಿದುಕೊಂಡಿದ್ದೇನೆ ಮತ್ತು ಅಲ್ಲಿಂದ ಬರತಕ್ಕ ರೆವಿನ್ಯೂ ಮತ್ತು ಸಮುದ್ರದ ವಾಣಿಜ್ಯದ ಉತ್ಪತ್ತಿ ದೃಷ್ಟಿಯಿಂದ ನೋಡಿದರೆ ನಮ್ಮ ದೇಶ ವಿಶಾಲವಾಗುವುದರಿಂದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಾಗಿ ದೇಶ ಮುಂದುವರಿಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಬೊಂಬಾಯಿ ಪ್ರಾಂತ್ಯದಲ್ಲಿ ಖನಿಜಸಂಪತ್ತು ಹೆಚ್ಚಾಗಿದೆ. ದೊಡ್ಡ ದೊಡ್ಡ ನಾಲೆಗಳು ಇವೆ, ಅದರಿಂದ ನಮ್ಮ ದೇಶಕ್ಕೆ ಅನುಕೂಲವಾಗುತ್ತದೆಂದು ನಾವು ತಿಳಿದಿದ್ದೇವೆ. ಇವತ್ತಿನ ದಿವಸ ಬೊಂಬಾಯಿ ವಿಶ್ವವಿದ್ಯಾನಿಲಯದಿಂದ ನಮ್ಮ ಸಂಸ್ಥಾನದವರನೇಕರು ವಿದ್ಯಾಭ್ಯಾಸ ಮಾಡಿಕೊಂಡು ಬಂದಿದ್ದಾರೆ. ಅಲ್ಲಿನ ಆಡಳಿತ ಚೆನ್ನಾಗಿದೆ. ಅಲ್ಲಿನ ಜನರ ವಿದ್ಯಾಭ್ಯಾಸವೂ ಚೆನ್ನಾಗಿದೆಯೆಂದು ಎಲ್ಲರಿಗೂ ಗೊತ್ತಿದೆ. ಹೀಗಿರುವಾಗ ಅವರು ನಮ್ಮಲ್ಲಿ ಸೇರಿ ನಾವೂ ಅವರೂ ಕಲೆತರೆ ನಮ್ಮ ಅಭಿವೃದ್ಧಿಗೆ ಇನ್ನೂ ಅವಕಾಶವಾಗುತ್ತದೆಂದು ಹೇಳಿ ಕರ್ಣಾಟಕ ಪ್ರಾಂತ ಕೂಡಲೆ ಆಗಬೇಕೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, ಈಗ ಮೂರು ನಾಲ್ಕು ದಿವಸಗಳಿಂದಲೂ ಶೇಷಾದ್ರಿ ಸಮಿತಿಯವರ ವರದಿಯ ವಿಚಾರವಾಗಿ ವಾದವಿವಾದಗಳು ಈ ಸಭೆಯಲ್ಲಿ ನಡೆದಿವೆ. ನಾನು ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳತಕ್ಕದ್ದಿಷ್ಟೆ. ಪ್ರಾಂತಪುನರ್ವಿಂಗಡಣೆಯ ವಿಚಾರದಲ್ಲಿ ಅನೇಕ ಜನರು ಪರವಾಗಿಯೂ ಮತ್ತು ವಿರೋಧವಾಗಿಯೂ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನಾನಾದರೋ ಕರ್ಣಾಟಕ ಎರಡು ಕೋಟಿ ಪ್ರಜಾಸಂಖ್ಯೆಯುಳ್ಳಂಥ ಒಂದು ಪ್ರಾಂತ್ಯವಾಗಬೇಕು, ಅದರಿಂದ ದೇಶಕ್ಕೆ ಇರತಕ್ಕ ಅನೇಕ ರೀತಿಯ ಕೊರತೆಗಳು ಪರಿಹಾರವಾಗುತ್ತವೆ, ಸಮುದ್ರ, ರೇವುಪಟ್ಟಣಗಳು, ಖನಿಜಸಂಪತ್ತು ನಮ್ಮ ದೇಶಕ್ಕೆ ಒದಗಿ ಈಗಿರತಕ್ಕ ನಿರುದ್ಯೋಗ ಸಮಸ್ಯೆ ಪರಿಹಾರವಾಗಿ, ವರ್ತಕರು ಹೆಚ್ಚಿನ ಮಟ್ಟದಲ್ಲಿ ವ್ಯಾಪಾರ ವ್ಯವಹಾರಗಳನ್ನು ನಡೆಸುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಇವೊತ್ತಿನ ದಿವಸ ಕರ್ಣಾಟಕದ ಹೊರಗಡೆ ಇರತಕ್ಕ ಜನಗಳು ಮೈಸೂರು ಸಂಸ್ಥಾನಕ್ಕೆ ಸೇರಿ ಸುಖಸಂಪತ್ತಿನಿಂದ ಬಾಳೋಣವೆಂಬ ಬಯಕೆಗೆ ಉತ್ತೇಜನ ಕೊಟ್ಟಂತಾಗುತ್ತದೆ. ಆಂಗ್ಲೇಯರು ಅಧಿಕಾರದಲ್ಲಿದ್ದಾಗ ತಮ್ಮ ಆಡಳಿತಕ್ಕೆ ಅನುಕೂಲವಾಗುವಂತೆ ಛಿದ್ರಛಿದ್ರವಾಗಿ ಮಾಡಿರತಕ್ಕದ್ದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರತಕ್ಕ ವಿಚಾರವೇ. ಅಂಥದರಲ್ಲಿ ಮತ್ತೊಮ್ಮೆ ಎಲ್ಲರೂ ಒಂದುಗೂಡಿ ಹಿಂದಿನಂತೆ ಸುಖ ವೈಭವದಿಂದ ಬಾಳಬೇಕೆಂಬ ಸಹಜವಾದ ಆಕಾಂಕ್ಷೆಗೆ ಸಫಲತೆಯನ್ನು ಉಂಟುಮಾಡಿಕೊಡುವುದು ನ್ಯಾಯವಾಗಿದೆ. ಅಲ್ಲದೆ ಮೈಸೂರು ಕಾಂಗ್ರೆಸ್ ಸಂಸ್ಥೆಯವರೂ ಸಹ ಈಗ್ಗೆ ಸುಮಾರು 40 ವರ್ಷಗಳಿಂದಲೂ ಮೈಸೂರು ಸಂಸ್ಥಾನ ವಿಸ್ತಾರವಾಗಬೇಕು, ಅದರಿಂದ ದೇಶಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತಲೇ ಬಂದಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದಮೇಲೆ ಈವಾದ ಬಂದಿದ್ದಲ್ಲ. ಆಂಧ್ರಪ್ರಾಂತ ರಚನೆ ಯಾದಮೇಲೆ ಈ ಸಮಸ್ಯೆ ಉಲ್ಬಣಿಸಿ ನಾಲ್ಕು ಕೋಟಿ ಪ್ರಜಾಸಂಖ್ಯೆಯಿರತಕ್ಕ ಬೊಂಬಾಯಿಪ್ರಾಂತ್ಯ, 3 ಕೋಟಿ ಪ್ರಜಾಸಂಖ್ಯೆಯಿರತಕ್ಕ ಮದ್ರಾಸ್ ಪ್ರಾಂತ್ಯ, ನಾಲ್ಕು ಕೋಟಿ ಪ್ರಜಾಸಂಖ್ಯೆ ಇರತಕ್ಕ ಹೈದರಾಬಾದ್ ಪ್ರಾಂತ್ಯಗಳು ದೊಡ್ಡದೊಡ್ಡದಾಗಿರುವುದರಿಂದ ದೇಶದ ಆಡಳಿತಕ್ಕೆ ಅನಾನುಕೂಲಗಳಾಗಿರುವುದನ್ನು ಗಮನಿಸಿ ಎರಡೆರಡು ಕೋಟಿಗೆ ಒಂದು ಸರ್ಕಾರ ರಚಿಸಬೇಕೆಂದು ಹೇಳಿ ಫಜಲಾಲಿ ಕಮಿಷನ್ನನ್ನು ದೇಶದ ನಾಯಕರು ಸ್ಥಾಪನೆ ಮಾಡಿದ್ದಾರೆ. ನೆಹರೂರವರನ್ನು ಸ್ಥಾಪನೆ ಮಾಡಬೇಕೆಂದು ಯಾರೂ ಕೇಳಿಕೊಂಡಿರಲಿಲ್ಲ. ಅವರೇ ಆಡಳಿತ ದೃಷ್ಟಿಯಿಂದ ಜನರಿಗೆ ಒಳ್ಳೆಯದಾಗಬೇಕೆಂದು ಈ ಕಮಿಟಿಯನ್ನು ಮಾಡಿದರು. ಆ ಕಮಿಟಿಯವರು ಆಗಲೇ ಮೈಸೂರಿನಲ್ಲಿ ಪ್ರವಾಸಮಾಡಿ ಜನರ ಅಭಿಪ್ರಾಯವೇನೆಂಬುದನ್ನು ಮನಗಂಡಿದ್ದಾರೆ, ಮತ್ತು ಆ ಕಮಿಟಿಯ ವರದಿಯೂ ಕೂಡ ಸದ್ಯದಲ್ಲೇ ಸಭೆಯ ಮುಂದೆ ಬರತಕ್ಕ ಸನ್ನಿವೇಶವಿದೆಯೆಂಬುದನ್ನು ಮಾನ್ಯ ಸದಸ್ಯರನೇಕರು ಅರಿತವರಾಗಿದ್ದಾರೆ. ಈ ಸಭೆಯಲ್ಲಿ ಎಲ್ಲರಿಗಿಂತ ಬಹಳ ಹೆಚ್ಚಿಗೆ ಕಾಂಗ್ರೆಸ್ಸಿಗೆ ತ್ಯಾಗ ಮಾಡಿರತಕ್ಕ ಶ್ರೀಮಾನ್ ಪಟ್ಟಾಭಿರಾಮನ್‌ರವರು ಕೂಲಂಕಷವಾಗಿ ಅಕ್ಷರಶಃ ಈ ಸೇರುವಿಕೆಯಿಂದ ದೇಶಕ್ಕೆ ಆಗತಕ್ಕ ಅನುಕೂಲ, ಇದುವರೆಗೂ ಉಂಟಾಗಿರತಕ್ಕ ಕಷ್ಟ ಪರಂಪರೆಗಳನ್ನು ವಿವರಿಸಿದ್ದಾರೆ. ಅಂತೆಯೇ ವಿರೋಧಪಕ್ಷದ ನಾಯಕರಾದ ಮತ್ತು ಜಿಲ್ಲಾಬೋರ್ಡಿನ ಸದಸ್ಯರಾಗಿದ್ದ ಮತ್ತು ಪ್ರಜಾಸೇವೆಯೇ ದೇಶಸೇವೆಯೆಂಬ ಮನಸ್ಸಿನಿಂದ ದುಡಿಯತಕ್ಕ ಶ್ರೀಮಾನ್ ಇಮಾಂರವರೂ ಇದರ ವಿಷಯದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಮೈಸೂರು ಸಂಸ್ಥಾನದ ಮಂತ್ರಿವರ್ಯರಾಗಿಯೂ ಇದ್ದವರು. ಹಾಗೆಯೇ ಅನುಭವಿಗಳಾದ ಶ್ರೀಮಾನ್ ಸಿದ್ದಪ್ಪನವರು, ಹುಚ್ಚೇಗೌಡರು ಪುನರ್ವಿಂಗಡಣೆಯ ವಿಚಾರದಲ್ಲಿ ತಮ್ಮ ಒಮ್ಮತವನ್ನು ಸೂಚಿಸಿ ದೇಶಕ್ಕೆ ಇದರಿಂದ ಒಳ್ಳೆಯದಾಗುತ್ತದೆಂದು ಹೇಳಿದ್ದಾರೆ. ಕೆಲವರು ಮಾತ್ರ ಇದನ್ನು ವಿರೋಧಿಸಿದ್ದಾರೆ. ಶ್ರೀಮಾನ್ ಬೈರೇಗೌಡರು ತಮ್ಮ ಕ್ಷೇತ್ರದವರಿಗೆ ಇದು ಒಪ್ಪಿಗೆಯಿಲ್ಲವೆಂದು ಹೇಳಿದರು. ನನ್ನ ಕ್ಷೇತ್ರದಲ್ಲಿ ನೋಡಿದ್ದರಲ್ಲಿ ಕೆಲವರು ಏಕೀಕರಣವಾಗಬೇಕೆಂದೂ ಕೆಲವರು ಆಗಕೂಡದೆಂದೂ ಹೇಳಿದ್ದಾರೆ. ಇಂಥವರು ಮೈಸೂರು ಸಂಸ್ಥಾನದ ಹತ್ತು ಜಿಲ್ಲೆಗಳಲ್ಲೂ ಇದ್ದಾರೆ. ಆದರೆ, ಹೆಚ್ಚಿನದು ಯಾವುದೆಂದು ನೋಡುವುದಾದರೆ ಕರ್ಣಾಟಕ ಏಕೀಕರಣವಾಗಬೇಕೆನ್ನುವವರೇ ಎಂದು ನಾನು ತಿಳಿದವನಾಗಿದ್ದೇನೆ. ಆದರೂ ಈ ವಿಷಯಗಳಲ್ಲೆಲ್ಲಾ ರೆಫರೆಂಡಂ ಎಂಬ ಸೂತ್ರವನ್ನು ಹಿಡಿದು ಅಂಕಿಅಂಶಗಳ ಮೇಲೆ ನಿರ್ಧರಿಸುವುದಕ್ಕೆ ಸಾಧ್ಯವಿಲ್ಲ. ದೇಶದ ವಾತಾವರಣವನ್ನು ನಾನು ತಿಳಿದಿರುವ ಮಟ್ಟಿಗೆ ಮತ್ತು ಸಂಚಾರ ಮಾಡುವಾಗ ಜನಾಭಿಪ್ರಾಯವನ್ನು ನಾನು ಶೇಖರಿಸಿರುವಮಟ್ಟಿಗೆ ಹೇಳುವುದಾದರೆ, ಕೈಗಾರಿಕೋದ್ಯಮಗಳಿಗೆ ಹೆಚ್ಚಿನ ಪ್ರೋತ್ಸಾಹ, ಸಮು

(ಶ್ರೀ ಎಸ್. ಸಿದ್ದಪ್ಪ.)

ದೃದ ಅನುಕೂಲತೆ, ನಿರುದ್ಯೋಗದ ಸಮಸ್ಯೆ ಪರಿಹಾರಗಳು ದೊರೆತು ದೇಶವು ಸುಖಸಂಪತ್ತಿನಿಂದ ಬಾಳುವುದಕ್ಕೆ, ಸರ್ಕಾರದ ಅಧಿಕಾರಿಗಳಿಗೆ ಹೆಚ್ಚಿನರೀತಿಯಲ್ಲಿ ಅಧಿಕಾರ, ಸಂಬಳಸಿಕ್ಕಿ ಅವರ ಕಷ್ಟಗಳೂ ಪರಿಹಾರವಾಗಿ ದೇಶದ ಜನರ ಉನ್ನತಿಗೆ ಅನುಕೂಲವಾಗುತ್ತದೆಂದು ಹೇಳಬೇಕಾಗಿದೆ. ಅಲ್ಲದೆ ಕರ್ಣಾಟಕ ಸಂಘವೆಂಬುದು ಸುಮಾರು 40 ವರ್ಷಗಳಿಂದಲೂ ಬೆಂಗಳೂರಿನಲ್ಲಿದ್ದುಕೊಂಡು ಸರ್ಕಾರದಿಂದ ಹಣವನ್ನು ಪಡೆದು ಸಂಸ್ಥಾನದ ಎಲ್ಲಾ ಭಾಗದಲ್ಲೂ ಈ ಬಗ್ಗೆ ಕಾರ್ಯವನ್ನು ಜರುಗಿಸುತ್ತಿದೆ. ಇಂಥ ಸಂದರ್ಭವಿರುವಾಗ ನಾನು ಇನ್ನು ಹೆಚ್ಚು ಒತ್ತಿಹೇಳಬೇಕಾದ ಅವಶ್ಯಕತೆಯಿಲ್ಲ. ಅಧ್ಯಕ್ಷರೂ ನಾನು ಬೇಗ ಮುಗಿಸಲೆಂದು ಆತುರವಾಗಿದ್ದಾರೆ. ಅವರು ನನ್ನ ಮೇಲಿನ ವಿಶ್ವಾಸದಿಂದ, ಹಾಗೂ ಜನರ ಅಭಿಪ್ರಾಯವನ್ನು ಕೂಲಂಕಷವಾಗಿ ಪಡೆಯಬೇಕು, ಯಾವ ಮಾನ್ಯ ಸದಸ್ಯರ ಮನಸ್ಸಿಗೂ ನೋವಾಗಬಾರದು, ಯಾರೂ ತಮಗೆ ಮಾತನಾಡಲು ಅವಕಾಶ ಕೊಡಲಿಲ್ಲವೆನ್ನಬಾರದು ಎಂಬ ಮನೋಭಾವನೆಯಿಂದ ಮಧ್ಯಾಹ್ನ ಮತ್ತು ಸಾಯಂಕಾಲವೆಲ್ಲಾ ಸಭೆನಡೆಸಿ ಹೆಚ್ಚಿನ ಕಾಲಾವಕಾಶವಿಲ್ಲದಿದ್ದರೂ ಇಚ್ಛೆಪಟ್ಟವರಿಗೆಲ್ಲರಿಗೂ ಅವಕಾಶಕೊಟ್ಟು ಈ ಸಭೆಯ ಸಂದೇಶ ಈರೀತಿಯ ಭಾಷಣಗಳ ಮೂಲಕ ಫಜಲಾಲಿ ಕಮಿಷರ್ನವರಿಗೆ ಮುಟ್ಟುವಂತೆ ವ್ಯವಸ್ಥೆ ಮಾಡಿದ್ದಾರೆ. ಇದಕ್ಕಾಗಿ ನಾನು ಅವರನ್ನು ವಂದಿಸಬೇಕಾಗಿದೆ.

ಇನ್ನು ಈ ವರದಿಯ ಸಂಬಂಧದಲ್ಲಿ ನಮ್ಮ ಹಾಸನದ ಮಾನ್ಯ ಸ್ನೇಹಿತರಾದ ತಿಮ್ಮಪ್ಪಗೌಡರು ತಮ್ಮ ಭಾಷಣದಲ್ಲಿ ಒಂದೆರಡಾವರ್ತಿ ಹೇಳಿದ ಕೆಲವು ವಿಷಯಗಳನ್ನು ಸ್ವಲ್ಪ ಪ್ರಸ್ತಾಪಿಸಬೇಕಾಗಿದೆ. ಅವರು ಪಾರ್ಲಿಮೆಂಟಿನ ಮೆಂಬರೂ ಆಗಿದ್ದವರು. ತಿಳಿವಳಿಕಸ್ಥರು ಮತ್ತು ಮುಂದುವರಿದ ವರ್ಗಕ್ಕೆ ಸೇರಿದವರು. ಅವರು ಕೂಡ ಕೊನೆಯಲ್ಲಿ ಏಕೀಕರಣವಾಗುವುದು ಬೇಡ ಎಂಬೇನೂ ಹೇಳಲಿಲ್ಲ. ಎರಡು ವರುಷ ತಾಳಿ ಎಂದು ಮಾತ್ರ ಹೇಳಿದರು. ಸಾಲ ಕೊಡುವುದನ್ನು ಕೇಳಿದರೆ ಎರಡು ವರ್ಷ ನಿಲ್ಲಿ ಎಂದು ಹೇಳುವಂತೆ ಅವರು ಈ ಸಮಸ್ಯೆಯನ್ನು ಮುಂದಕ್ಕೆ ಹಾಕಲೆಂಬ ಅಭಿಪ್ರಾಯವನ್ನು ತಮ್ಮದೇ ಒಂದು ಮಾದರಿಯಾದ ಶೈಲಿಯಲ್ಲಿ ಸಭೆಗೆ ಅರಿಕೆ ಮಾಡಿದ್ದಾರೆ. ಇನ್ನೂ ಕೆಲವರು ಎರಡು ಕರ್ಣಾಟಕವಾಗಬೇಕೆಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಹಾಗೆ ಹೇಳುವುದರಲ್ಲೂ ಮೈಸೂರಿಗೆ ಕೆಲವು ಇತರ ಭಾಗಗಳು ಸೇರಬೇಕೆಂದು ಅವರೂ ಹೇಳಿದ್ದಾರೆ. ಒಟ್ಟಿನಲ್ಲಿ ವಿಸ್ತೃತ ಕರ್ಣಾಟಕವಾಗುವ ವಿಷಯದಲ್ಲಿ ಬಹುಮತ ಅಭಿಪ್ರಾಯವಿದೆಯೆನ್ನಬಹುದು. ನಾನಾದರೋ ಸುಮಾರು ಒಂದು ಕೋಟಿ ಪ್ರಜಾಸಂಖ್ಯೆಯಿರತಕ್ಕ ಈ ಸಂಸ್ಥಾನದ 10 ಜಿಲ್ಲೆಗಳಲ್ಲೂ ಪ್ರಜಾ ಸೇವಕನಾಗಿದ್ದು ಕಳೆದ 20 ವರ್ಷಗಳಿಂದಲೂ ಜನರ ಮನಸ್ಸನ್ನು ತಕ್ಕಮಟ್ಟಿಗೆ ತಿಳಿದುಕೊಂಡವನಾಗಿದ್ದೇನೆ. ಮುಖ್ಯಮಂತ್ರಿಗಳ ಜೊತೆಯಲ್ಲೂ ಅನೇಕ ಸಾರಿ ಪ್ರವಾಸ ಮಾಡಿದ್ದೇನೆ. ಮುಖ್ಯ ಮಂತ್ರಿಗಳು ಅಲ್ಲಲ್ಲಿ ಕೊಟ್ಟಿರತಕ್ಕ ಹೇಳಿಕೆಗಳನ್ನೂ, ಈ ಸಭೆಗೆ ಆಗಾಗ್ಗೆ ಕೊಟ್ಟಿರತಕ್ಕ ಭರವಸೆಗಳನ್ನೂ ಅರಿತವನಾಗಿದ್ದೇನೆ. ಮುಖ್ಯ ಮಂತ್ರಿಗಳೂ ಕೂಡ ವಿಶಾಲ ಕರ್ಣಾಟಕವಾಗತಕ್ಕ ವಿಚಾರಕ್ಕೆ, ವಿಶಾಲ ಮೈಸೂರಿನೊಳಗೆ ಹೆಚ್ಚು ಜನ ನಮ್ಮ ಬಾಂಧವರು ಸೇರಿ ತನ್ಮೂಲಕ ಮೈಸೂರಿನ ಭವಿಷ್ಯವನ್ನು ರೂಪಿಸತಕ್ಕ ವಿಚಾರದಲ್ಲಿ ಬಹಳ ದಿವಸಗಳಿಂದಲೂ ರಕ್ಷಣೆ ಕೊಟ್ಟುಕೊಂಡು ಬಂದಿದ್ದಾರೆ. ನಮ್ಮದು ಕಾಂಗ್ರೆಸ್ ಸರ್ಕಾರ. ಕಾಂಗ್ರೆಸ್ ಸರ್ಕಾರದಿಂದಲೇ ಇದು ಪರಿಪೋಷಿತವಾಗಿದೆ. ಫಜಲಾಲಿ ಸಮಿತಿಯವರು ಎಲ್ಲಾಕಡೆಯಲ್ಲೂ ಪ್ರವಾಸ ಮಾಡಿ ಇಲ್ಲಿರತಕ್ಕ ಮಾನ್ಯ ಮುಖಂಡರುಗಳ ಅಭಿಪ್ರಾಯವನ್ನೂ ಪಡೆದಿದ್ದಾರೆ. ಈ ಸಭೆಯಲ್ಲಿಯೂ ಭಾಷಣ ಮಾಡಿದವರಲ್ಲಿ ಬಹುಮಂದಿ ಜನರು ವಿಶಾಲ ಕರ್ಣಾಟಕವಾಗುವುದರಲ್ಲಿ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದಂತೆ ತೋರಲಿಲ್ಲ. ನಮ್ಮ ಜಿಲ್ಲೆಯವರಾಗಿ ಚುನಾಯಿತರಾಗಿ ಬಂದಂಥ ಮಾನ್ಯ ಸದಸ್ಯರಾದ ನರಸಿಂಹರೆಡ್ಡಿಯವರು, 60 ಜನ ಶಾಸನಸಭಾ ಸದಸ್ಯರು ಇದಕ್ಕೆ ಒಪ್ಪಿಗೆ ಕೊಟ್ಟಿಲ್ಲವೆಂದು ಹೇಳಿದರು. ಅವರಿಗೆ ಈ ಅಭಿಪ್ರಾಯವನ್ನು ಸೂಚಿಸಿದಂಥ 60 ಜನರು ಯಾರೋ ಗೊತ್ತಿಲ್ಲ. 60 ಜನರ ಪರವಾಗಿ ರುಜುಮಾಡಿರುವ ಶಾಸನಸಭಾಸದಸ್ಯರೂ ಇದ್ದಾರೆ. ಆ ವಿಚಾರದಲ್ಲಿ ವಿಷಾಂಶವೇನೇ ಇರಲಿ, ಅವರಿನ್ನೂ ಚಿಕ್ಕವಯಸ್ಸಿನವರು; ಜಾಣರು ಮತ್ತು ಬುದ್ಧಿವಂತರು. ನಮ್ಮ ಜಿಲ್ಲೆಯವರಾಗಿ ಒಳ್ಳೆಯ ರೈತ ಮನೆತನದವರು. ಅವರ ವಿಷಯದಲ್ಲಿ ನನಗೆ ಬಹಳ ಅಭಿಮಾನವಿದೆ. ಅಂಥವರೇಕೆ ಈ ರೀತಿ ಮಾತನಾಡಿದರೋ ನನಗೆ ಗೊತ್ತಿಲ್ಲ. ಅಂತೂ ಅವರೂ ಈ ವಿಷಯವನ್ನು ಪುಷ್ಟೀಕರಿಸುವಂತಾಗಿ ಅವರ ಮನಸ್ಸು ವಿಶಾಲವಾಗಿ ರಾಷ್ಟ್ರಾಭಿಮಾನದಿಂದ ಕೂಡಿ ರಾಷ್ಟ್ರವನ್ನು ಕಟ್ಟುವುದಕ್ಕೆ ಅನುವಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಮಿತ್ರರು ಹೇಳಿದಹಾಗೆ 60 ಜನ ಈ ಶಾಸನ ಸಭಾ ಸದಸ್ಯರ ಪರವಾಗಿ ರುಜು ಮಾಡಿದ್ದಾರೆಂಬುದು ಸುಳ್ಳು. ಕೆಲವುಜನ ಲೆಜಿಸ್ಲೇಟಿವ್ ಅಸೆಂಬ್ಲಿ ಸದಸ್ಯರು ಮತ್ತು ಕೆಲವುಜನ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರು ಆ ರೀತಿಯಾಗಿ ಮೆಮೊರಾಂಡಂ ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ.—ಪಶ್ಚಾತ್ ನಾನು ಹೇಳಿದಂತೆಯೂ ಇನ್ನೊಂದು ಮೆಮೊರಾಂಡಂ ಹೋಗಿದೆಯೆಂದು ತಿಳಿಸುತ್ತಾ, ಆ ವಿಷಯವನ್ನು ಅಲ್ಲಿಗೇ ಬಿಟ್ಟು ಸಭೆಯವರಿಗೆ ಇಷ್ಟುಮಾತ್ರ ಹೇಳಿ ನಾನು ಮುಕ್ತಾಯಗೊಳಿಸುತ್ತೇನೆ.

ನಮ್ಮ ಮೈಸೂರು ದೇಶ ಎರಡು ಕೋಟಿ ಪ್ರಜಾಸಂಖ್ಯೆಯುಳ್ಳಂಥ ವಿಶಾಲ ಮೈಸೂರಾಗಿ ನಮ್ಮ ದೇಶದ ಜನರಿಗೆ ಸುಖ ಸಂತೋಷವುಂಟಾಗಲಿ ಮತ್ತು ನಮ್ಮಗಳನ್ನು ನಂಬಿರತಕ್ಕ ನೆರೆ ಪ್ರಾಂತ್ಯಗಳವರು ನಮ್ಮೊಡನೆ ಸೇರಿ ಅವರ ಆಶೋತ್ತರಗಳು ಈಡೇರಲಿ ಮತ್ತು ನಮ್ಮ ಮಾನ್ಯ ಮುಖಂಡರುಗಳಿಗೆ ಒಳ್ಳೆಯ ಯಶಸ್ಸು ಬರಲಿ ಎಂದು ಹಾರೈಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ಅಧ್ಯಕ್ಷರೇ, ಈಗಾಗಲೇ ಹಲವು ದಿವಸಗಳಿಂದ ನಮ್ಮ ಮುಂದಿರತಕ್ಕ ಈ ಪ್ರಾಂತ್ಯ ಪುನರ್ವಿಂಗಡಣೆಯ ಸಮಸ್ಯೆಯ ವಿಚಾರದಲ್ಲಿ ಬಹಳ ದೀರ್ಘವಾದ ಭಾಷಣಗಳು ನಡೆದಿವೆ. ನಾನಿನ್ನು ಹೆಚ್ಚು ಕಾಲಾವಕಾಶ ತೆಗೆದುಕೊಳ್ಳದೆ ಐದು ನಿಮಿಷದಲ್ಲಿ ನನ್ನ ಅಭಿಪ್ರಾಯವನ್ನು ಹೇಳಿ ಮುಗಿಸಬೇಕೆಂದಿದ್ದೇನೆ.

ಈ ಪ್ರಶ್ನೆ ನಾನಾ ಕ್ಷೇತ್ರಗಳಲ್ಲಿ ಹಲವಾರು ವರ್ಷಗಳಿಂದಲೂ ಚರ್ಚಿತವಾಗಿ ಬಂದಿದೆ. ಈ ಅಸೆಂಬ್ಲಿಯ ಮುಂದೇನೋ ಇದು ಬಂದಿರುವುದು ಇದೇ ಪ್ರಥಮತಃ. ಇದಕ್ಕೆ ಕಾರಣ ನಾವಲ್ಲ: ಅಥವಾ ಮೈಸೂರು ಜನಗಳಲ್ಲ. ಕೇಂದ್ರ ಸರ್ಕಾರದವರು ಸ್ಟೇಟ್ಸ್ ರಿ-ಆರ್ಗನೈಸೇಷನ್ ಕಮಿಷನ್ ಎಂಬುದನ್ನು ಏರ್ಪಾಡು

ಮಾಡಿದ ಮೇಲೆ, ಬಹಳ ದಿವಸಗಳಿಂದ ಕೇಳಿರತಕ್ಕ ಈ ಪ್ರಶ್ನೆಯನ್ನು ಬಿಡಿಸುವುದಕ್ಕೆ ಸಕಾಲ ಬಂದಿದೆಯೆಂದು ಹೇಳಿ ಕೇಂದ್ರ ಸರ್ಕಾರದವರು ಕಾರ್ಯಕ್ರಮ ಕೈಕೊಂಡಾಗ, ಈ ಬಗ್ಗೆ ನಮ್ಮ ಅಭಿಪ್ರಾಯವನ್ನು ತಿಳಿಸುವುದು ಸೂಕ್ತವೆಂದು ಭಾವಿಸಿ ಈ ಪ್ರಶ್ನೆಯನ್ನು ಅಸೆಂಬ್ಲಿಯ ಮುಂದೆ ತಂದದ್ದಾಗಿದೆ.

ಈ ಸಂಬಂಧದಲ್ಲಿ ನಾನು ಕೇವಲ ವ್ಯಾಪಾರ ದೃಷ್ಟಿಯಿಂದ ಭಾಷಣ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯವಾಗಿ States Re-organization ಆಗಬೇಕೆನ್ನುವಾಗ ಎಷ್ಟುಮಟ್ಟಿಗೆ ಆಗಬೇಕು, ಪ್ರಾಂತ್ಯಗಳು ಮೈಸೂರಿನಷ್ಟೇ ಇರಬೇಕೇ ಕೊಡಗಿನಷ್ಟಿರಬೇಕೇ ಎಂಬುದನ್ನು ಯೋಚನೆ ಮಾಡುವುದಾದರೆ, ಇಡೀ ಭಾರತ ದೃಷ್ಟಿಯಿಂದ ಈಗಿರುವಂತೆ 'ಎ' ಸ್ಟೇಟುಗಳು, 'ಬಿ' ಸ್ಟೇಟುಗಳು ಮತ್ತು 'ಸಿ' ಸ್ಟೇಟುಗಳು ಇರುವುದು ಸೂಕ್ತವಲ್ಲ. ಒಂದು ಕಡೆ ಅತಿ ವಿಶಾಲವಾದ ಒಂದು ಪ್ರಾಂತ್ಯವಿರುವುದು ಇನ್ನೊಂದು ಕಡೆ ಅತಿ ಚಿಕ್ಕದಾದ ಪ್ರಾಂತ್ಯವಿರುವುದು. ಸೂಕ್ತವಲ್ಲ ಎಂದು ಹೇಳಬೇಕಾಗಿದೆ.

8 P.M.

ನಾವು ಈ ಸಂದರ್ಭದಲ್ಲಿ ಈ ದೇಶಗಳ ಪುನರ್ವಿಂಗಡಣೆ ಯಾವ ಆಧಾರಗಳ ಮೇಲೆ ನಡೆಯಬೇಕು ; ಎಷ್ಟರ ಮಟ್ಟಿಗೆ ದೇಶ ದೊಡ್ಡದಾದರೆ ಅನುಕೂಲವಾಗಿರುತ್ತದೆ ; ಯಾವ ಯಾವ ಭಾಗಗಳು ಸೇರಿದರೆ ಅನುಕೂಲವಾಗಿರುತ್ತದೆ ಎನ್ನತಕ್ಕಂಥ ವಿಚಾರಗಳನ್ನೆಲ್ಲಾ ನಾವೀಗ ಚರ್ಚೆ ಮಾಡಿದ್ದೇವೆ. ಈ ಸಂಬಂಧವಾಗಿ ನಮ್ಮ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರು ಒಪ್ಪಿಸಿದ ವರದಿಯ ಮೇಲೂ ಕೂಡ ನಾನೀಗ ಚರ್ಚೆ ಮಾಡಿದ್ದೇನೆ. ಆದರೆ ಈಗ ಮಾತನಾಡಿರತಕ್ಕವರಲ್ಲಿ ಕೆಲವರು ಮಾತ್ರ ದೇಶಗಳನ್ನು ಭಾಷಾವಾರು ಆಧಾರದ ಮೇಲೆ ಪುನರ್ವಿಂಗಡಣೆ ಮಾಡಿದರೆ ದೇಶಕ್ಕೆ ಒಂದು ಧಕ್ಕೆ ಬರುತ್ತದೆಯೆಂದು ಹೇಳಿದರು. ಹಲವಾರು ಭಾಷೆಗಳನ್ನಾಡತಕ್ಕಂಥ ಜನರುಗಳು ಒಂದೇ ಕಡೆ ಇರುವುದು ಒಂದು ಅನಾಮಲಿಯಾಗಿದೆ ; ಒಂದೊಂದು ಭಾಷೆಯ ಜನರನ್ನು ಒಂದೊಂದು ಗುಂಪನ್ನಾಗಿ ಮಾಡಿದರೆ ನಮ್ಮ ದೇಶದ ಒಗ್ಗಟ್ಟು ಉಂಟಾಗುವಂತೆ ಬೇರೆ ಮತ್ತೆ ಯಾವ ದೇಶದಲ್ಲೂ ಉಂಟಾಗಲಾರದೆಂದು ನಮ್ಮ ನೆಹರೂ ಅವರೇ ಹೇಳಿದ್ದಾರೆ. ಅಂಥ ಮಹಾ ಮಹಾ ನಾಯಕರುಗಳೆಲ್ಲಾ ಆ ರೀತಿ ಹೇಳಿರುವಾಗ ಒಂದು ಭಾಷೆಯನ್ನಾಡತಕ್ಕಂಥ ಜನಗಳನ್ನೆಲ್ಲಾ ಒಂದು ಕಡೆ ಸೇರಿಸಿದರೆ ಭಾರತದ ಆಡಳಿತಕ್ಕೆ ಧಕ್ಕೆ ಬರುತ್ತದೆಂದು ಹೇಳುವುದರಲ್ಲಿ ಅರ್ಥವೇ ಇಲ್ಲ. ಈ ದೇಶಗಳ ಪುನರ್ವಿಂಗಡಣೆಯಾದರೆ ನಮ್ಮ ಪುರೋಭಿವೃದ್ಧಿಗೆ ಧಕ್ಕೆ ಬರುತ್ತದೆಯೆಂದು ಕೆಲವರು ಹೇಳಿದ್ದಾರೆ. ಇದರಲ್ಲೂ ಕೂಡ ಅಂಥ ತಿರುಳೇನೂ ಇಲ್ಲ. ಏತಕ್ಕೆಂದರೆ ಈ ದಿವಸ ಎಲ್ಲ ಪ್ರಾಂತ್ಯ ಸರ್ಕಾರಗಳೂ ಪಾಂಚವಾರ್ಷಿಕ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುತ್ತಿರುವಂಥ ಕಾಲದಲ್ಲಿ ನಾವು ಆರ್ಥಿಕಾಭಿವೃದ್ಧಿಯಲ್ಲಿ ಮುಂದುವರಿದಿದ್ದೇವೆ, ಅವರೆಲ್ಲಾ ಹಿಂದೆ ಬಿದ್ದಿದ್ದಾರೆ ಎಂದು ಹೇಳುವುದಕ್ಕೆ ಅವಕಾಶವೇ ಇಲ್ಲ. ಈ ದಿವಸ ಹಾಗೆ ಹಿಂದುಳಿದಿರುವ ಪ್ರದೇಶಗಳನ್ನೆಲ್ಲಾ ಮುಂದಕ್ಕೆ ತರಬೇಕೆಂತಲೇ ಈ ಪಾಂಚವಾರ್ಷಿಕ ಯೋಜನೆಯನ್ನು ಕೈಗೊಳ್ಳಲಾಗಿದೆ. ಆ ಪ್ರದೇಶದಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ ; ಆಸ್ಪತ್ರೆಗಳಿಲ್ಲ ಎಂಬುದಾಗಿ ಕೆಲವರು ಒಂದು ಕುಂಟುನೆಪವನ್ನೆತ್ತಿ ಮೈಸೂರು ದೇಶ ವಿಸ್ತಾರವಾಗುವುದು ಬೇಡ ಎಂದು ಹೇಳಿದ್ದಾರೆ. ಹಾಗೆ ಆ ಪ್ರದೇಶದಲ್ಲಿ ಈ ದಿವಸ ಸ್ಕೂಲುಗಳ ಸಂಖ್ಯೆಯಲ್ಲಿ ಹಿಂದೆ ಬಿದ್ದಿದ್ದರೂ, ಆ ಪ್ರದೇಶದಲ್ಲಿರತಕ್ಕಂಥ ಜನರು ವಿದ್ಯೆಯಲ್ಲಿ ನಮಗಿಂತಲೂ ಮುಂದುವರಿದಿದ್ದಾರೆ. ಅವರೇನೂ ಈ ವಿದ್ಯೆಯಲ್ಲಿ ಹಿಂದೆ ಬಿದ್ದಿಲ್ಲ. ಅವರೂ ಸಹ ನಮ್ಮ ಹಾಗೆಯೇ ವಿದ್ಯಾಭಿವೃದ್ಧಿಯಲ್ಲಿ ಮುಂದುವರಿಯುತ್ತಾ ಬಂದಿದ್ದಾರೆ. ಈಗಾಗಲೇ ಅವರು ಖಾಸಗಿಯಾಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿಕೊಂಡು ವಿದ್ಯಾಭಿವೃದ್ಧಿಯಲ್ಲೂ ವ ತ್ತು ಖಾಸಗಿಯಾಗಿ ಬ್ಯಾಂಕುಗಳನ್ನು ಸ್ಥಾಪನೆ ಮಾಡಿಕೊಂಡು ಆರ್ಥಿಕಾಭಿವೃದ್ಧಿಯಲ್ಲೂ ನಮಗಿಂತಲೂ ಅಧಿಕವಾಗಿ ಮುಂದುವರಿದಿದ್ದಾರೆ. ಈ ದಿವಸ ತಾವು ಹೈದರಾಬಾದ್ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಸಹಕಾರ ತತ್ವಗಳಲ್ಲಿ ಜನರು ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆಂಬುದನ್ನು ಗಮನವಿಟ್ಟು ನೋಡಬೇಕಾಗಿದೆ. ಅಲ್ಲಿ ಸಹಕಾರ ಬೆಳವಣಿಗೆ ದಿನೇದಿನೇ ಅಭಿವೃದ್ಧಿ ಹೊಂದುತ್ತಿದೆ. ಖಾಸಗೀ ಜನರು ಅಧಿಕ ಸಂಖ್ಯೆಯಲ್ಲಿ ಹಣವನ್ನು ಡಿಪಾಜಿಟ್ ಮಾಡಲು ಬಹಳ ಕಾತುರತೆಯಿಂದ ಮುಂದೆ ಬರುತ್ತಿದ್ದಾರೆ. ನಮ್ಮಲ್ಲಾದರೋ ಸಾಲ ಕೇಳತಕ್ಕಂಥ ಜನರು ಅಧಿಕವಾಗಿ ಬರುತ್ತಿದ್ದಾರೆ. ಹಣಕೊಡತಕ್ಕಂಥವರು ಬಹಳ ವಿರಳ. ಆ ಜನರಲ್ಲಿ ಈ ದಿವಸ ಎಷ್ಟರ ಮಟ್ಟಿನ ಸಹಕಾರ ಭಾವನೆಗಳು ಬೆಳೆಯುತ್ತಿವೆಯೆಂಬುದನ್ನು ನೋಡಿದರೆ ನಮಗೆಲ್ಲಾ ಅದು ಬಹಳ ಆನಂದದಾಯಕವಾಗಿರುತ್ತದೆ. ಹೀಗೆ ಈ ದಿವಸ ನಾಲ್ಕಾರು ವಿಚಾರಗಳಲ್ಲಿ ನಾವು ಮುಂದುವರಿದಿದ್ದರೆ ಅವರೂ ಕೂಡ ನಾಲ್ಕಾರು ವಿಚಾರಗಳಲ್ಲಿ ನಮಗಿಂತಲೂ ಮುಂದೆ ಸಾಗಿದ್ದಾರೆ. ಅಷ್ಟೇ ಹೊರತು ಇದರಲ್ಲಿ ಮುಂದುವರಿದವರೂ ಇಲ್ಲ–ಹಿಂದುಳಿದಿರತಕ್ಕವರೂ ಇಲ್ಲ. ಆದರೆ ಶೇಷಾದ್ರಿ ಸಮಿತಿಯವರು ತಮ್ಮ ವರದಿಯಲ್ಲಿ ರಾಜ್ಯಗಳನ್ನು ಭಾಷಾವಾರು ತತ್ವದ ಮೇಲೆ ವಿಭಜನೆ ಮಾಡಿದರೆ ಅನಾಹುತಗಳಾಗುತ್ತವೆಂಬ ಅರ್ಥ ಬರುವಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಭಾಷಾವಾರು ಪ್ರಾಂತ್ಯ ರಚನೆಯಾದರೆ ಅನ್ಯ ಭಾಷೆಯ ಜನರು ಅಕ್ಕಪಕ್ಕದ ಪ್ರಾಂತ್ಯಗಳಿಗೆ ವಲಸೆ ಹೊರಡಬೇಕಾಗುತ್ತದೆಂದು ಹೇಳಿದ್ದಾರೆ. ಆದರೆ ಇಂಥ ವಿಚಿತ್ರ ಪ್ರಶ್ನೆಯೇ ಬರುವುದಿಲ್ಲ. ಆ ಬಳ್ಳಾರಿ ನಮಗೆ ಬಂದು ಸೇರಿದಾಗ ಇಂಥ ವಿಚಿತ್ರಗಳಾವವೂ ನಡೆಯಲಿಲ್ಲ. ಮೈಸೂರಿನ ಸುತ್ತಮುತ್ತಲೂ ಭಾಷಾವಾರು ಪ್ರಾಂತ್ಯಗಳು ಏರ್ಪಟ್ಟಾಗ ಅಲ್ಲಿ ಸುತ್ತಮುತ್ತಲೂ ಇರತಕ್ಕಂಥ ನಮ್ಮ ಕನ್ನಡ ಬಂಧುಗಳೆಲ್ಲಾ ನಮ್ಮ ಮೈಸೂರಿನ ಆಡಳಿತಕ್ಕೆ ಸೇರಿಕೊಳ್ಳುತ್ತೇವೆ, ನಾವೆಲ್ಲರೂ ಮೈಸೂರಿನವರೊಂದಿಗೆ ಸುಖದಿಂದ ಬಾಳುತ್ತೇವೆಂದು ಇಷ್ಟಪಟ್ಟಿದ್ದಕ್ಕಾಗಿ ಕೇಂದ್ರ ಸರ್ಕಾರದವರು ಇವರು ಕೇಳುತ್ತಿರುವುದು ನ್ಯಾಯವಾಗಿದೆ ಎಂದು ಅವರು ಮನಗಂಡು ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವಾಗ ನಾವಾದರೂ ಅದಕ್ಕೆ ಏಕೆ ಹೀಗೆಲ್ಲಾ ಅಡ್ಡಿ ಬರಬೇಕು ? ಈ ದಿವಸ ಆ ಕೊಡಗು ದೇಶ ಎಷ್ಟಿದೆಯೋ ಅದು ಅಷ್ಟೇ ಇರಲಿ ; ನಾವೂ ಕೂಡ ಇಲ್ಲಿಯತನಕ ಇದ್ದಹಾಗೆ ಇನ್ನು ಮುಂದಕ್ಕೂ ಇರೋಣ ; ಹಿಂದುಳಿದವರೆಲ್ಲಾ ಹಾಗೆಯೇ ಹಿಂದುಳಿಯಲಿ, ಮುಂದಕ್ಕೆ ಬಂದವರೆಲ್ಲಾ ಮತ್ತಷ್ಟು ಮುಂದಕ್ಕೆ ಬರೋಣ ಎಂದು ಮಾಡಿರತಕ್ಕಂಥ ವಾದ ನನ್ನ ಅಭಿಪ್ರಾಯದಲ್ಲಿ ಅಷ್ಟು ಸರಿಯಾದದ್ದಲ್ಲವೆಂದು ತೋರುತ್ತದೆ. ಈ ದಿವಸ ನಾವು ಈ ರೀತಿ ಹೇಳುವುದಕ್ಕೆ ಹೊರಟರೆ ಈ ನಮ್ಮ ವಾದವು ಕೇಂದ್ರ ಸರ್ಕಾರದವರ ಅಭಿಪ್ರಾಯಕ್ಕೆ ತುಂಬ ವಿರೋಧ

(ಶ್ರೀ ಜಿ. ಬಸಪ್ಪ)

ವಾಗುತ್ತದೆ. ಒಂದು ದೇಶದ ಸಂಸ್ಕೃತಿ ಜನರ ಅಭಿವೃದ್ಧಿ, ದೇಶದ ಏಳಿಗೆ, ಇತ್ಯಾದಿ ಪ್ರಗತಿಗಳನ್ನು ನಾವು ಸಾಧಿಸಬೇಕಾಗಿದ್ದರೆ ನಮಗೆ ಭಾಷೆಯ ಅಗತ್ಯ ಅಧಿಕವಾಗಿರುತ್ತದೆ. ಈ ದಿವಸವೂ ಸಹ ಇಡೀ ಕನ್ನಡ ಭಾಷೆಯನ್ನಾಡತಕ್ಕಂಥ ಜನರೆಲ್ಲಾ ಒಟ್ಟು ಗೂಡಿದರೆ, ಹಿಂದಿದ್ದಂಥ ವಿಜಯನಗರದ ವೈಭವ ವೇನಿತ್ತೋ ಅಂಥ ಒಂದು ವೈಭವದ ಕರ್ಣಾಟಕ ಸಾಮ್ರಾಜ್ಯ ಆಗುವುದರಲ್ಲಿ ಯಾರಿಗೂ ಸಂದೇಹವಿಲ್ಲ. ಈ ಅಖಂಡ ಕರ್ಣಾಟಕದಲ್ಲಿ ಆ ಪ್ರಕೃತಿ ಮಾತೆಯು ಒದಗಿಸಿರುವಂಥ ಸಂಪತ್ತು ಸಾಧನಗಳನ್ನು ನಾವು ಸದುಪಯೋಗ ಪಡಿಸಿಕೊಂಡಲ್ಲಿ ಆ ಹಿಂದಿನ ವೈಭವ ಗಳೆಲ್ಲಾ ಮತ್ತೆ ನಮ್ಮ ಮುಂದೆ ಬಹು ಬೇಗ ಬರುತ್ತ ವೆಂದು ಹೇಳುತ್ತೇನೆ. ಈ ಅಖಂಡ ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ದೇಶಾದ್ಯಂತವೂ ಎಲ್ಲಾ ಜನರ ಸಂಪೂರ್ಣ ಬೆಂಬಲವಿದೆಯೆಂದು ಹೇಳಿ ನಾನು ನನ್ನ ಮಾತುಗಳನ್ನು ಪೂರೈಸುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ವಿರೋಧಿಸಿ ಮಾತ ನಾಡಬೇಕೆಂಬ ಜನರು ಬಹಳವಾಗಿದ್ದಾರೆ. ಅವರೆಲ್ಲಾ ಈಗ ಮುಖ್ಯಮಂತ್ರಿಗಳಿಗೆ ಬಿನ್ನವತ್ತಳೆಯನ್ನು ಕೊಡು ಪುದಕ್ಕಾಗಿ ಹೋಗಿದ್ದಾರೆ. . . .

ಅ ಧ್ಯ ಕ್ಷ ರು.—ಈ ವಿಷಯವಾಗಿ ಚರ್ಚೆಯು ಸುಮಾರು ಒಂದು ತಿಂಗಳಿನಿಂದಲೂ ನಡೆಯುತ್ತಲೇ ಇದೆ. ಈ ದಿವಸ ಇದನ್ನು ಮುಕ್ತಾಯ ಮಾಡಲೇ ಬೇಕಾಗಿದೆ. ಇದಕ್ಕೆ ನಾನೇನೂ ಮಾಡಲು ಸಾಧ್ಯ ವಿಲ್ಲ.

ಶ್ರೀ ಶಿವನಂಜೇಗೌಡ.—ಇನ್ನೊಂದು ಸರ್ತಿ ಕರೆ ದಾಗ ಹೇಳಿಕೊಳ್ಳೋಣವೇ ?

ಅಧ್ಯಕ್ಷರು.—ಈ ಚರ್ಚೆ ಇಂದಿಗೇ ಮುಕ್ತಾಯ ವಾಗುತ್ತದೆ.

ಶ್ರೀ ಸಿ. ಹೆಚ್. ಲಿಂಗದೇವರು (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೇ, ಈಗ್ಗೆ ಕೆಲವು ದಿವಸ ಗಳಿಂದಲೂ ನಮ್ಮ ಮುಂದೆ ಚರ್ಚೆಯಾಗುತ್ತಲಿರುವ ಈ ಶೇಷಾದ್ರಿಸಮಿತಿಯ ವರದಿಮೇಲೆ ಬಹಳ ಜನ ಸದಸ್ಯರು ಪರವಾಗಿಯೂ ಕೆಲವರು ವಿರೋಧವಾಗಿಯೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ಸಭೆಯ ಮುಂದೆ ಎಂಥ ವಿಚಾರಗಳೇ ಆಗಲಿ ಅವು ಚರ್ಚೆಗೆ ಬಂದಾಗ ಅವುಗಳ ಬಗ್ಗೆ ನಾವುಗಳೆಂದೂ ಒಂದು ಖಚಿತವಾದಂಥ ಒಮ್ಮತ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಎಂಥ ವಿಚಾರಗಳಾದರೂ ಅವುಗಳ ಬಗ್ಗೆ ಕೆಲವರ ಭಿನ್ನಾಭಿಪ್ರಾಯವಿದ್ದೇ ಇರುತ್ತದೆ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ, ನಮ್ಮ ದೇಶವಿಶಾಲವಾದರೆ ನಮಗೆಲ್ಲಾ ಇಲ್ಲಿ ಬಹಳ ಕೊರತೆ ಯುಂಟಾಗುತ್ತದೆ. ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿ ಕರ್ಣಾಟಕ ಪ್ರಾಂತ್ಯ ನಿರ್ಮಾಣ ವಾಗುವುದು ಬೇಡ ಎಂದು ಹೇಳಿದ್ದಾರೆ. ಆದರೆ ಈ ದಿವಸ ನಮ್ಮ ಈ ಮೈಸೂರು ಸಂಸ್ಥಾನ ಕೆಲವು ವಿಷಯಗಳಲ್ಲಿ ಒಂದು ಕೊರತೆಯ ಪ್ರದೇಶವಾಗಿಲ್ಲವೇ ಎಂದು ನಾನು ಮೊದಲು ಅವರಿಗೆಲ್ಲ ಒಂದು ಪ್ರಶ್ನೆ ಹಾಕಬೇಕಾಗಿದೆ. ಮೈಸೂರು ರಾಜ್ಯವೂ ಕೂಡ ಬಹಳ ವಿಚಾರಗಳಲ್ಲಿ ಕೊರತೆಯನ್ನು ಹೊಂದಿದೆ. ಆದಕಾರಣ ನಾವು ಈ ದಿವಸ ನಮ್ಮ ಮುಂದಿರತಕ್ಕ ಪ್ರಶ್ನೆಯನ್ನ ು ಬಗೆ ಹರಿಸಬೇಕಾಗಿದ್ದರೆ ನಾವು ಇಲ್ಲಿಯ ವರೆಗೆ ಎಷ್ಟು ಹಣವನ್ನು ಖರ್ಚುಮಾಡಿದ್ದೇವೆ ಎನ್ನು ವುದು ಮುಖ್ಯವಾದ ಅಂಶವಲ್ಲ. ನಾವು ಈ ದಿವಸ ಎಷ್ಟರಮಟ್ಟಿನ ಒಂದು ಸಹನೆ ಸಹಕಾರ ಭಾವನೆ ಯಿಂದ ಜನರೆಲ್ಲರೂ ಬಂದು ನಮ್ಮೊಡನೆ ಸೇರಲಿ ಎಂದು ಹೇಳುತ್ತೇವೋ ಅದಕ್ಕೆ ಅವಶ್ಯಕವಾದಂಥ ಒಂದು ಒಳ್ಳೆಯ ಉದಾರ ಭಾವನೆ ನಮ್ಮಲ್ಲಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ನಾವೀಗ ನೋಡಬೇಕಾಗಿದೆ. ಆದುದರಿಂದ ಈ ದಿವಸ ನಾವು ನಮ್ಮ ಮುಂದೆ ಬಂದಿರ ತಕ್ಕಂಥ ವಿಷಯದಲ್ಲಿ ಬಹಳ ಉದಾರ ಭಾವನೆ ಯಿಂದ ನೋಡತಕ್ಕದ್ದಾಗಿದೆಯೇ ಹೊರತು ಸಂಕುಚಿತ ಮನೋಭಾವನೆಯಿಂದ ನೋಡತಕ್ಕದ್ದಾಗಿಲ್ಲವೆಂದು ನಾನು ನನ್ನ ಸ್ನೇಹಿತರಿಗೆ ತಿಳಿಸಲಿಚ್ಛಿಸುತ್ತೇನೆ. ಮುಖ್ಯವಾಗಿ ಕರ್ಣಾಟಕ ಪ್ರಾಂತ್ಯವಾಗಲೇಬೇಕು. ಈಗೀಗ ಈ ನಮ್ಮ ಕನ್ನಡ ಭಾಷೆಗೆ ಒಂದು ಪ್ರಾಮು ಖ್ಯತೆ ದೊರೆಯುತ್ತಿದೆ. ಹಿಂದೆ ನಮ್ಮ ದೇಶವನ್ನು ಹರಿದು ಹಂಚಿದಾಗ ನಮ್ಮ ಕನ್ನಡ ಬಂಧುಗಳು ಯಾರಾರು ಹೊರಗಡೆಗೆ ವಿಧಿಯಿಲ್ಲದೆ ಹೋದರೋ ಅವರೆಲ್ಲರಿಗೂ ಈ ದಿವಸ ತುಂಬ ಅನಾನುಕೂಲ ಉಂಟಾಗುವಂಥ ಪರಿಸ್ಥಿತಿ ಬಂದೊದಗಿದೆ. ನಮ್ಮ ಇಡೀ ಇಂಡಿಯಾ ದೇಶದಲ್ಲಿ ತೀರಾ ಕೆಳಮಟ್ಟದಲ್ಲಿ ತಕ್ಕದ್ದು ಎಂದರೆ ಈ ನಮ್ಮ ಕರ್ಣಾಟಕದೇಶ. ಆದ ಕಾರಣ ನಾವೆಲ್ಲರೂ ಈ ದಿವಸ ಏಕಮನಸ್ಸಿನಿಂದ ಅಖಂಡ ಕರ್ಣಾಟಕ ರಾಜ್ಯವನ್ನು ಸ್ಥಾಪಿಸಿದರೆ ಮುಂದಕ್ಕೆ ಈ ಕರ್ಣಾಟಕದ ಭವಿಷ್ಯ ಬಹಳ ಉಜ್ವಲ ವಾಗಿರುತ್ತದೆಂಬುದೇ ನನ್ನ ಖಚಿತವಾದಂಥ ಅಭಿ ಪ್ರಾಯ. ಇದು ಕೂಡಲೆ ನಿರ್ಮಾಣವಾಗಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Does the Minister wish to reply ?

Dr. R. NAGAN GOWDA (Minister for Agriculture).—There is no need for reply except to say that the object with which this Report was placed for consideration before the House has been fully achieved. More than half the members have spoken on it and they have evinced great interest in the subject and also considerable pains they have taken to get at the figures and then place them before the House. I only wish to thank the members for the interest they have taken in this discussion.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾವು ಗಳೆಲ್ಲರೂ ಇಲ್ಲಿಯವರೆಗೆ ಈ ಅಖಂಡ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ ನಮ್ಮನಮ್ಮ ಅಭಿ ಪ್ರಾಯಗಳನ್ನು ವ್ಯಕ್ತಪಡಿಸಿದ್ದೇವೆ. ತಾವು ನಮ್ಮೆಲ್ಲರ ಅಭಿಪ್ರಾಯಗಳನ್ನು ಯಾವ ರೀತಿಯಾಗಿ ಆ ಕೇಂದ್ರ ಸರ್ಕಾರದವರು ನೇಮಿಸಿರತಕ್ಕಂಥ ಹೈಪವರ್ ಕಮಿ ಷನ್‌ಗೆ ಕಳುಹಿಸಿಕೊಡುತ್ತೀರೆಂಬ ಬಗ್ಗೆ ಒಂದು ಹೇಳಿಕೆ ಯನ್ನು ಸರ್ಕಾರದವರು ಕೊಟ್ಟಿದ್ದರೆ. ಬಹಳ ಅನುಕೂಲವಾಗಿತ್ತೆಂದು ನಾನು ಭಾವಿಸಿರುತ್ತೇನೆ. ಈಗಾಗಲೇ ನಾನು ಮಾನ್ಯ ಅಧ್ಯಕ್ಷರಲ್ಲಿ ಅರಿಕೆಮಾಡಿ ಕೊಂಡಿರುವ ಹಾಗೆ, ಭಾಷಾವಾರು ಪ್ರಾಂತ್ಯಗಳ ರಚನೆಯ ಸಂಬಂಧವಾಗಿ ಇಲ್ಲಿಯವರೆಗೂ ಈ ಸಭೆ

ಯಲ್ಲಿ ನಡೆದಿರತಕ್ಕಂಥ ಚರ್ಚೆಗಳನ್ನೆಲ್ಲಾ ಒಟ್ಟಾಗಿ ಒಂದೇ ಪುಸ್ತಕದಲ್ಲಿ ಬರುವಂತೆ ಅಚ್ಚುಹಾಕಿಸಿ ಆ ಅಚ್ಚುಹಾಕಿಸಿದ ಪ್ರತಿಯನ್ನೇ ಆ ಫಜಲಾಲಿ ಸಮಿತಿಗೂ ಕಳುಹಿಸಿದರೆ ಚೆನ್ನಾಗಿರುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಈ ಒಂದು ಸಲಹೆ ಮಾಡುತ್ತೇನೆ. ಮತ್ತು ಈ ಸಭೆಯ ಮಾನ್ಯಸದಸ್ಯರೆಲ್ಲರಿಗೂ ಈ ಒಟ್ಟು ಚರ್ಚೆಯ ಒಂದೊಂದು ಪ್ರತಿಯನ್ನೂ ಒದಗಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—It is left to the Government. Now the House stands adjourned *sine die.*

The House adjourned sine die *at Twenty-five Minutes past Eight of the Clock.*

WD 4508—GPB—550—10-10-55